ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ

# ಅವಿದ್ಯೆ ಎಂದರೆ?

ಬ್ರಹ್ಮರ್ಷಿ ತತ್ವದರ್ಶಿ ರಾಜ್ಯಲಕ್ಷ್ಮಿ



ಅನುವಾದ : ಉಮಾಲೋಕೇಶ್

ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದದೊಂದಿಗೆ

# ಅವಿದ್ಯೆ ಎಂದರೆ?

ಬ್ರಹ್ಮವಿದ್ವರಿಷ್ಠ  ತಟವರ್ತಿ ರಾಜ್ಯಲಕ್ಷ್ಮಿ

ಕನ್ನಡ ಅನುವಾದ : **ಉಮಾ ಲೋಕೇಶ**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ರಾಮನಗರ ಬೆಂಗಳೂರು

**Avidya Endarenu?**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689**

| | | |
|---|---|---|
| ಮೊದಲನೇ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 50/– |
| ಪುಟಗಳು | : | ii+54= 56 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಅವಿದ್ಯೆ ಎಂದರೆ?

ಧ್ಯಾನ ಸಾಧನೆ ಏಕೆ ಮಾಡಬೇಕು? ಜ್ಞಾನವನ್ನು ಏಕೆ ಹೆಚ್ಚಿಸಿಕೊಳ್ಳಬೇಕು? ಎನ್ನುವ ವಿಷಯವನ್ನು ಆಲೋಚಿಸಿದರೆ.... ಪ್ರತಿ ಮಾನವರಿಗೆ ಸಮಸ್ಯೆಗಳು, ತೊಂದರೆಗಳು, ಕಷ್ಟಗಳು ಏಕೆ ಬರುತ್ತಿವೆಯೋ ಅರ್ಥಮಾಡಿಕೊಳ್ಳಲು ಮುಖ್ಯವಾಗಿ ಅವಿದ್ಯೆ, ಅಜ್ಞಾನವೇ ಅದಕ್ಕೆ ಕಾರಣ ಎಂದು ತಿಳಿದುಕೊಳ್ಳಬೇಕು.

ಶಂಕರಾಚಾರ್ಯರು ಜ್ಞಾನವಿಲ್ಲದಿರುವುದು ಅಜ್ಞಾನ ಎನ್ನುತ್ತಾರೆ. ಅವಿದ್ಯೆ ಎಂದರೆ ಸರಿಯಲ್ಲದ ಜ್ಞಾನ. ಅಂದರೆ ಒಂದು ವಿಷಯವನ್ನು ಬೇರೆ ವಿಧವಾಗಿ ಅರ್ಥ ಮಾಡಿಕೊಳ್ಳುವುದು ಎಂದಿದ್ದಾರೆ. ಅಜ್ಞಾನ, ಅವಿದ್ಯೆ ಎಂದರೆ ಒಂದೇ ಅಲ್ಲ ಬೇರೆ ಬೇರೆ...

ಅವಿದ್ಯೆ ಎಂದರೆ ಸರಿಯಲ್ಲದ ಜ್ಞಾನ ಅಂದರೆ...

ಎ) ಇರುವುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಇರುವುದು.

ಬಿ) ಅಪಾರ್ಥ ಮಾಡಿಕೊಳ್ಳುವುದು

ಸರಿಯಾದ ಜ್ಞಾನವನ್ನು ಸಮ್ಯಕ್ ಜ್ಞಾನ ಎನ್ನುತ್ತಾರೆ. ಸರಿಯಾದ ಜ್ಞಾನ ಏಕಿಲ್ಲ? ಎಂದರೆ ಅವಿದ್ಯೆ, ಅಜ್ಞಾನದಿಂದ...ಹಾಗಾಗಿ ಮಾನವನು ಯಾವಾಗಲೂ ದುಃಖದಲ್ಲಿಯೇ ಇರುತ್ತಾನೆ.

ಅವಿದ್ಯೆ ಎಂದರೆ ಏನಾದರೂ ಮಾತನಾಡಿದರೆ, ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ, ಅಪಾರ್ಥ ಮಾಡಿಕೊಂಡಾಗ ದುಃಖ ಬರುತ್ತದೆ. ಚಿಕ್ಕಂದಿನಿಂದ ತಂದೆ ತಾಯಿಯರು ಮಕ್ಕಳ ಕ್ಷೇಮವನ್ನು ಕೋರಿ ಕೆಲವು ವಿಷಯಗಳನ್ನು ಹೇಳುತ್ತಾರೆ. ಹಾಗೆ ಹೇಳಿದಾಗ ಅದು ಇಷ್ಟವಾಗದೆ "ನಮ್ಮ ತಾಯಿ ಯಾವಾಗಲೂ ಇಷ್ಟೇ... ನಮ್ಮ ತಂದೆ ಯಾವಾಗಲೂ ಇಷ್ಟೇ... ನಾನು ಕೇಳಿದ್ದನ್ನು ಮಾಡುವುದಿಲ್ಲ. ನಾನು ಕೇಳಿರುವುದನ್ನು ತಂದು ಕೊಡುವುದಿಲ್ಲ ಎನ್ನುತ್ತಾರೆ.

ಉದಾಹರಣೆಗೆ ಮಕ್ಕಳಿಗೆ ಚಾಕ್ಲೇಟ್ ಎಂದರೆ ತುಂಬಾ ಇಷ್ಟ. ಒಂದು ಬಾರಿ, ಎರಡು ಬಾರಿ ತಿಂದರೆ ಪರವಾಗಿಲ್ಲ ಆದರೆ ಮಕ್ಕಳು ಯಾವಾಗಲೂ ಚಾಕ್ಲೇಟ್ ತಿನ್ನುತ್ತಾರೆ. ಹಲ್ಲು ಹುಳುಕಾಗುತ್ತದೆ ಎಂದು ತಾಯಿ ಕೊಡುವುದಿಲ್ಲ. ಆದರೆ ಅದು ಮಕ್ಕಳ ಕ್ಷೇಮಕ್ಕಾಗಿಯೆ ಆಗಿರುತ್ತದೆ. ಅದನ್ನು ತಾಯಿ ತನ್ನ ಜವಾಬ್ದಾರಿ ಎಂದುಕೊಳ್ಳುತ್ತಾಳೆ.

ಆದರೆ ಅರ್ಥಮಾಡಿಕೊಳ್ಳದ ಮಕ್ಕಳು ನಮ್ಮ ತಾಯಿ ಚಾಕಲೇಟ್ ತಿನ್ನಲು ಬಿಡುವುದಿಲ್ಲ... ಯಾವಾಗ ಕೇಳಿದರೂ, ಏನೋ ಒಂದು ಕಾರಣ ಹೇಳುತ್ತಾಳೆ. ಎಂದು ಟೀಕಿಸುತ್ತಾರೆ. ಸರಿಯಾದ ತಿಳುವಳಿಕೆಯು ಇಲ್ಲದೆ ತಾಯಿಯನ್ನು ಅಪಾರ್ಥ ಮಾಡಿಕೊಳ್ಳುತ್ತಾರೆ. ಇದು ಚಿಕ್ಕಂದಿನಲ್ಲಿ ನಡೆಯುವ ಸಂಘಟನೆ. ಹಾಗೆ ಬೆಳೆಯುತ್ತಾ

ಹೋದಂತೆ ಮಕ್ಕಳು ಕೇಳಿದ್ದನ್ನು ತಂದೆ ತಾಯಿಯರು ಕೊಡದಿದ್ದರೆ ತಿಳುವಳಿಕೆ ಇಲ್ಲದ ಮಕ್ಕಳು ತಂದೆ ತಾಯಿಯ ಮೇಲೆ ದ್ವೇಷವನ್ನು ಬೆಳೆಸಿಕೊಳ್ಳುತ್ತಾರೆ. ಕೆಲವರು ಏನು ಮಾಡಲಾರದ ಸ್ಥಿತಿಯಲ್ಲಿ ದುಃಖ ಪಡುತ್ತಾ ಇರುತ್ತಾರೆ.

ನೋಡಿ ಕೆಲವರಿಗೆ ಶಕ್ತಿಗೆ\ಸಾಮರ್ಥ್ಯಕ್ಕೆ ಮೀರಿದ ಕೋರಿಕೆಗಳು ಇರುತ್ತದೆ. ಆ ಕೋರಿಕೆಗಳು ನೆರವೇರದಿರುವಾಗ ನನ್ನ ಜೀವನ ಇಷ್ಟೇ ಎಂದುಕೊಳ್ಳುತ್ತಾರೆಯೇ ಹೊರತು, ಆ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ. ಇದಕ್ಕೆ ಕಾರಣ ಜ್ಞಾನ ಇಲ್ಲದಿರುವುದೇ ಹಾಗೆ ತಪ್ಪಾದ ತಿಳುವಳಿಕೆಯಿಂದ ಅಪಾರ್ಥ ಮಾಡಿಕೊಳ್ಳುತ್ತಾರೆ.

ಅದೇ ಸರಿಯಾದ ತಿಳುವಳಿಕೆ ಇರುವಾಗ ಯಾವುದನ್ನೂ ಅಪಾರ್ಥ ಮಾಡಿಕೊಳ್ಳದೆ ಇರುತ್ತಾರೆ. ಅದಕ್ಕೆ ಜ್ಞಾನ ಇರಬೇಕು. ಆದರೆ ಹುಟ್ಟಿದ ಕೂಡಲೇ ಯಾರು ಜ್ಞಾನವಂತರು ಆಗುವುದಿಲ್ಲ.

ಈಗ ಭೂಮಿಯ ಮೇಲೆ ಎಲ್ಲರೂ ಅಜ್ಞಾನದಲ್ಲಿಯೇ ಜೀವಿಸುತ್ತಿದ್ದಾರೆಯೇ ಹೊರತು ಯಾರು ಜ್ಞಾನವನ್ನು ಹೊಂದಲು ಪ್ರಯತ್ನಿಸುತ್ತಿಲ್ಲ. ನಾವು ಎಷ್ಟೋ ಪುಣ್ಯ ಮಾಡಿ ಬಂದಿದ್ದೇವೆ ಆದ್ದರಿಂದ ಜ್ಞಾನವೇ ಜೀವನದ ಪರಮಾರ್ಥ.. ಜ್ಞಾನವಿದ್ದರೇನೇ ನಮ್ಮ ಜೀವನ ಲಕ್ಷ್ಯ ಸಾಧಿಸಬಲ್ಲೆವು ಎಂದು ತಿಳಿದುಕೊಂಡಿದ್ದೇವೆ.

ಇದೆಲ್ಲಾ ನಮಗೆ ಈ ಜನ್ಮದಲ್ಲಿ ಬಂದಿರುವುದಲ್ಲ. ಗತಜನ್ಮದಲ್ಲಿ ಮಾಡಿದ ಪುಣ್ಯದಿಂದಲೇ ಬಂದಿದೆ, ಹಾಗಾಗಿ ನಾವೆಲ್ಲರೂ ಈ ಧ್ಯಾನ ಮಾರ್ಗಕ್ಕೆ ಬರಲು ಸಾಧ್ಯವಾಯಿತು. ಸಹಜವಾಗಿ ಗುರು ಇದ್ದರೂ, ಜ್ಞಾನ ಹೊಂದಬೇಕು ಎನ್ನುವ ಕೋರಿಕೆ ತುಂಬಾ ಕಡಿಮೆ ಜನರಲ್ಲಿ ಇರುತ್ತದೆ.

ಈ ಸರಿಯಲ್ಲದ ತಿಳುವಳಿಕೆಯ ಕುರಿತು ಶಂಕರಾಚಾರ್ಯರು ಹಾಗೂ ಅವರ ಗುರು ಗೋವಿಂದ ಪಾದಾಚಾರ್ಯರು ಕೆಲವು ಉಪಮಾನಗಳನ್ನು ಹೇಳಿದ್ದಾರೆ.

### ಎ) ಸರಿಯಲ್ಲದ ತಿಳುವಳಿಕೆಗಳನ್ನು ಐದು ವಿಧಗಳಾಗಿ ಹೇಳುತ್ತಾರೆ

**1) ಹಗ್ಗವನ್ನು ನೋಡಿ ಹಾವು ಎಂದುಕೊಳ್ಳುವುದು** : ನೋಡಿ ಸಂಜೆಯ ವೇಳೆಯಲ್ಲಿ ಅಂದರೆ ಕತ್ತಲಾಗುವ ಸಮಯದಲ್ಲಿ ಸ್ವಲ್ಪ ಬೆಳಕು ಇರುತ್ತದೆ. ನಿಮ್ಮ ಹಿತ್ತಲಿನಲ್ಲಿ ಬಾವಿ ಕಟ್ಟೆಯ ಮೇಲೆ ಒಂದು ಹಗ್ಗ ಬಿದ್ದಿರುತ್ತದೆ ಎಂದುಕೊಳ್ಳಿ, ನೀವು ಬೆಳಕಿನಲ್ಲಿ ಅದನ್ನು ನೋಡಿಲ್ಲ. ಆದರೆ ಆ ಮಸುಕಾದ ಬೆಳಕಿನಲ್ಲಿ ನೋಡಿ ಅದನ್ನೇ ಹಾವು ಎಂದುಕೊಂಡಿರಿ. ಕೂಡಲೇ "ಅಯ್ಯೋ ಇಲ್ಲಿ ಹಾವು ಮಲಗಿದೆ " ಎಂದು ಕಂಗಾಲಾಗುವಿರಿ.

ಅಂದರೆ ಅಲ್ಲಿ ನಿಮಗೆ ಸರಿಯಾದ ತಿಳುವಳಿಕೆ ಇಲ್ಲ. ಆದ್ದರಿಂದ ಯಥಾರ್ಥವಾಗಿ ಅದು ಹಗ್ಗವಾಗಿರುತ್ತದೆ. ಆದರೆ ನಿಮ್ಮ ಭ್ರಾಂತಿಯಿಂದ ಹಾವಿನಂತೆ ಕಾಣಿಸಿ ಭಯಪಟ್ಟಿರುವಿರಿ... ಹಾಗೆ ಭಯಪಡುವುದರಿಂದ ಸರಿಯಾದ ಸತ್ಯ ತಿಳಿಯಲಿಲ್ಲ.

**2) ಹಾಗೆಯೇ ಕೊಂಬೆಯನ್ನು ನೋಡಿ ದೆವ್ವ ಎಂದು ಕೊಳ್ಳುವುದು** : ಒಬ್ಬ ವ್ಯಕ್ತಿ ಕಾಡಿನಲ್ಲಿ ಪ್ರಯಾಣಿಸುತ್ತಿದ್ದಾಗ ದಾರಿಯಲ್ಲಿ ಒಂದು ಕಡಿದುಹಾಕಿದ ಮರ ಕಾಣುತ್ತದೆ. ಕತ್ತಲಲ್ಲಿ ಅವನು ಅದನ್ನು ದೆವ್ವ ಎಂದುಕೊಂಡನು. ಮನುಷ್ಯರು ಓಡಾಡದ ಪ್ರದೇಶವಾದ್ದರಿಂದ ಅದು ಖಂಡಿತ ದೆವ್ವವೇ ಆಗಿರುತ್ತದೆ ಎಂದು ಭ್ರಾಂತಿಗೊಳಪಟ್ಟು ಭಯಗೊಂಡನು.

ಅಂದರೆ ಇಲ್ಲಿ ಅವಿದ್ಯೆಯಿಂದ, ಸರಿಯಲ್ಲದ ತಿಳುವಳಿಕೆ ಬಂದಿತು. ಅಂದರೆ ದಿಮ್ಮೆಯನ್ನು ನೋಡಿ ದೆವ್ವವೆಂದು ಬ್ರಾಂತಿ ಹೊಂದಿದನು. ಹಾಗಾಗಿ ಅಲ್ಲಿರುವ ಸತ್ಯ ಅವನಿಗೆ ಅರ್ಥವಾಗಲಿಲ್ಲ.

3) ಹಾಗೆ ಒಮ್ಮೊಮ್ಮೆ ಆಕಾಶದ ಕಡೆ ನೋಡುತ್ತಿರುವಾಗ, ಮೇಘಗಳು ದಟ್ಟವಾಗಿದ್ದು ಅವು ಕದಲುತ್ತಾ ಇರುತ್ತವೆ. ಆಗ ಮೇಘಗಳಲ್ಲಿ ಕೆಲವು ರೂಪಗಳು ಏರ್ಪಡುತ್ತವೆ. ಒಮ್ಮೊಮ್ಮೆ ಸರಿಯಲ್ಲದ ಅಭಿಪ್ರಾಯದಿಂದ ಆ ಮೇಘಗಳನ್ನು ನೋಡಿ ಆಕಾಶದಲ್ಲಿ ದೇವರ ರೂಪಗಳು ಬರುತ್ತಿವೆ ದೇವರು ಪ್ರತ್ಯಕ್ಷವಾಗುತ್ತಿದ್ದಾರೆ ಎನ್ನುವ ಭ್ರಾಂತಿಯಲ್ಲಿದ್ದು ಅವುಗಳಿಗೆ ನಮಸ್ಕರಿಸುತ್ತಾರೆ.

ಇನ್ನೇನಿದೆ! ನಾನು ದೇವರನ್ನು ನೋಡಿದೆ. ನನಗೆ ದೇವರು ಕಾಣಿಸಿದರು ಎನ್ನುತ್ತಾರೆ. ಇದು ಕೂಡಾ ಸರಿಯಲ್ಲದ ತಿಳುವಳಿಕೆ. ಅದರ ಹೊರತಾಗಿ ಆಳವಾಗಿ ಯೋಚಿಸುವುದಿಲ್ಲ. ಪರಿಶೀಲನೆ ಮಾಡುವುದಿಲ್ಲ.

**4) ಹೊಳೆಯುವ ವಸ್ತುಗಳನ್ನು ಬೆಳ್ಳಿ ಎಂದು ಭ್ರಾಂತಿ ಹೊಂದುವುದು:** ಒಮ್ಮೊಮ್ಮೆ ಸಮುದ್ರ ತೀರದಲ್ಲಿ ಬಸವನ ಚಿಪ್ಪುಗಳು ಬಿದ್ದಿರುತ್ತವೆ. ಅವು ಸೂರ್ಯ ಕಿರಣಗಳಿಗೆ ಹೊಳೆಯುತ್ತವೆ. ಹಾಗೆ ಹೊಳೆಯುತ್ತಾ ಇರುವಾಗ, ಅದನ್ನು ನೋಡಿ ಯಾರೋ ಇಲ್ಲಿ ಬೆಳ್ಳಿಯನ್ನು ಬೀಳಿಸಿದ್ದಾರೆ. ಎನ್ನುವ ಭ್ರಾಂತಿಯಿಂದ, ಹತ್ತಿರ ಹೋಗಿ ನೋಡಿದರೆ ಅದು ಹೊಳೆಯುತ್ತಿರುವ ವಸ್ತು ಬೆಳ್ಳಿಯಲ್ಲ ಎಂದು ತಿಳಿಯುತ್ತದೆ. ಆದರೆ ಬೆಳ್ಳಿ ಎಂದು ಭ್ರಾಂತಿಗೊಳಗಾದರು.

**5) ಬಿಸಿಲಿನ ಮರೀಚಿಕೆಯನ್ನು ನೋಡಿ ನೀರು ಎಂದು ಭ್ರಾಂತಿಗೆ ಒಳಗಾಗುವುದು:** ಬೇಸಿಗೆಯಲ್ಲಿ ಪ್ರಯಾಣಿಸುತ್ತಿರುವಾಗ ದೂರದಲ್ಲಿ ನೀರು ಇರುವಂತೆ ಕಾಣುತ್ತದೆ. ಆದರೆ ಹತ್ತಿರಕ್ಕೆ ಹೋಗಿ ನೋಡಿದರೆ ಅಲ್ಲಿ ನೀರು ಇರುವುದಿಲ್ಲ. ಅದಕ್ಕೆ ಅದನ್ನು 'ಬಿಸಿಲಿನ ಮರೀಚಿಕೆ' ಎನ್ನುತ್ತಾರೆ. ಅದನ್ನು ನೋಡಿ ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ. ಅದು ಸರಿಯಲ್ಲದ ಜ್ಞಾನ.

ನೋಡಿ ಹಾವು ಕಾಣಿಸಿದ್ದು ಹಾಗೆಯೇ... ಮೇಘಗಳು ದೇವರ ಹಾಗೆ ಕಂಡವು. ಮರದ ದಿಮ್ಮಿ ದೆವ್ವದ ಹಾಗೆ ಕಾಣಿಸಿತು. ಹೊಳೆದ ಬಸವನ ಚಿಪ್ಪು ಬೆಳ್ಳಿಯ ಹಾಗೆ

ಕಾಣಿಸಿತು. ಇವೆಲ್ಲಾ ಸತ್ಯವಲ್ಲ ಎಂದು ಹತ್ತಿರ ಹೋಗಿ ನೋಡಿದ ನಂತರ, ಅದು ಸರಿಯಲ್ಲದ ಅಭಿಪ್ರಾಯ ಎಂದು ಅರ್ಥವಾಗುತ್ತದೆ.

ಹೀಗೆ ಜೀವನದಲ್ಲಿ ಇಷ್ಟವಿಲ್ಲದ ವ್ಯಕ್ತಿಗಳ ಮೇಲೆ ಅಥವಾ ಹತ್ತಿರದ ಜನರ ಮೇಲೆ ಕೆಟ್ಟ ಅಭಿಪ್ರಾಯವನ್ನು ಏರ್ಪಡಿಸಿಕೊಳ್ಳುತ್ತಾರೆ. ಕೆಲವರು ಯಾರನ್ನು ನೋಡಿದರೂ, ಯಾರೊಂದಿಗೆ ಮಾತನಾಡಿದರೂ ಕೆಟ್ಟ ಅಭಿಪ್ರಾಯವನ್ನು ಏರ್ಪಡಿಸಿಕೊಳ್ಳುತ್ತಾರೆ. ಅದಕ್ಕೆ ಕಾರಣ ಹಿಂದಿನ ಜನ್ಮದಿಂದ ಬಂದ ವಾಸನೆಗಳೇ ಕಾರಣ. ಆದರೆ ಈ ಜನ್ಮದಲ್ಲಿ ಅದನ್ನು ಖಂಡಿತ ಬಿಡಬೇಕು.

ಆರಂಭದ ಹಂತದಲ್ಲಿಯೇ ಯಾರಿಗಾದರೂ ಜ್ಞಾನ ಕಡಿಮೆಯೇ ಇರುತ್ತದೆ. ಆದ್ದರಿಂದ ಎಲ್ಲರನ್ನು ಕೆಟ್ಟ ಅಭಿಪ್ರಾಯದಿಂದಲೇ ನೋಡುತ್ತಾರೆ. ಅಪಾರ್ಥ ಮಾಡಿಕೊಳ್ಳುತ್ತಾ ಇರುತ್ತಾರೆ. ಒಮ್ಮೊಮ್ಮೆ ಅವರ ಮಾತುಗಳು ಅರ್ಥವಾಗದಿರುವಾಗ ಶತೃತ್ವವನ್ನು ಬೆಳೆಸಿಕೊಳ್ಳುತ್ತಾರೆ. ಅದರಿಂದ ಜಗಳಗಳು ಉಂಟಾಗಿ ದುಃಖ ಹೊಂದುತ್ತಾರೆ.

ಯಾವಾಗಲಾದರೂ ಗಮನಿಸಿ "ಒಂದು ಒಳ್ಳೆಯ ಮಾತಿನಿಂದ ಮಿತ್ರತ್ವ, ಒಂದು ಕಠಿಣ ವಾಕ್ಯದಿಂದ ಶತೃತ್ವ" ಬರುತ್ತದೆ. ಯಾರಾದರೂ ಏನಾದರೂ ಹೇಳಿದರೆ, ನಮಗೆ ಎಲ್ಲವು ತಿಳಿದಿದೆ ಎನ್ನುವ ಗರ್ವದಿಂದ ಮಾತನಾಡಿದರೆ, ಅವರ ಮನಸ್ಸಿನಲ್ಲಿ ನಿಮ್ಮ ಮೇಲೆ ಕೆಟ್ಟ ಅಭಿಪ್ರಾಯ ಏರ್ಪಡುತ್ತದೆ. ಹೀಗೆ ಮಾತನಾಡಲು ಕಾರಣ? ನಿಮಗಿರುವ ಅಹಂಕಾರ ಆಗಿರಬಹುದು. ಅಥವಾ ಬೇರೆಯ ವ್ಯಕ್ತಿಗಳ ಮೇಲೆ ನಿಮಗೆ ಇರುವ ಕೆಟ್ಟ ಅಭಿಪ್ರಾಯವಾದರೂ ಆಗಬಹುದು.

ಕೆಲವರು ಸುಮ್ಮನೆ ಸಲಹೆಗಳನ್ನು ಕೊಡುತ್ತಾರೆ. ಅಂತಹವರು ಕೇವಲವಾಗಿ ಕಾಣಿಸುತ್ತಾರೆ. ಯಾರಿಗೇ ಆಗಲಿ ಅವರು ಕೇಳದೆ ಸಲಹೆಗಳು ಕೊಡಬಾರದೆಂದು ತಿಳಿದುಕೊಳ್ಳಬೇಕು. ಈ ಸಂಸ್ಕಾರ ಹೋಗಬೇಕು. ಅದಕ್ಕೆ ಧ್ಯಾನ, ಜ್ಞಾನ ಎರಡು ಇರಬೇಕು.

ಆರಂಭದ ಜನ್ಮಗಳಲ್ಲಿ ತಮೋಗುಣ, ರಜೋಗುಣದಲ್ಲಿ ಇರುತ್ತಾರೆ. ಅಂದರೆ ಅಧಿಕವಾಗಿ ಅವರಿಗೆ ಮನಸ್ಸು ಕೆಲಸ ಮಾಡುತ್ತದೆ. ಅವರಿಗೆ ಭಯ ಇರುತ್ತದೆ. ಆ ಮನಸ್ಸಿನ ಸ್ಥಿತಿಯಲ್ಲಿರುವಾಗ ಮನಸ್ಸಿಗೆ ಹೆಚ್ಚು ಪ್ರಾಧಾನ್ಯತೆ ನೀಡಿ ಜೀವಿಸುತ್ತಾರೆ. ಅಂದರೆ ಕೆಲವು ಜನ್ಮಗಳು ಶರೀರಕ್ಕಾಗಿ, ಕೆಲವು ಜನ್ಮಗಳು ಮನಸ್ಸಿಗಾಗಿ ಮೀಸಲಿರಿಸಿ ಜೀವಿಸುತ್ತಾರೆ. ಆದ್ದರಿಂದ ಅಂತವರಿಗೆ ಜ್ಞಾನ ಕಡಿಮೆ ಇರುತ್ತದೆ.

ಯಾವಾಗ ಧ್ಯಾನ ಸಾಧನೆಯ ಮಾರ್ಗಕ್ಕೆ ಬರುವರೋ, ಆಗ ಗುರುವಿನ ಬೋಧನೆಯಿಂದ ಈ ಅವಿದ್ಯೆ, ಅಜ್ಞಾನ ಎನ್ನುವುವು ನಿಧಾನವಾಗಿ ತೊಲಗುತ್ತವೆ. ಇಲ್ಲಿ

ಅವಿದ್ಯೆ ಎಂದರೆ ಸರಿಯಲ್ಲದ ಅಭಿಪ್ರಾಯ. ಅದು ಸತ್ಯ ತಿಳಿದುಕೊಳ್ಳುವವರೆಗೂ ಇರುತ್ತದೆ.

ನೋಡಿ ಕತ್ತಲಲ್ಲಿ ಹಗ್ಗವನ್ನು ನೋಡಿ ಹಾವು ಎಂದಿರಿ, ಅಷ್ಟರಲ್ಲಿ ಯಾರೋ ಬಂದು ಲೈಟ್ ಹಾಕಿ ನೋಡಿದರೆ ಅದು ಹಗ್ಗ! ಕೂಡಲೇ ನಗುತ್ತಿರಿ..

ಅಂದರೆ ಸತ್ಯವನ್ನು ತಿಳಿದುಕೊಳ್ಳುವವರೆಗೂ ತಪ್ಪು ಅಭಿಪ್ರಾಯ ಹೋಗುವುದಿಲ್ಲ ಹಾಗೆ ಕಾಡಿನಲ್ಲಿ ಒಂದು ಮರದ ದಿಮ್ಮೆಯನ್ನು ನೋಡಿ ದೆವ್ವ ಎಂದುಕೊಂಡು ಕೆಲವರು ಆ ಕಡೆ ಹೋಗುತ್ತಿದ್ದರೆ, ನಾನು ಅಲ್ಲಿ ದೆವ್ವವನ್ನು ನೋಡಿದೆ ಎಂದು ಹೇಳಿದಾಗ ಅದೇ ದಾರಿಯಲ್ಲಿ ಪ್ರಯಾಣ ಮಾಡಿದ ಮತ್ತೊಬ್ಬ ವ್ಯಕ್ತಿ ಅಯ್ಯೋ! ಅದು ಮೊನ್ನೆ ಕಾಣಿಸಿತು ನಿನ್ನೆಯು ಕಾಣಿಸಿತು, ಎಲ್ಲರಿಗೂ ಕಂಡಿದೆ. ಅದೇನು ದೆವ್ವವಲ್ಲ, ಕಡಿದ ಕೊಂಬೆ ಎಂದು ಹೇಳಿದರು ಎಂದುಕೊಳ್ಳಿ, ಆಗ ನಿಮ್ಮ ಅಭಿಪ್ರಾಯ ಬದಲಾಗುತ್ತದೆ.

ಹಾಗೆಯೇ ಮೇಘಗಳನ್ನು ದೇವತೆಗಳು ಕಾಣಿಸಿದರು ಎಂದು ಹೇಳುತ್ತಾರೆ. ಆದರೆ ಹಾಗೆ 10 ನಿಮಿಷಗಳು ಮೇಘಗಳ ಕಡೆಗೆ ನೋಡಿದರೆ ಆಕಾರ ಬದಲಾಗುತ್ತದೆ. ಓಹೋ ಇವುಗಳನ್ನು ದೇವತಾ ರೂಪಗಳು ಎಂದುಕೊಂಡೆ, ಆದರೆ ಇವು ಮೇಘಗಳೇ ಎಂದು ನಿಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವಿರಿ.

ಹೊಳೆಯುವ ವಸ್ತುಗಳನ್ನು ನೋಡಿ ಬೆಳ್ಳಿ ಎಂದುಕೊಂಡಿರಿ. ಆದರೆ ಹತ್ತಿರ ಹೋಗಿ ನೋಡಿದ ಮೇಲೆ ಅವು ಬಸವನ ಚಿಪ್ಪುಗಳು ಎಂದು ತಿಳಿಯುತ್ತದೆ.

ಹಾಗೆಯೇ ಬಿಸಿಲಿನ ಮರೀಚಿಕೆಯನ್ನು ನೋಡಿ, ನೀರು ಇದೆ ಎಂದು ಎಷ್ಟು ದೂರ ಹೋದರೂ ನಿಮಗೆ ಕಾಣುವುದಿಲ್ಲ. ಅದು ನೀರಿನ ಹಾಗೆ ಕಂಡಿದ್ದು ಅಷ್ಟೇ ಮರೀಚಿಕೆ ಎಂದು ತಿಳಿಯುತ್ತದೆ.

ಈ ತಪ್ಪಾದ ಅಭಿಪ್ರಾಯಗಳು ಹೇಗೆ ಹೋಗುತ್ತವೆ? ಎಂದರೆ ಸತ್ಯ ತಿಳಿದ ಮೇಲೆ ಹೋಗುತ್ತವೆ. ಮೊದಲು ಮಾನವನಲ್ಲಿ ಹುಟ್ಟುವುದು ಅವಿದ್ಯೆ, ಆನಂತರ ಅಜ್ಞಾನ. ಆದರೆ ಪ್ರತಿ ವಿಷಯದಲ್ಲೂ ಹೀಗೆ ಇದ್ದರೆ ಅದು ಸತ್ಯಕ್ಕೆ ದೂರ ಮಾಡುತ್ತಾ ಇರುತ್ತದೆ.

ಈ ಧ್ಯಾನ ಮಾರ್ಗಕ್ಕೆ ಬಂದು ನಂತರ ಇಂತಹ ಚಿಕ್ಕ ಚಿಕ್ಕ ವಿಷಯಗಳು ಏಕೆ ತಿಳಿಸುತ್ತಾರೆ? ಎಂದರೆ, ಇನ್ನು ಇಂತಹ ವಾಸನೆಗಳು ಸಂಸ್ಕಾರಗಳು ನಿಮ್ಮಲ್ಲಿದ್ದು ಅವಿದ್ಯೆಯ ಕಡೆಗೆ, ಅಜ್ಞಾನದ ಕಡೆಗೆ ಹೋಗುತ್ತಾರೆನೋ ಎಂದು ಶಂಕರರು ನಮಗೆ ಯಾವಾಗಲೂ ನೆನಪಿಸುತ್ತಾರೆ.

ಈ 5 ವಿಷಯಗಳೇ ಅಲ್ಲ, ನಮ್ಮ ಜೀವನದಲ್ಲಿ ಇಂತಹ ತಪ್ಪು ಅಭಿಪ್ರಾಯಗಳಿಂದ. ಎಲ್ಲರೊಂದಿಗೆ ಶತೃತ್ವ ಬರುತ್ತದೆ. ನೀವು ಎಲ್ಲರನ್ನು ಅಪಾರ್ಥ ಮಾಡಿಕೊಳ್ಳುತ್ತಾ, ನನಗೆ

ಎಲ್ಲವು ಗೊತ್ತಿದೆ. ನಾನೇ ದೊಡ್ಡವನು ಎನ್ನುವ ಅಹಂಕಾರ ಹೆಚ್ಚಿಸಿಕೊಳ್ಳಬಾರದೆಂದೇ, ಇಂತಹ ಚಿಕ್ಕ ಚಿಕ್ಕ ವಿಷಯಗಳನ್ನು ಹೇಳಿದ್ದಾರೆ. ಮತ್ತೆ ಅವುಗಳನ್ನು ಸರಿಪಡಿಸಿಕೊಂಡರೆ, ಅವಿದ್ಯ ನಾಶವಾಗುತ್ತದೆ.

ಅಂದರೆ ಈ ತಪ್ಪು ಅಭಿಪ್ರಾಯಗಳು, ತಪ್ಪಾಗಿ ಅರ್ಥ ಮಾಡಿಕೊಳ್ಳುವುದು, ಸರಿಯಲ್ಲದ ಜ್ಞಾನ ಇವೆಲ್ಲವೂ ನಿನ್ನಿಂದ ಹೋಗಬೇಕು. ನಾವು ಸರಿಯಾದ ಜ್ಞಾನ ಹೆಚ್ಚಿಸಿಕೊಳ್ಳುತ್ತಿದ್ದೇವೆ ಎಂದರೆ "ಅಹಂ ಬ್ರಹ್ಮಾಸ್ಮಿ" "ತತ್ವಮಸಿ", "ಸರ್ವಂ ಖಲ್ವಿದಂ ಬ್ರಹ್ಮ" ಎನ್ನುವುದನ್ನು ಕಲಿತುಕೊಳ್ಳುತ್ತಿದ್ದೇವೆ ಎನ್ನುವುದು ಸರಿ. ಆದರೆ ವಿಚಾರಣೆಯ ಮೂಲಕ ನಿನ್ನ ಅವಿದ್ಯೆಯನ್ನು, ಅಜ್ಞಾನವನ್ನು ಹೋಗಲಾಡಿಸಿಕೊಳ್ಳದಿದ್ದರೆ, ನೀನು ಎಷ್ಟು ಜ್ಞಾನ ತಿಳಿದುಕೊಂಡರೂ ವ್ಯರ್ಥವೇ.

ಅದಕ್ಕೆ ರಮಣ ಮಹರ್ಷಿ ವಿಚಾರಣೆ ಇರಬೇಕು ಎನ್ನುತ್ತಾರೆ ಹಾಗೂ ವಶಿಷ್ಠರು ಕೂಡಾ ವಿಚಾರಣೆಯೇ ಪರಮ ಜ್ಞಾನ ಎನ್ನುತ್ತಾರೆ.

ಹಾಗೆಯೇ ಈಗ ತುಂಬಾ ಜನರು ಕೋರಿಕೆಗಳಿಗಾಗಿ ಧ್ಯಾನ ಎನ್ನುತ್ತಿದ್ದಾರೆ. ಆದರೆ ನಿಜ ಹೇಳಬೇಕೆಂದರೆ ಧ್ಯಾನ ಎನ್ನುವುದು ಕೋರಿಕೆಗಳಿಗಾಗಿ ಅಲ್ಲವೇ ಅಲ್ಲ. ಪರಮಾತ್ಮನ ದರ್ಶನಕ್ಕಾಗಿಯೇ ಧ್ಯಾನ. ಎಲ್ಲಿಯವರೆಗೂ ಕೋರಿಕೆ ಇದೆಯೋ, ಅಲ್ಲಿಯವರೆಗೂ ನೀನು ಮನೋಸ್ಥಿತಿಯಲ್ಲಿ ಇದ್ದಂತೆಯೇ ಎಂದು ವಿವರವಾಗಿ ಈ ಪುಸ್ತಕಗಳ ಮೂಲಕ ಸಂದೇಶ ನೀಡಿದ್ದಾರೆ.

ಹಾಗಾದರೆ ಏಕೆ ತಿಳಿದುಕೊಳ್ಳಲಾಗುತ್ತಿಲ್ಲ ಎಂದರೆ, ಸರಿಯಾದ ಸ್ವಾಧ್ಯಾಯ ಮಾಡದೇ... ಅಷ್ಟೇ ಅಲ್ಲ, ಕೋರಿಕೆಗಳು ಇದ್ದರೆ ನೀನು ಯಾವ ಸ್ಥಿತಿಯಲ್ಲಿದ್ದಂತೆ?

ಹಾಗೆಯೇ ನೀನೇ ದೈವ ಎಂದು ಗುರು ಹೇಳಿದ್ದಾನೆ. ನೀವು, ಈ ಸೃಷ್ಟಿಯ ಹಿಂದೆ ಪರಮಾತ್ಮ ತತ್ವ ಇದೆ ಎಂದು ತಿಳಿದುಕೊಂಡಾಗ, ನೀವು ಕೋರುವುದದೇನು? ನೀವೇ ದೇವರಾದಾಗ ದೇವರಿಗೆ ಕೋರಿಕೆಗಳು ಏನಿರುತ್ತವೆ? ಎಷ್ಟು ತಿಳಿದುಕೊಂಡರೂ, ನೀವಿನ್ನು ಪ್ರಾಪಂಚಿಕ ಕೋರಿಕೆಗಳಿಗಾಗಿ ಧ್ಯಾನ ಮಾಡುತ್ತೇವೆ ಎಂದರೆ ಅದು ಸರಿಯಲ್ಲದ ತಿಳುವಳಿಕೆ.

ಈ ಸರಿಯಲ್ಲದ ತಿಳುವಳಿಕೆಗೆ ಕಾರಣ ಸರಿಯಾದ ಸ್ವಾಧ್ಯಾಯ ಇಲ್ಲದಿರುವುದೇ... ತಪ್ಪಾದ ತಿಳುವಳಿಕೆಯಿಂದಲೇ ಧ್ಯಾನವನ್ನು ಸಂಕಲ್ಪಕ್ಕಾಗಿ, ಕರ್ಮನಾಶ ಮಾಡಿಕೊಳ್ಳುವುದಕ್ಕಾಗಿ ಮಾಡುತ್ತಿದ್ದಾರೆ. ಅಂದರೆ ಈ ಸರಿಯಲ್ಲದ ಜ್ಞಾನ, ಸರಿಯಲ್ಲದ ತಿಳುವಳಿಕೆಯಿಂದಲೇ ಸರಿಯಾದ ಜ್ಞಾನವನ್ನು ಅಂದರೆ ಸಮ್ಯಕ್ ಜ್ಞಾನವನ್ನು ಹೊಂದಲಾರದೆ ಹೋಗುತ್ತಿದ್ದಾರೆ.

ಹಾಗಾದರೆ ಆ ಸ್ಥಿತಿಗೆ ಹೋಗಬೇಕೆಂದರೆ ಕೆಳಗಿನ ಮೆಟ್ಟಿಲನ್ನು ಬಿಡಬೇಕು. ಕೆಳಗಿನ ಮೆಟ್ಟಿಲನ್ನು ಬಿಟ್ಟದ ಹೊರತು ಮೇಲಿನ ಮೆಟ್ಟಿಲಿಗೆ ಹತ್ತಲಾಗರಿರಿ.

ಕೆಳಗಿನ ಮೆಟ್ಟಿಲುಗಳು ಕೋರಿಕೆಗಳು, ಶಾರೀರಿಕ ಪರವಾದವು. ಆಗಲಿ, ಅವು ಮಾನಸಿಕ ಪರವಾದರೂ ಆಗಲಿ, ಬುದ್ಧಿ ಪರವಾದರೂ ಆಗಲಿ, ಯಾವ ಕೋರಿಕೆಗಳು ಇದ್ದರೂ ನೀವಿನ್ನು ಶರೀರ ಎನ್ನುವ ಭ್ರಾಂತಿಯನ್ನು ಹೋಗಲಾಡಿಸಿಕೊಂಡಿಲ್ಲ. ಇದು ಸರಿಯಾದುದಲ್ಲ ಎಂದು ನೀವು ಧ್ಯಾನಕ್ಕೆ ಬಂದ ನಂತರ ತಿಳಿದ ಮೊಟ್ಟಮೊದಲನೆಯ ಜ್ಞಾನ.

ಸರಿಯಲ್ಲದ ತಿಳುವಳಿಕೆ ಎಂದರೆ ಗುರುಗಳು ಹೇಳಿದರೂ ನಿಮ್ಮ ಅಭಿಪ್ರಾಯ ಬದಲಾಗುತ್ತಿಲ್ಲ ಎಂದರೆ, ನಿಮ್ಮಲ್ಲಿ ಇನ್ನೂ ಕೋರಿಕೆಗಳು ಉದ್ಭವಿಸುತ್ತಿವೆ ಎಂದರೆ ಇನ್ನೂ ನೀವು ಜ್ಞಾನ ಪರವಾಗಿ ಅಭಿವೃದ್ಧಿ ಹೊಂದುತ್ತಿಲ್ಲ ಎಂದು ಅರ್ಥ. ಈ ಭೂಮಿಯ ಮೇಲೆ ನಿಮ್ಮ ಪಾಲಿಗೆ ಬಂದಿರುವುದನ್ನು ಅನುಭವಿಸುತ್ತಾ, ಇರುವುದರೊಂದಿಗೆ ತೃಪ್ತಿಯಾಗಿ ಜೀವಿಸುತ್ತಾ ನಿಮ್ಮ ಶರೀರವನ್ನು ಸಾಧನೆಗಾಗಿ ಉಪಯೋಗಿಸಿಕೊಳ್ಳಬೇಕು. ಸಾಧನೆಗೆ ಉಪಯೋಗಿಸಿಕೊಳ್ಳಬೇಕು ಎಂದರೆ ಸರಿಯಾದ ವಿದ್ಯೆ ಕಲಿಯಬೇಕು, ಸರಿಯಾದ ತಪಸ್ಸು ಆಚರಿಸಬೇಕು ಎಂದಿದ್ದಾರೆ.

ಅಂದರೆ ಈ "ಶ್ವಾಸದ ಮೇಲೆ ಗಮನ" ಎನ್ನುವ ಧ್ಯಾನ ಕೋರಿಕೆಗಳನ್ನು ನೆರವೇರಿಸಿಕೊಳ್ಳಲು ಅಲ್ಲ... ಕೋರಿಕೆಗಳೆಲ್ಲವೂ ಸೃಷ್ಟಿಗೆ ಸಂಬಂಧಿಸಿದವೇ. ಸೃಷ್ಟಿಗೆ ಸಂಬಂಧಿಸಿದ ಕೋರಿಕೆಗಳಿಗಾಗಿ ಧ್ಯಾನ ಸಾಧನೆಯಲ್ಲ. ಈ ಸೃಷ್ಟಿಯನ್ನು ಸೃಷ್ಟಿಸಿದ ಸೃಷ್ಟಿಕರ್ತನ ದರ್ಶನಕ್ಕಾಗಿ ಈ ಸಾಧನೆ ಎನ್ನುವ ನಿಜವಾದ ತಿಳುವಳಿಕೆಯನ್ನು ಹೊಂದಿದರೆ, ನಿಮ್ಮಲ್ಲಿ ಯಾವ ತಪ್ಪಾದ ಆಲೋಚನೆಗಳು, ಕೋರಿಕೆಗಳು ಬರುವುದಿಲ್ಲ. ಪರಮಾತ್ಮನ ದರ್ಶನದ ಹೊರತಾಗಿ ನೀವು ಈ ಭೂಮಿ ಮೇಲೆ ಯಾವ ಕೋರಿಕೆ ಕೋರಿದರೂ, ನಿಮಗೆ ಗುರುಗಳು ಹೇಳಿದ್ದು ಅರ್ಥವಾಗಿಲ್ಲ ಎಂದರ್ಥ.

ಪತ್ರೀಜಿಯವರು "ಧ್ಯಾನದಿಂದಲೇ ಜ್ಞಾನ, ಜ್ಞಾನದಿಂದಲೇ ಮುಕ್ತಿ" ಎಂದು ಹೇಳಿದ್ದಾರೆ. ಅಂದರೆ ಕಟ್ಟಕಡೆಯ ಲಕ್ಷ್ಯ ಮುಕ್ತಿಯೇ. ಅದನ್ನು ಬಿಟ್ಟು ಇನ್ನೂ ಪ್ರಾಪಂಚಿಕ ಕೋರಿಕೆಗಳು ಕೋರುತ್ತಿದ್ದಾರೆ ಎಂದರೆ ಈ ಧ್ಯಾನದ ಮೇಲೆ ಸರಿಯಾದ ತಿಳುವಳಿಕೆ ಇಲ್ಲ ಎಂದು ಅರ್ಥ.

ಭೂಮಿ ಮೇಲಿರುವ ಎಲ್ಲವು ಬೇಕೆಂದು ಕೋರುವುದೇ ಸಂಕಲ್ಪ ಸಿದ್ಧಿ ಎಂದುಕೊಳ್ಳುತ್ತಾರೆ.. ಅಲ್ಲಾ! ನೀವು ಮೇಲಿನ ಲೋಕಗಳಿಂದ ಕೆಳಗಿನ ಲೋಕಗಳಿಗೆ ಬಂದು, ಎಲ್ಲಾ ವಿಧವಾದ ಅನುಭವಗಳನ್ನು ಹೊಂದಿ, ಎಲ್ಲಾ ವಿಧದ ಪಾಠಗಳು, ಎಲ್ಲಾ ಜನ್ಮಗಳಲ್ಲಿ ಕಲಿತುಕೊಂಡು, ಮಾನವ ಜನ್ಮ ತೆಗೆದುಕೊಂಡಿದ್ದೀರಿ ಎಂದರೆ ನೀವು ಒಂದೇ

ಒಂದು ಸಂಕಲ್ಪದೊಂದಿಗೆ ಈ ಜನ್ಮ ತೆಗೆದುಕೊಂಡಿದ್ದೀರಿ. ಆ ಸಂಕಲ್ಪ ಏನೆಂದರೆ, ದೇಹ ಇರುವಾಗಲೇ, ಈ ದೇಹವನ್ನು ಸೃಷ್ಟಿಸಿದವನ ದರ್ಶನ ಮಾಡಬೇಕು ಎನ್ನುವ ಮಹಾ ಸಂಕಲ್ಪ. ಅದಕ್ಕಾಗಿ ಆ ಮಹಾ ಸಂಕಲ್ಪದಿಂದ ಆ ಲೋಕದಿಂದ ಈ ಲೋಕಕ್ಕೆ ಬಂದು ಇಲ್ಲಿ ಜನ್ಮ ತೆಗೆದುಕೊಂಡಿದ್ದೀರಿ.

ಆದರೆ ಗತ ಜನ್ಮದ ವಾಸನೆಗಳು, ಸಂಸ್ಕಾರಗಳಿಂದ ಈ ಶರೀರವು ಸುಖ ಸಂತೋಷವನ್ನು ಭೋಗಿಸಲು ಮಾತ್ರ ಬಂದಿದೆ ಎಂದುಕೊಂಡಿರುವಿರಿ. ಈ ಶರೀರ ಯೋಗಕ್ಕಾಗಿ ಬಂದಿದೆ ಎನ್ನುವುದನ್ನು ಮರೆತು ಹೋಗಿರುವಿರಿ. ಇದು ಸರಿಯಲ್ಲದ ಜ್ಞಾನ. ಭೋಗಕ್ಕಾಗಿ ಬಂದಿದ್ದೇನೆ ಎನ್ನುವುದು ಸರಿಯಲ್ಲದ ಜ್ಞಾನ. ಯೋಗಕ್ಕಾಗಿ ನಾನು ಭೂಮಿ ಮೇಲೆ ಬಂದಿದ್ದೇನೆ ಎಂದು ತಿಳಿದುಕೊಳ್ಳುವುದು ಸರಿಯಾದ ಜ್ಞಾನ. ಯಾವಾಗ ಈ ಸರಿಯಾದ ಜ್ಞಾನ ಹೊಂದುವಿರೋ, ಯೋಗ ಮಾರ್ಗದಲ್ಲಿ ನಿಶ್ಚಯವಾಗಿ ಇರುವಿರಿ.

ಯಾವಾಗ ಕೋರಿಕೆಗಳು ಇರುತ್ತವೋ, ಆಗ ನಿಮ್ಮ ಸಾಧನೆ ಸರಿಯಾಗಿ ಆಗುವುದಿಲ್ಲ. ಅದಕ್ಕೆ. "ನೀನು ವಿಶ್ವವನ್ನು ಬಿಡದಿದ್ದರೆ, ವಿಷ್ಣು ನಿನ್ನ ಹೃದಯದಲ್ಲಿ ಇರುವುದಿಲ್ಲ" ಎಂದು ಹೇಳುತ್ತಾರೆ. ನಿಮ್ಮ ಚಿತ್ತ ಶುದ್ಧಿಯಾಗಿದ್ದರೆ ಆ ಪರಮಾತ್ಮ ನಿಮ್ಮ ಹೃದಯದಲ್ಲಿ ಇರಬಲ್ಲನು, ನೀವು ಆತನನ್ನು ದರ್ಶಿಸಬಲ್ಲಿರಿ ಎಂದು ಎಷ್ಟೋ ಸಂದರ್ಭದಲ್ಲಿ ನಮಗೆ ಮಹಾತ್ಮರು ಹೇಳುತ್ತಲೇ ಇದ್ದಾರೆ.

ನಿಮಗೆ ಭಗವಂತನ ದರ್ಶನವಾಗಬೇಕು ಎಂದರೆ ಮೊದಲು ನಿಮ್ಮ ದೃಷ್ಟಿಯನ್ನು ಬದಲಾಯಿಸಿಕೊಳ್ಳಬೇಕು. ಅಂದರೆ ನಾನು ನೋಡುತ್ತಿರುವ ಪ್ರತೀ ಜೀವಿ ಆತ್ಮ ಸ್ವರೂಪವೇ, ಎಂದು ನಮ್ಮ ದೃಷ್ಟಿಯನ್ನು ಬದಲಾಯಿಸಿಕೊಂಡರೆ ಈ ಪ್ರಾಪಂಚಿಕ ಕೋರಿಕೆಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತವೆ. ಯಾರೂ ಶತೃಗಳಲ್ಲ, ಯಾರೂ ಮಿತ್ರರಲ್ಲ ಎನ್ನುವ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುತ್ತಾ, ಅವರವರ ಅನುಭವಗಳಿಗಾಗಿ ಬಂದಿರುವುದು ಎಂದು ಅರ್ಥ ಮಾಡಿಕೊಂಡರೆ, ನಿಮ್ಮ ದೃಷ್ಟಿ ಯಾವಾಗಲೂ ಆತ್ಮದ ಮೇಲೆ ಇರುತ್ತದೆ.

ಅದಕ್ಕೆ ಮೊದಲು ಧ್ಯಾನಕ್ಕೆ ಬಂದಾಗ ಅವಿದ್ಯೆಯನ್ನು ನಾಶ ಮಾಡಿಕೊಳ್ಳಬೇಕು. ಅಂದರೆ ಮೊದಲು ಎಲ್ಲರೂ ಆತ್ಮಸ್ವರೂಪರು ಎಂದು ಗುರುಗಳು ಹೇಳಿದ ಮೊಟ್ಟಮೊದಲ ಪಾಠವನ್ನು ಪದೇಪದೇ ಮೆಲುಕು ಹಾಕಬೇಕು. ಹಾಗೆ ಮೆಲುಕು ಹಾಕುತ್ತಿರುವಾಗ, ನಿಧಾನವಾಗಿ ಅವೆಲ್ಲ ತೊಲಗುತ್ತವೆ.

ಅದಕ್ಕೆ ಶಂಕರಚಾರ್ಯರು, ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದ್ದಾರೆ. ಅಂದರೆ ಈ ಅವಿದ್ಯೆಯನ್ನು, ಅಜ್ಞಾನವನ್ನು ನಾಶ ಮಾಡಿಕೊಳ್ಳಬೇಕು ಎಂದರ್ಥ. ತಪ್ಪು ಅಭಿಪ್ರಾಯಗಳು, ಅಪಾರ್ಥಗಳು ಸರಿಯಲ್ಲದ ಜ್ಞಾನವನ್ನು ನಾಶ ಮಾಡಿಕೊಳ್ಳಬೇಕು. ಈ

ತಿಳುವಳಿಕೆಯ ಲೋಪದ ಕುರಿತು ಐದು ವಿಷಯಗಳನ್ನು ತಿಳಿದುಕೊಂಡೆವು. ಅಪಾರ್ಥ ಎನ್ನುವುದು ಹೇಗೆ ಇರುತ್ತದೆ ಎನ್ನುವುದನ್ನೂ ತಿಳಿದುಕೊಳ್ಳೋಣ.

**ಬಿ. ಅಪಾರ್ಥ ಮಾಡಿಕೊಳ್ಳುವುದು**

ಈ ಅಪಾರ್ಥಗಳು ಯಾವ ವಿಧವಾಗಿ ಮಾಡಿಕೊಳ್ಳುತ್ತೇವೆಂದರೆ ...

1. ಒಮ್ಮೊಮ್ಮೆ ಒಳ್ಳೆಯ ಮಾತು ಹೇಳುತ್ತಿದ್ದರೂ ತಪ್ಪಾದ ಮಾತಿನಂತೆ ಅರ್ಥವಾಗುತ್ತದೆ.
2. ಒಂದು ಒಳ್ಳೆಯ ಭಾವವನ್ನು ಬೇರೆ ಭಾವದಿಂದ ಅರ್ಥ ಮಾಡಿಕೊಳ್ಳುತ್ತಾರೆ..
3. ಒಬ್ಬ ವ್ಯಕ್ತಿಯ ಒಳ್ಳೆಯ ಗುಣವನ್ನು ಬೇರೆ ವಿಧವಾಗಿ, ಅಂದರೆ ಅವನು ಕೈಲಾಗದವನು ಎನ್ನುವಂತೆ ಭಾವಿಸುತ್ತಾ ಇರುತ್ತಾರೆ.
4. ಒಂದು ಆಶಯವನ್ನು ತಪ್ಪಾದ ಆಶಯವನ್ನಾಗಿ ತಿಳಿದುಕೊಳ್ಳುತ್ತೇವೆ.

ಈ ನಾಲ್ಕನ್ನು ಜೀವನದಲ್ಲಿ ನಿತ್ಯವೂ ಮಾಡುತ್ತಲೇ ಇರುತ್ತಾರೆ. ಇವುಗಳಿಗೆ ಕಾರಣ ಅಹಂಕಾರ, ಮಮಕಾರಗಳೇ ಎಂದು ಶಂಕರಾಚಾರ್ಯರು ಹೇಳಿದ್ದಾರೆ.

**1) ಒಂದು ಒಳ್ಳೆಯ ಮಾತು ತಪ್ಪು ಮಾತಿನಂತೆ ಅರ್ಥವಾಗುವುದು ಎಂದರೆ?**

ಇಂತಹ ವಿಷಯಗಳು ನಮಗೆ ಅರ್ಥವಾಗಲೆಂದು, ನೀವು ಕಲಿತುಕೊಂಡು ಜ್ಞಾನವಂತರಾಗಲೆಂದು ಅಷ್ಟಾದಶ ಪುರಾಣಗಳ ಮೂಲಕ ವ್ಯಾಸರು ಎಷ್ಟೋ ಉದಾಹರಣೆಯಾಗಿ ಹೇಳಿದ್ದಾರೆ.

ನಿಜವಾಗಿಯೂ ಕೋರಿಕೆ ಇದ್ದರೆ ಹೇಗೆ ಇರುತ್ತಾರೆ? ಎನ್ನುವುದು ಸೀತೆಯನ್ನು ನೋಡಿ ಕಲಿಯಬಹುದು. ಏಕೆಂದರೆ ಆಕೆ ಕಾಡಿನಲ್ಲಿ ಚಿನ್ನದ ಜಿಂಕೆಯನ್ನು ನೋಡಿದಾಗ, ಈ ಸೃಷ್ಟಿಯಲ್ಲಿ ಚಿನ್ನದ ಜಿಂಕೆ ಇರುವುದೇ? ಎಂದು ಆಲೋಚಿಸದೆ... ಅದನ್ನು ತರಲು ರಾಮನನ್ನು ಕೋರಿದಳು. ರಾಮನು ತರಲು ಹೋದನು. ಆತನ ಶಕ್ತಿ ಲಕ್ಷ್ಮಣನಿಗೆ ಗೊತ್ತಿತ್ತು. ಹಾಗಾಗಿ ಸೀತಮ್ಮನಿಗೆ ಕಾವಲಾಗಿದ್ದಾಗ, ಸೀತೆ ಲಕ್ಷ್ಮಣನನ್ನು ಸಹ ರಾಮನಿಗೆ ಸಹಾಯವಾಗಿ ಹೋಗಲು ಹೇಳಿದಳು. ಲಕ್ಷ್ಮಣ ಎಷ್ಟು ಹೇಳಿದರೂ, ಆಕೆ ಕೇಳದೆ ತುಂಬಾ ಕಠಿಣವಾಗಿ ಮಾತನಾಡಿದಳು.

ಲಕ್ಷ್ಮಣ ಹೇಳಿದ ಹಿತ ವಾಕ್ಯಗಳು ಸೀತೆಗೆ ಇಷ್ಟವಾಗಲಿಲ್ಲ. ಅಂದರೆ ಇಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿರುವುದು ಏನೆಂದರೆ ಒಂದು ಕೋರಿಕೆ ಎನ್ನುವುದು ಉಂಟಾದರೆ, ಎಷ್ಟು ಜನ ಹೇಳಿದರೂ ಆ ಕೋರಿಕೆಯನ್ನು ತಡೆದುಕೊಳ್ಳುವುದು ಸಾಧ್ಯವಿಲ್ಲ. ಅದೇ ಶಂಕರರು ಹೇಳಿದ್ದಾರೆ. ಅದಕ್ಕೆ ಎಷ್ಟೋ ಸಾರಿ ಎಷ್ಟೋ ವಿಧಗಳಾಗಿ... ತಪಸ್ಸು ಇದ್ದರೇನೇ ಕೋರಿಕೆಗಳನ್ನು ಕಡಿಮೆ ಮಾಡಿಕೊಳ್ಳುತ್ತಾರೆ ಎಂದು ಗುರುಗಳು ಹೇಳಿದ್ದಾರೆ. ಸೀತೆಯ ವಿಷಯಕ್ಕೆ ಬಂದರೆ, ಎಲ್ಲವನ್ನೂ ಬಿಟ್ಟು ಅಡವಿಗೆ ಹೋದರೂ ಆ ಅಡವಿಯಲ್ಲಿ ಒಂದು

ಚಿನ್ನದ ಜಿಂಕೆಯ ಮೇಲೆ ಕೋರಿಕೆ ಹೊಂದುವುದೇನು ಅದರಿಂದ ಕಷ್ಟಗಳನ್ನು ಪಡುವುದೇನು?

ಹಾಗೆ ಸೀತೆಯೇ ಅಲ್ಲ, ನೀವು ಕೂಡ ಮಿತಿಮೀರಿದ ಕೋರಿಕೆಯನ್ನು ಹೊಂದಿದ್ದಾಗ ಆಲೋಚಿಸದೆ ಮಾತನಾಡುವಿರಿ... ಸೀತಮ್ಮನಿಗೆ ಲಕ್ಷ್ಮಣನು ಎಷ್ಟೋ ಹಿತ ವಾಕ್ಯಗಳನ್ನು ಹೇಳಿದನು. ಅಣ್ಣನಿಗೆ ಏನು ಆಗುವುದಿಲ್ಲ ಆತ ಶಕ್ತಿವಂತ ಎಂದು ಹೇಳಿದರೂ ಆ ಮಾತುಗಳು ಆಕೆಯ ತಲೆಗೆ ಹತ್ತಲಿಲ್ಲ. ಎಲ್ಲವು ಕೇಳಿದ ನಂತರವೂ ಸೀತೆ ಕಠಿಣವಾಗಿ ಮಾತನಾಡಿದಾಗ, ಆ ಮಾತುಗಳನ್ನು ತಡೆಯಲಾರದೆ ಲಕ್ಷ್ಮಣ ಸೀತಮ್ಮನನ್ನು ಒಂಟಿಯಾಗಿ ಬಿಟ್ಟು ಹೋದನು.

ಅಚಿದರೆ ಸೀತೆಗೆ ಒಳ್ಳೆಯ ಮಾತುಗಳು ಕೂಡ ಕೆಟ್ಟದಾಗಿ ಅನಿಸಿತು. ಅದನ್ನೇ ಅಪಾರ್ಥ ಮಾಡಿಕೊಳ್ಳುವುದು ಎನ್ನುತ್ತಾರೆ. ಆ ಸಮಯದಲ್ಲಿ ಸೀತಾ ಲಕ್ಷ್ಮಣನನ್ನು ಅಪಾರ್ಥ ಮಾಡಿಕೊಂಡಳು. ಅಪಾರ್ಥದ ದೃಷ್ಟಿಯಿಂದ ಮಾತನಾಡಿದಳು.

**2) ಹಾಗೆಯೇ ಒಂದು ಭಾವ ಬೇರೊಂದು ಭಾವವಾಗಿ ಅರ್ಥವಾಗುವುದು**

ಹಾಗೆಯೇ ಸೀತಮ್ಮನನ್ನು ಲಂಕೆಗೆ ಅಪಹರಿಸಿಕೊಂಡು ಹೋದ ರಾವಣಾಸರನಿಗೆ, ವಿಭೀಷಣ ಎಷ್ಟೋ ಹಿತವಚನಗಳನ್ನು ಹೇಳಿದನು. ಏಕೆಂದರೆ ರಾಮನ ಶಕ್ತಿ ವಿಭೀಷಣನಿಗೆ ತಿಳಿದಿತ್ತು. ಒಳ್ಳೆಯವರೊಂದಿಗೆ ವಿರೋಧ ಬೆಳೆಸಿಕೊಂಡರೆ ಯಾವಾಗಲೂ ಪ್ರಮಾದವೇ ಎಂದು ಅವನಿಗೆ ತಿಳಿದಿತ್ತು. ಅದಕ್ಕಾಗಿ ಯಾವ ತಪ್ಪು ಮಾಡದ ರಾಮನೊಂದಿಗೆ ಯುದ್ಧಬೇಕೆ ? ಸೀತೆಯನ್ನು ರಾಮನಿಗೆ ಒಪ್ಪಿಸಿ ಕ್ಷಮಾಪಣೆ ಕೇಳಿದರೆ, ರಾಮನು ಒಪ್ಪಿಕೊಳ್ಳುತ್ತಾನೆಂದು ಎಷ್ಟೋ ಹಿತ ವಾಕ್ಯಗಳನ್ನು ಹೇಳಿದರೂ ರಾವಣ ಕೇಳಲಿಲ್ಲ. ಹೇಡಿಯಂತೆ ಮಾತನಾಡಬೇಡ ಎಂದು ತಮ್ಮನನ್ನು ನಿಂದಿಸಿದನು.

ಅಲ್ಲಿ ಯುದ್ಧ ನಡೆದರೆ ಎಷ್ಟೋ ಜನರ ನಷ್ಟವಾಗುತ್ತದೆ. ಹಾಗೆ ನಡೆಯ–ಬಾರದೆಂದು, ಹಾಗೆಯೇ ಪರಮಾತ್ಮನೊಂದಿಗೆ, ಒಳ್ಳೆಯವರೊಂದಿಗೆ ವಿರೋಧ ತಂದುಕೊಳ್ಳಬಾರದು ಎನ್ನುವ ಹಿತದೃಷ್ಟಿಯಿಂದ ವಿಭೀಷಣ ರಾವಣನಿಗೆ ತಿಳಿಸಿ ಹೇಳಿದನು. ಆದರೆ ರಾವಣ ಕೇಳಲಿಲ್ಲ.

ಅದಕ್ಕೆ ಅನ್ನುತ್ತಾರೆ, "ವಿನಾಶಕಾಲೇ ವಿಪರೀತ ಬುದ್ಧಿ" ಎಂದು ಹೇಳುತ್ತಾರೆ. ವಿನಾಶಕಾಲ ಸನ್ನಿಹಿತವಾದಾಗ ಬುದ್ಧಿ ಸರಿಯಾಗಿ ಕೆಲಸ ಮಾಡುವುದಿಲ್ಲ. ರಾವಣ ಯಾರಿಗಿಂತ ಏನು ಕಡಿಮೆ? ಎಷ್ಟೋ ಧ್ಯಾನ ಮಾಡಿದವನು! ಜ್ಞಾನವು ಇತ್ತು... ಆದರೆ ವಿನಾಶ ಕಾಲ ಹತ್ತಿರವಾದಾಗ ಎಷ್ಟು ತಿಳಿದಿದ್ದರೂ ಒಮ್ಮೊಮ್ಮೆ ತಪ್ಪುಗಳು ಮಾಡದೇ ಇರಲಾರರು. ಹಾಗಾಗಿ ರಾವಣನಿಗೆ ಇರುವ ಅಹಂಕಾರದಿಂದ ಒಳ್ಳೆಯ

ಅಭಿಪ್ರಾಯದೊಂದಿಗೆ ವಿಭೀಷಣ ಹೇಳಿದ ಮಾತುಗಳು ತಲೆಗೆ ಹತ್ತದೆ ತನ್ನ ವಿನಾಶವನ್ನು ತಾನೇ ತಂದುಕೊಂಡನು. ಆ ಒಳ್ಳೆಯ ಭಾವವನ್ನು ಅಪಾರ್ಥ ಮಾಡಿಕೊಂಡನು.

**3. ಹಾಗೆಯೇ ಒಂದು ವ್ಯಕ್ತಿಯ ಗುಣ ಮತ್ತೊಂದು ಆಶಯವಾಗಿ ಅರ್ಥವಾಗುವುದು :**

ದುರ್ಯೋಧನ ಎಷ್ಟೋ ದುರ್ಮಾರ್ಗಿ ಯಾಗಿದ್ದರೂ, ದೃತರಾಷ್ಟ್ರನಿಗೆ ಒಳ್ಳೆಯವನೇ ಎನಿಸಿದನು. ಮಗನ ಮೇಲೆ ಮಮಕಾರದಿಂದ ಅವನಿಗೆ ಎಲ್ಲವೂ ಒಳ್ಳೆಯದಾಗಿ ಅನಿಸಿದವು ಅದರಿಂದ ವಿನಾಶವೇ ನಡೆಯಿತು. ಹಾಗೆಯೇ ಪಾಂಡವರ ಒಳ್ಳೆಯತನ ದುರ್ಯೋಧನನಿಗೆ ಇಷ್ಟವಾಗಲಿಲ್ಲ. ಏನು ಮಾಡದ ಹೇಡಿಗಳು ಎಂದುಕೊಂಡನು. ಅವರ ಒಳ್ಳೆಯ ಗುಣವನ್ನು ಕೆಟ್ಟದಾಗಿ ಅರ್ಥ ಮಾಡಿಕೊಂಡು ನಾಶವಾದನು. ಮಮಕಾರದಿಂದ ತನ್ನ ಮಗ ಎಷ್ಟು ಕೆಟ್ಟಮಾರ್ಗದಲ್ಲಿ ನಡೆಯುತ್ತಿದ್ದರೂ ಧರ್ಮವನ್ನು ಮರೆತು ಧೃತರಾಷ್ಟ್ರ ಈ ವಿಧವಾಗಿ ಕೆಟ್ಟ ಭಾವನೆಯೊಂದಿಗೆ ತನಗೆ ಇಷ್ಟ ಬಂದಂತೆ ವರ್ತಿಸಿದನು.

**4. ಒಂದು ಆಶಯವು ಬೇರೆಯವರಿಗೆ ಮತ್ತೊಂದು ಆಶಯವಾಗಿ ಕಾಣಿಸುತ್ತದೆ :**

ಶ್ರೀ ಕೃಷ್ಣನ ಆಶಯ ದುರ್ಮಾರ್ಗಿಗಳನ್ನು ಹತಗೈಯುವುದೇ, ಧರ್ಮವನ್ನು ಸ್ಥಾಪಿಸುವುದೇ. ಆದರೆ ಗಾಂಧಾರಿ ಅಂತಹ ಶ್ರೀಕೃಷ್ಣನಿಗೆ ಶಾಪವೇ ಕೊಟ್ಟಳು. ಅಂದರೆ ಕೃಷ್ಣನ ಆಶಯವನ್ನು ಆಕೆ ಅರ್ಥಮಾಡಿಕೊಳ್ಳಲಿಲ್ಲ.. ಲೋಕಕಲ್ಯಾಣಕ್ಕಾಗಿ ಮಾಡುತ್ತಿದ್ದ ಈ ಪ್ರಯತ್ನಗಳನ್ನು, ನೋಡಿದ ಗಾಂಧಾರಿ 'ಶ್ರೀ ಕೃಷ್ಣನು ಏಕೆ ಹೀಗೆ ಮಾಡುತ್ತಿದ್ದಾನೆ'? ಎಂದು ಸ್ವಲ್ಪ ಆಲೋಚಿಸಿದ್ದರೆ, ತನ್ನ ಮಕ್ಕಳ ದುರ್ಮಾರ್ಗವನ್ನು ನಿಲ್ಲಿಸುತ್ತಿದ್ದಳು. ತನ್ನ ಗಂಡ ನೀಡಿದ ಆಜ್ಞೆಗಳನ್ನು ನಿಲ್ಲಿಸುತ್ತಿದ್ದಳು.

ಕೃಷ್ಣನು ಪಾಂಡವರಿಗೆ ರಾಜ್ಯ ನೀಡದಿದ್ದರೆ, ಅವರು ಕೇಳಿದ್ದನ್ನು ಕೊಡದಿದ್ದರೆ ಯುದ್ಧ ನಿಶ್ಚಿತ ಎಂದು ಕೂಡಾ ಎಚ್ಚರಿಸಿ ಬಂದಿದ್ದನು. ಅಂದರೆ ಅಧರ್ಮ ನಡೆದಾಗ ಅದು ಹೋಗಲಾಡಿಸಲು ಯುದ್ಧ ಪ್ರಕಟಿಸುತ್ತಾನೆ ಹೊರತು ಆತನಿಗೆ ಬೇರೆ ಕೋರಿಕೆ ಇರಲಿಲ್ಲ. ಕೃಷ್ಣನಿಗೆ ಅದು ಒಂದು ಆಶಯ. ಯಾವ ಆಶಯ ಎಂದರೆ "ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎನ್ನುತ್ತಾನೆ. ಅಂದರೆ ಧರ್ಮವನ್ನು ರಕ್ಷಿಸುವುದು ಕೃಷ್ಣನ ಆಶಯ.

ಹಾಗಾಗಿ ಯಾವ ವಿಧವಾಗಿ ನೋಡಿದರೂ ಕೃಷ್ಣನು ಧರ್ಮಕ್ಕಾಗಿ ಮಾಡಿದನೆ ಹೊರತು ತನ್ನ ಸ್ವಲಾಭಕ್ಕಾಗಿ ಮಾಡಲಿಲ್ಲ. ಹಾಗೆ ಮಾಡದಿದ್ದರು ಗಾಂಧಾರಿ ಕೋಪದಿಂದ, ಕೃಷ್ಣನಿಂದ ತನ್ನ ವಂಶ ನಾಶವಾಯಿತು ಎಂದು ಕ್ರೋದಿತಳಾದಳು. ಹಾಗೆಯೇ ಕೃಷ್ಣನ ವಂಶವೂ ನಾಶವಾಗಬೇಕು ಎಂದು ಶಪಿಸಿದಳು. ಹೀಗೆ ತುಂಬಾ ಜನರು ಅಹಂಕಾರದಿಂದ, ಮಮಕಾರದೊಂದಿಗೆ ಅಪಾರ್ಥಗಳನ್ನು ಮಾಡಿಕೊಂಡು ಲೋಕ ವಿನಾಶ ಕಾರ್ಯಗಳನ್ನು ಮಾಡುತ್ತಾರೆ. ಇದಕ್ಕೆ ಕಾರಣ ಅವಿದ್ಯೆಯೇ.

ಅಹಂಕಾರ, ಮಮಕಾರ ಈ ಎರಡು ಮಿತಿಮೀರಿದ್ದರೆ ಸತ್ಯಕ್ಕೆ ದೂರವಾಗುತ್ತಾರೆ ಎಂದು ಅಜ್ಞಾನಿಗಳಿಗೆ ತಿಳಿಯದಿದ್ದರೂ, ಜ್ಞಾನಿಗಳಿಗೆ ತಿಳಿದಿದೆ. ಅದಕ್ಕೆ ನಮ್ಮ ಉಪನಿಷತ್ತಿಗಳಲ್ಲಿ ಅಹಂಕಾರ ಇರಬಾರದು ಎಂದು ಹೇಳಿದ್ದಾರೆ. ಅಹಂಕಾರ ಇಲ್ಲದಿರುವಾಗಲೇ ಸತ್ಯಕ್ಕೆ ಹತ್ತಿರವಾಗುತ್ತಾರೆ. ಸತ್ಯಕ್ಕೆ ಹತ್ತಿರವಾದವರೇ ವಿಜಯವನ್ನು ಸಾಧಿಸಬಲ್ಲರು ಎಂದು ತಿಳಿದವರು ಈ ಅಹಂಕಾರ ಮಮಕಾರಗಳು ಬರದಿರುವಂತೆ ನೋಡಿಕೊಳ್ಳುತ್ತಾರೆ.

ಈಗ ನೋಡಿ ಪಾಂಡವರಿಗೆ, ಕೌರವರಿಗೆ ದ್ರೋಣಾಚಾರ್ಯರೇ ಗುರುಗಳು. ವಿದ್ಯೆಗಳನ್ನು ಕಲಿಸಲಾಯಿತೇ ಹೊರತು ಅವರ ಗುಣಗಳನ್ನು ಆತ ಬದಲಾಯಿಸಲಾರದೆ ಹೋದರು. ಆದರೆ ಪಾಂಡವರು ಸತ್ಯದಲ್ಲಿ, ಧರ್ಮದಲ್ಲಿ ಇದ್ದರು. ಆದ್ದರಿಂದ ಭಗವಂತ ಅವರ ಪರವಾಗಿದ್ದು ಎಷ್ಟು ಕಷ್ಟಗಳು ಬಂದರೂ ಅವುಗಳಿಂದ ಆತನೇ ರಕ್ಷಿಸಿ ಅವರನ್ನು ಹೊರ ತಂದನು. ಆದರೆ ಕೌರವರು ಅಹಂಕಾರ ಪೂರಿತರಾಗಿ ಸತ್ಯಕ್ಕೆ ದೂರವಾದರು.

ನೀವು ಧ್ಯಾನ ಮಾರ್ಗಕ್ಕೆ ಬಂದರೂ ಅಜ್ಞಾನದಲ್ಲಿ ಇದ್ದರೆ, ನಿಮಗೆ ಅಹಂಕಾರ ಮಹಕಾರ ಮಿತಿಮೀರಿ ಇರುತ್ತಾ ಯಾರ ಮಾತನ್ನು ಕೇಳುವುದಿಲ್ಲ. ಈಗ ಕೆಲವರಿಗೆ ಮಿತಿಮೀರಿದ ಮಮಕಾರ ಇರುತ್ತದೆ. ಆದರೆ ತೀವ್ರವಾದ ಬಂಧವಿರಬಾರದು. ಬಂಧಗಳಿಂದಲೇ ಬಾಧೆಗಳು ಬರುತ್ತವೆ. ಅದನ್ನೇ ಹೇಳಿದರೆ ಹೇಗೆ ಬಿಡಲು ಸಾಧ್ಯ ಎನ್ನುತ್ತಾರೆ. ಹಾಗೆ ಹೇಳಿದ್ದಾರೆ ಎಂದರೆ, ಅವರಿಗೆ ಮಿತಿಮೀರಿದ ಬಂಧವಿದೆ ಎಂದು ಅರ್ಥ. ಹಾಗಿರುವಾಗ ಇವರಿಗೆ ಎಷ್ಟು ಹೇಳಿದರೂ ಈ ಬಂಧದಿಂದ ಬರುವ ನಷ್ಟ ಅನುಭವಿಸಿದ ಹೊರತು ಅವರಲ್ಲಿ ಬದಲಾವಣೆ ಬರುವುದಿಲ್ಲ.

ಒಮ್ಮೆ, ಅಥವಾ ಮತ್ತೊಮ್ಮೆ ಹೇಳಬೇಕು. ಆದರೆ ಎಷ್ಟಾದರೂ ಹೇಳುತ್ತಾ ಇದ್ದರೆ ಈ ಕಾಲದಲ್ಲಿ ಶತೃಗಳಾಗುತ್ತಾರೆ. ನೋಡಿ ನೋಡಿ ಹೇಗೆ ಸುಮ್ಮನಿರಲು ಸಾಧ್ಯ ಎನ್ನುತ್ತಾರೆ. ಆದರೆ ಅವರಿಗೆ ಯಾವುದೋ ಮೂಲೆಯಲ್ಲಿ ಮನಸ್ಸಿಗಿರುವ ಮಮಕಾರ ಎನ್ನುವ ಮಲಿನದಿಂದ, 'ನನಗೆ ಯಾರು ಏನು ಹೇಳುವುದು' ಎನ್ನುವ ಅಹಂಕಾರವಿರುತ್ತದೆ. ಆದರೆ ಅದು ಹೋಗಬೇಕು ಆ ಎರಡು ಹೋಗಬೇಕು.. ಅದನ್ನು ಬಿಟ್ಟರೆ ಮಾತ್ರ ವಿಶ್ವ ವಿಜೇತರಾಗುತ್ತಾರೆ.

ಆದರೆ ಈ ಎರಡನ್ನೂ ಬಿಡಿರಿ ಎಂದರೆ ಮನುಷ್ಯರನ್ನು ಬಿಡುವುದಲ್ಲ. ಮನಸ್ಸಿಗಿರುವ ಅಹಂಕಾರ, ಮಮಕಾರ ಎನ್ನುವ ಗುಣಗಳನ್ನು ಬಿಡಬೇಕು. ಆ ಎರಡೂ ಬಿಟ್ಟರೆನೇ ಧರ್ಮವನ್ನು ಉಳಿಸಬಲ್ಲರು. ಆದರೆ ಆ ಎರಡು ಇರಿಸಿಕೊಂಡರೆ ಧರ್ಮವನ್ನು ಉಳಿಸಲಾರರು.

ಈಗ ನೀವು ಧ್ಯಾನ ಪ್ರಚಾರ ಮಾಡುತ್ತಿದ್ದೀರಿ.. ಶರೀರದ ಮೇಲೆ ಮಮಕಾರವಿದ್ದರೆ, ಹೊರಗೇ ಹೋಗಲಾರಿರಿ. ನಾನು ಇಷ್ಟು ದೊಡ್ಡವನು ಊರೂರು ತಿರುಗಿ ಹೇಳುವುದೇನು

ಎನ್ನುವ ಅಹಂಕಾರ ಇದ್ದರೆ... ಧ್ಯಾನವನ್ನು ಮತ್ತೊಬ್ಬರಿಗೆ ಹೇಳಲಾರಿರಿ. ನನ್ನ ಆಸ್ತಿ, ನನ್ನ ಹಣ ನನ್ನ ಮಕ್ಕಳಿಗೆ ಸಿಗಬೇಕು ಎನ್ನುವ ಮಮಕಾರವಿದ್ದರೆ ಬೇರೆಯವರ ಕುರಿತು ಒಂದು ರೂಪಾಯಿಯನ್ನು ಖರ್ಚು ಮಾಡಲಾರಿರಿ. ಎಲ್ಲಾ ದಾನಗಳಿಗಿಂತ ಜ್ಞಾನ ದಾನ ದೊಡ್ಡದು ಎಂದು ವೇದಿಕೆಯ ಮೇಲೆ ಹತ್ತಿ ಉಪನ್ಯಾಸಗಳನ್ನು ಹೇಳಿದರೆ ಮಾತ್ರ ದೇವರು ಮೆಚ್ಚಿಕೊಳ್ಳುವುದಿಲ್ಲ.

ವಾಕ್ ಮೂಲಕ ಹೇಳಿದ ಜ್ಞಾನವನ್ನು ಆಚರಣೆಯ ಮೂಲಕ ತೋರಿಸಿದವನೇ ಈ ಲೋಕದಲ್ಲಿ ದೊಡ್ಡವನಾಗುತ್ತಾನೆ. ಆಚರಿಸದೆ ಬಾಯಿಮಾತಿನಿಂದ ಹೇಳಿದರೆ ಅದು ದೊಡ್ಡತನವಲ್ಲ. ಮೊದಲು ಸರಿಯಾದ ಜ್ಞಾನವನ್ನು ಕಲಿತುಕೊಳ್ಳಬೇಕು. ಆಗಲೇ ಬೇರೆಯವರಿಗೆ ಹೇಳಲು ಪ್ರಯತ್ನಿಸಬೇಕು.

ನೀವು ತಪ್ಪಾದ ಅಭಿಪ್ರಾಯ, ಸರಿಯಲ್ಲದ ತಿಳುವಳಿಕೆ, ಅಪಾರ್ಥಗಳಲ್ಲಿಯೇ ಇದ್ದೀರಿ ಎಂದರೆ, ಇನ್ನು ನಿಮಗೆ ಗತಜನ್ಮಗಳಿಂದ ಬಂದ ವಾಸನೆಗಳು, ಸಂಸ್ಕಾರಗಳು ಬಿಟ್ಟಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕು. ಒಂದು ವೇಳೆ ಇದೆಯೋ, ಇಲ್ಲವೋ ಎನ್ನುವ ಅಯೋಮಯ ಸ್ಥಿತಿಯಲ್ಲಿರುವಾಗ ಮತ್ತಷ್ಟು ಗಮನಿಸಿಕೊಳ್ಳಬೇಕು. ಕೆಲವರು ಯಾವ ಚಿಕ್ಕ ಸಂಘಟನೆ ನಡೆದರೂ, ವಿಪರೀತವಾಗಿ ಬಾಧೆಪಡುತ್ತಾರೆ. ಅದರ ಅಗತ್ಯವಿಲ್ಲ.

ನಮ್ಮ ಜೀವನ ನಮಗಿಂತ ಪ್ರಕೃತಿಗೆ. ಭಗವಂತನಿಗೇ ಚೆನ್ನಾಗಿ ತಿಳಿದಿದೆ. ಈಗ ಇದು ಆಗುತ್ತಿಲ್ಲ ಎಂದರೆ ಇದಕ್ಕಿಂತ ಒಳ್ಳೆಯ ಅವಕಾಶ ಬರಬಹುದು. ನನ್ನ ಜೀವನದಲ್ಲಿ, ಇದಕ್ಕಿಂತ ಒಳಿತು ಆಗಬಹುದು ಎಂದು ಪಾಸಿಟಿವ್ ಆಗಿದ್ದರೆ ಖಂಡಿತ ನಿಮ್ಮ ಜೀವನದಲ್ಲಿ ಒಳಿತಾಗುತ್ತದೆ.

ಜೀವನದಲ್ಲಿ ಏನು ನಡೆಯಬೇಕೆಂದುಕೊಂಡರೂ ಪ್ರತಿಯೊಂದನ್ನು ಅಂಗೀಕರಿಸುತ್ತಾ ಜೀವಿಸಿದರೆ ಆ ಜೀವನ ಎಷ್ಟೋ ಆನಂದಕರವಾಗಿರುತ್ತದೆ. ಒಬ್ಬೊಬ್ಬರು ಆ ಜೀವನವನ್ನು ಅಂಗೀಕರಿಸದೆ ವಿಮರ್ಶಿಸಿಕೊಳ್ಳುತ್ತಾ ವಿಚಾರಣೆ ಇಲ್ಲದೆ ಪ್ರತಿ ವ್ಯಕ್ತಿಯನ್ನು ವಿಮರ್ಶಿಸುತ್ತಾ ಇರುತ್ತಾರೆ. ಏಕೆ ಹೀಗೆ ವಿಮರ್ಶೆ ಮಾಡುತ್ತಾರೆ ಎಂದರೆ ಅವರಿಗೆ ಸರಿಯಾದ ತಿಳುವಳಿಕೆ ಇಲ್ಲ. ಬೇರೆಯ ವ್ಯಕ್ತಿಯನ್ನು ಅಪಾರ್ಥ ಮಾಡಿಕೊಳ್ಳುತ್ತಿದ್ದಾರೆ. ಅವರ ಮೂರ್ಖತ್ವದಿಂದ ನಮಗೆ ಅಡ್ಡಿಯಾಗಬಹುದು. ಅವರ ಆ ಮೂರ್ಖತ್ವ ತೊಲಗಬೇಕು ಎಂದರೆ ಇನ್ನು ನಿಮ್ಮಲಿ ಶಕ್ತಿ ಇನ್ನು ಹೆಚ್ಚಾಗಬೇಕು. ನಾವು ಇನ್ನು ಬದಲಾಗಬೇಕು.

ಧ್ಯಾನವಿಲ್ಲದಿದ್ದರೆ ಹೊರಗಿನ ವ್ಯಕ್ತಿಗಳು ಬದಲಾಗುವುದಿಲ್ಲ. ಧ್ಯಾನವಿದ್ದರೇನೇ ಇತರ ವ್ಯಕ್ತಿಗಳಲ್ಲಿ ಬದಲಾವಣೆ ಆಗುತ್ತದೆ. ಅದಕ್ಕೆ ಅಜ್ಞಾನಿ ಬದಲಾಗುತ್ತಾನೆ ಎಂದು ಕೋರಿಕೊಳ್ಳುವ ಬದಲು ನಾನು ಜ್ಞಾನಿಯಾಗಬೇಕು, ಇನ್ನೂ ಶಕ್ತಿವಂತನಾಗಬೇಕು,

ಬೇರೆಯವರನ್ನು ನಾನು ಇನ್ನೂ ಇತರರನ್ನು ಪ್ರಭಾವಿಸುವಷ್ಟು ದೊಡ್ಡದಾಗಿ ಬೆಳೆಯಬೇಕು ಎಂದು ಕೋರಿಕೊಂಡರೆ ಖಂಡಿತವಾಗಿ ಆ ಪ್ರಕೃತಿ ನಿಮ್ಮ ಡ್ಯೂಟಿ ತೆಗೆದುಕೊಂಡು ಹೊರಗಿನ ವ್ಯಕ್ತಿಯಲ್ಲಿ ಬದಲಾವಣೆಯಾಗುವಂತೆ ಮಾಡುತ್ತದೆ.

ಅದಕ್ಕೇ ನೀವು ಮಾತಿನಿಂದ ಏನೂ ಸಾಧಿಸಲಾಗಿರಿ, ಮೌನದಲ್ಲಿದ್ದರೆ ಎಷ್ಟೋ ಸಾಧನೆ ಮಾಡಬಹುದು ಎಂದು ಮಹಾತ್ಮರು ಯಾವಾಗಲೂ ಹೇಳುತ್ತಾರೆ, ಹೇಳುತ್ತಿರುತ್ತಾರೆ. ಧ್ಯಾನಕ್ಕೆ, ಜ್ಞಾನಕ್ಕೆ ಇರುವ ಭಾಷೆ ಏನೆಂದರೆ ಮೌನ. ಅದನ್ನೇ ಪತ್ರೀಜಿಯವರು ಸಹನೆಯೇ ಪ್ರಗತಿ ಎಂದು ಹೇಳಿದ್ದಾರೆ. ನೀನು ತಾಳ್ಮೆಯಿಂದ ಸಹಿಸಿಕೊಂಡರೆ, ನಿನ್ನ ಆಧ್ಯಾತ್ಮಿಕ ಉನ್ನತಿಯು ತಾನಾಗಿಯೇ ನಡೆಯುತ್ತದೆ. ಅದಕ್ಕಾಗಿ ಬೇರೆಯವರನ್ನು ನಿಂದಿಸಿದರೆ ಲಾಭವಿಲ್ಲ. ಅಪಾರ್ಥ ಮಾಡಿಕೊಂಡರೆ ಲಾಭವಿಲ್ಲ. ಅವಮಾನಿಸಿದರೂ ಏನೂ ಲಾಭವಿಲ್ಲ. ಮೌನವಾಗಿ ಸಾಧನೆ ಹೆಚ್ಚಿಸಿಕೊಳ್ಳುತ್ತಾ ಇರಬೇಕು.

ನನಗೆ ಅವಕಾಶಗಳು ಬರಲಿಲ್ಲವೇಕೆ? ಎಂದು ಯಾವಾಗಲೂ ಯೋಚಿಸಬಾರದು. ಅವಕಾಶ ಬಂದರೂ ಪಡೆದುಕೊಳ್ಳದವನು ಮೂರ್ಖ. ಅಂದರೆ ಇನ್ನೂ ಯಾವುದೋ ಅವಕಾಶ ಬರುತ್ತದೆ ಬರುತ್ತದೆ ಎಂದುಕೊಳ್ಳುತ್ತಾ... ಅದು ಬಂದರೂ ಮೂರ್ಖನು ಗುರುತಿಸಲಾರ. ಬಂದ ಅವಕಾಶವನ್ನು ಉಪಯೋಗಿಸಿಕೊಳ್ಳುವನು, ಮಧ್ಯಮ ಸ್ಥಿತಿಯಲ್ಲಿರುವವನು. ಪ್ರತಿ ಕ್ಷಣವನ್ನು ಅವಕಾಶವಾಗಿ ಬದಲಾಯಿಸಿಕೊಳ್ಳುವವನು ಉತ್ತಮನು.

ಕೆಲವರು ತಮ್ಮ ಗಂಡಂದಿರನ್ನು ಭೀಮವರಂಗೆ ಹೋಗಲು ಬಿಡುವುದಿಲ್ಲ. ಕೆಲವರಿಗೆ ಉದ್ಯೋಗದ ನಿಮಿತ್ತ ಅವಕಾಶವಾಗದೆ ಬಾರದೆ ಇರಬಹುದು. ಕೆಲವರಿಗೆ ವ್ಯಾಪಾರದಿಂದ ಸಾಧ್ಯವಾಗದಿರಬಹುದು. ಹಾಗಾದಾಗ ನಮಗೆ ಹೋಗಲು ಸಾಧ್ಯವಾಗುತ್ತಿಲ್ಲ ಎಂದು ಬಾಧೆ ಪಡುವುದಲ್ಲ. ಮನೆಯಲ್ಲಿ ಕುಳಿತು ಧ್ಯಾನ ಮಾಡಿಕೊಳ್ಳಬೇಕು. ಹಾಗೆ ಲೈವ್‌ನಲ್ಲಿ ಕೊಡುವ ಜ್ಞಾನವನ್ನು ಕೇಳುತ್ತಾ, ಧ್ಯಾನ ಮಾಡುತ್ತಾ ಇದ್ದರೆ ಪೂರ್ತಿಯಾಗಿ ಅವಕಾಶವಾಗದೆ. ಬರುತ್ತದೆ ಎಂದು ಖಚಿತವಾಗಿ ಹೇಳಲಾರೆ, ಆದರೆ 50 ಪರ್ಸೆಂಟ್ ಆದರೂ ನೀವು ಸಾಧಿಸುತ್ತೀರಿ.

ಹಾಗಾದರೆ ಅವಕಾಶಗಳು ಕೆಲವರಿಗೆ ಬಂದು ಕೆಲವರಿಗೆ ಬಂದಿಲ್ಲ ಅಂದರೆ ಅದು ಬೇರೆಯವರಿಂದ ಬಂದ ಲೋಪವಲ್ಲ. ನನ್ನಲ್ಲಿ ಇನ್ನು ಯಾವುದೋ ಲೋಪವಿದೆ ಇದು ನನ್ನ ಸಹನೆಗೆ ಪರೀಕ್ಷೆ ಎಂದುಕೊಳ್ಳಬೇಕು. ಏಕೆಂದರೆ ಧ್ಯಾನಕ್ಕೆ ಬರುವ ಮೊದಲು ನನ್ನಲ್ಲಿ ತುಂಬಾ ಅಹಂಕಾರವಿತ್ತು. ನಾನು ಏನು ಹೇಳಿದರೂ ನಡೆಯುತ್ತದೆ, ನನ್ನ ಕೆಲಸವೇ ಸರಿ ಎನ್ನುವ ಅಹಂಕಾರದಿಂದ ಇದ್ದೆನು. ಇಂದು ನಾನು ಅನ್ನುವುದು ನಡೆಯುತ್ತಿಲ್ಲ ಎಂದರೆ ನನ್ನ ಅಹಂಕಾರ ಹೋಗಿಲ್ಲ. ಆದ್ದರಿಂದ ನಾನು ಇನ್ನೂ ಸಾಧನೆ ಮಾಡಬೇಕು. ನನ್ನ

ಮನಸ್ಸು ಮತ್ತಷ್ಟು ಪರಿಶುದ್ಧ ಮಾಡಿಕೊಳ್ಳಬೇಕು. ಎದುರಿನ ವ್ಯಕ್ತಿಗಳಲ್ಲಿ ತಪ್ಪು ಹುಡುಕುವುದಲ್ಲ ನನ್ನಲ್ಲಿ ಯಾವುದೋ ತಪ್ಪು ಇದೆ ಎಂದು ನನ್ನನ್ನು ನಾನು ಬದಲಾಯಿಸಿಕೊಳ್ಳಬೇಕು ಎಂದು ಪ್ರತಿಕ್ಷಣ ವಿಚಾರಣೆ ಮಾಡಿಕೊಳ್ಳುತ್ತಾ ಇರಬೇಕು.

ಗಮನಿಸಿ ಕೆಲವರನ್ನು ಭೀಮವರಂಗೆ ಕಳಿಸುವುದಿಲ್ಲ. ಆದರೆ ಕ್ಲಾಸ್‌ಗಳಿಗೆ ಮಾತ್ರ ಹೋಗಲು ಬಿಡುತ್ತಾರೆ. ನಾನು ಭೀಮವರಂ ಬೇಡ ಎಂದರೆ ಇವಳು ಏಕೆ ಹೋಗುತ್ತಾಳೆ? ಎಂದು ಅವರಿಗೆ ಹಠ. ಹಾಗಿರುವಾಗ ಸರಿ ನಾನು ಹೋಗುವುದಿಲ್ಲ ಮನೆಯಲ್ಲೇ ಧ್ಯಾನ ಮಾಡುತ್ತೇನೆ ಎಂದು ಕೆಲವು ದಿನಗಳು ಸಹನೆಯಿಂದ ಇದ್ದರೆ ನಿಮಗೆ ತಪ್ಪದೆ ಅವಕಾಶಗಳು ಬಂದೆ ಬರುತ್ತವೆ.

ಹಾಗೆ ಪ್ರತಿಯೊಂದರಲ್ಲೂ ಸಹನೆಯಿಂದ, ಧ್ಯಾನ ಮಾಡುತ್ತಾ ಜ್ಞಾನ ಹೆಚ್ಚಿಸಿಕೊಳ್ಳಲು ಉತ್ಸುಕರಾಗಿದ್ದರೆ ತಪ್ಪದೇ ಪ್ರಕೃತಿ ನಿಮ್ಮ ಆಶಯವನ್ನು ಮುನ್ನಡೆಸುತ್ತದೆ. ಧ್ಯಾನ ಮಾರ್ಗಕ್ಕೆ ಬಂದಾಗ ನಾನೇ ಸರಿ ಎಂದು ಯಾವಾಗಲೂ ಅಂದುಕೊಳ್ಳಬಾರದು. ಇನ್ನು ನನ್ನಲ್ಲಿ ಯಾವ ಲೋಪಗಳಿವೆ? ಯಾವುವನ್ನು ಸರಿ ಮಾಡಿಕೊಳ್ಳಬೇಕು? ನನ್ನಲ್ಲಿ ಇನ್ನು ಲೋಪಗಳಿವೆಯಾದ್ದರಿಂದಲೇ ನಾನು ಭೂಮಿಯ ಮೇಲೆ ಈ ವೇದನೆ ಅನುಭವಿಸುತ್ತಿದ್ದೇನೆ. ನನಗೆ ದುಃಖವೇ ಇಲ್ಲದ ಸ್ಥಿತಿ ಇದೆ ಎಂದುಕೊಂಡರೆ ... ನಿಮ್ಮ ಲೋಪಗಳೆಲ್ಲವೂ, ನಿಮ್ಮ ಪಾಪ ಕರ್ಮಗಳೆಲ್ಲವೂ ದಗ್ಧವಾಗಿದೆ ಎಂದು ನಿಮಗೆ ಅರ್ಥವಾಗಬೇಕು.

ಎಷ್ಟು ಹೊತ್ತೂ ಯಾವಾಗಲೂ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಲು ಪ್ರಯತ್ನಿಸಬೇಕೇ ಹೊರತು ಬೇರೆಯವರ ಕುರಿತು ನಾವು ಆಲೋಚಿಸಬೇಕಾದಾಗ ಅಗತ್ಯವಿಲ್ಲ. ಒಂದು ನಿಮಿಷ ಬೇರೆಯವರ ಕುರಿತು ಆಲೋಚಿಸಿದರೂ ನಿಮ್ಮ ಸಾಧನೆ, ನಿಮ್ಮ ಜ್ಞಾನವನ್ನು ಕಳೆದುಕೊಂಡಂತೆ. ಪ್ರಾಪಂಚಿಕ ಜೀವನದಲ್ಲಿ ಸಂಸಾರಕ್ಕಾಗಿ, ಸಮಾಜಕ್ಕಾಗಿ, ಬಂಧುಗಳಿಗಾಗಿ, ಎಲ್ಲರಿಗಾಗಿ ಜೀವಿಸಿದ್ದೀರಿ. ಆದರೆ ಈಗ ನಿಮ್ಮ ಡ್ಯೂಟಿ ಏನು ಎಂದು ತಿಳಿದುಕೊಂಡು ಅದನ್ನು ಮಾಡಿಕೊಳ್ಳುತ್ತಿದ್ದೀರಿ. ನಿಮಗಾಗಿ ನೀವು ಪ್ರತಿ ನಿಮಿಷ ಕೆಲಸ ಮಾಡಬೇಕು.

ಈ ಸಾಧನೆ, ಜ್ಞಾನ ಎನ್ನುವುದು ನಿಮ್ಮ ಆತ್ಮದ ಉನ್ನತಿಗೆ, ಮನಸ್ಸನ್ನು ಶುದ್ಧಿಯಾಗಿ ಇರಿಸಿಕೊಳ್ಳಲೇ. ಧ್ಯಾನವಿಲ್ಲದಿದ್ದರೆ ತಮ್ಮ ಮಾತು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಮಾತಿನ ಮೇಲೆ ಹಿಡಿತವನ್ನು ಕಳೆದುಕೊಳ್ಳುತ್ತೀರಿ. ಹಾಗೆ ಮಾತು ಜಾರಬಾರದೆಂದರೆ ಇಂದ್ರಿಯಗಳಿಗೆ ಶಕ್ತಿ ಬೇಕು. 'ಮಾತನಾಡಬಾರದು ಎಂದರೆ ಮಾತನಾಡಬಾರದು' 'ನೋಡಬಾರದು ಎಂದರೆ ನೋಡಬಾರದು' 'ಕೇಳಬಾರದು ಎಂದರೆ ಕೇಳಬಾರದು' ಆದರೆ ನಿಗ್ರಹಿಸಿಕೊಳ್ಳುವ ಶಕ್ತಿಯನ್ನು ಸಾಧನೆಯಲ್ಲಿಯೇ ಪಡೆದುಕೊಳ್ಳುತ್ತೀರಿ. ಸಾಧನೆಯ

ಮೂಲಕ ಮೇಧಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತೀರಿ. ಬುದ್ಧಿ ವಿಕಾಸ ಮಾಡಿಕೊಳ್ಳುತ್ತಾರೆ. ಜ್ಞಾನ ಹೆಚ್ಚಿಸಿಕೊಳ್ಳುತ್ತಲೇ ಇರುತ್ತೀರಿ.

ಮನಸ್ಸು ಅಶುದ್ಧವಾಗಿ ಇರುವಷ್ಟು ಕಾಲ ಆತ್ಮದಿಂದ ಬುದ್ದಿಗೆ ಪ್ರಜ್ಞೆ ಸಿಗುವುದಿಲ್ಲ. ಮನಸ್ಸನ್ನು ಶುದ್ಧವಾಗಿ ಇರಿಸಿಕೊಂಡರೆನೇ ಆತ್ಮದಿಂದ ಬರುವ ಪ್ರಜ್ಞೆಯು ಬುದ್ಧಿಗೆ ಸಿಗುತ್ತದೆ. ಇದೆ ನಮಗೆ ಗುರುತು. ನಮಗೆ ಆತ್ಮದಿಂದ ಪ್ರಜ್ಞೆ ಸಿಗುತ್ತಿಲ್ಲ ಎಂದರೆ ಈ ಜನ್ಮದಲ್ಲಿ ಮಾಡಿದ ಕರ್ಮಗಳೋ ಅಥವಾ ಗತಜನ್ಮದಲ್ಲಿನ ವಾಸನೆಗಳೋ ಇನ್ನೂ ನಿಮ್ಮ ಮನಸ್ಸನ್ನು ಹಿಡಿದುಕೊಂಡಿವೆ ಎಂದು ಅರ್ಥ ಮಾಡಿಕೊಳ್ಳಬೇಕು.

ಹಾಗೆಯೇ ಇಲ್ಲಿ ನನಗೆ ಅಹಂಕಾರ, ಮಮಕಾರ ಇದ್ದರೆ ನಾನು ಸತ್ಯಕ್ಕೆ ದೂರವಾಗುತ್ತೇನೆ. ಸತ್ಯಕ್ಕೆ ಹತ್ತಿರವಾಗಬೇಕು ಎಂದರೆ ಈ ಎರಡನ್ನು ಬಿಡಬೇಕು. ಸತ್ಯಕ್ಕೆ ದೂರವಾಗುವ ಕೆಲಸಗಳನ್ನು ಮಾಡಬಾರದು ಎಂದು ತಿಳಿದುಕೊಳ್ಳಬೇಕು.

ಅದಕ್ಕೆ ಬೇರೆಯವರು ಹೇಗೆ ವರ್ತಿಸುತ್ತಿದ್ದರೂ ನಿಮಗೆ ಅವರ ಅಗತ್ಯವಿಲ್ಲ. ಏಕೆಂದರೆ ಅವನ ವರ್ತನೆ ನಿಮ್ಮ ಸಾಧನೆಯನ್ನು ಕಡಿಮೆಮಾಡುವುದಿಲ್ಲ. ನಿಮ್ಮ ಜ್ಞಾನವನ್ನು ಕಡಿಮೆಮಾಡುವುದಿಲ್ಲ. ನಿಮ್ಮ ಸಾಧನೆಯನ್ನು, ಜ್ಞಾನವನ್ನು ಕಡಿಮೆಯಾಗಿಸುವುದು ನಿಮ್ಮ ಮನಸ್ಸೇ.. ಏಕೆಂದರೆ ಮನಸ್ಸಿನಲ್ಲಿ ಯಾವಾಗಲೂ ಅಗತ್ಯವಿಲ್ಲದರ ಕುರಿತು ಆಲೋಚಿಸುತ್ತಾ, ನಿಮಗೆ ಒಂದು ಪೈಸೆಯೂ ಲಾಭವಿಲ್ಲದವರ ಕುರಿತು ಆಲೋಚಿಸುತ್ತಿದ್ದೀರಿ.. ಅವರನ್ನು ಅಪಾರ್ಥ ಮಾಡಿಕೊಳ್ಳುತ್ತಿದ್ದೀರಿ. ನಿಮ್ಮ ಮೇಲೆ ನಿಮಗೆ ತಿಳುವಳಿಕೆ ಇರುತ್ತಿಲ್ಲ.

ನಿನ್ನ ಮನಸ್ಸೇ ನಿಮಗೆ ಶತ್ರು. ಅವರನ್ನು ನೀನು ಸ್ವೀಕರಿಸುತ್ತಿರುವ ಕಾರಣವಾಗಿಯೇ ನಿನಗೆ ಸಾಧನೆಯಾಗುತ್ತಿಲ್ಲ ಅವರನ್ನು ಬಾಹ್ಯವಾಗಿ ಬಂಧುಗಳು ಎಂದುಕೊಳ್ಳುತ್ತಿರುವೆ. ಆದರೆ ಅಂತರಂಗದಲ್ಲಿ ಭಗವಂತನೇ ನಮಗೆ ಬಂಧು ಎಂದು ಯಾವಾಗ ಅಂದುಕೊಳ್ಳುವೆಯೋ, ಆಗ ಯಾವಾಗಲೂ ಆನಂದವೇ. ಅದಕ್ಕೆ ವಸಿಷ್ಠರು "ಬಾಹ್ಯ ಪ್ರಪಂಚದಲ್ಲಿರುವಾಗ ನೀನು ದ್ವೈತದಲ್ಲಿರು, ಆದರೆ ಅಂತರಂಗ ಪ್ರಪಂಚದಲ್ಲಿರುವಾಗ ಅದ್ವೈತದಲ್ಲಿರು".... ಎಂದು ಹೇಳುತ್ತಾರೆ.

ನಾನು ಆತ್ಮನು ನಾನು ಎಲ್ಲೆಡೆಯೂ ಇದ್ದೇನೆ, ನಾನು ಸರ್ವಾತ್ಮನು, ನಾನೇ ಪರಮಾತ್ಮ ಎಂದು ಯಾವಾಗಲೂ ಧ್ಯಾನದಲ್ಲಿ ನಿನಗೆ ನೀನು ನೆನಪಿಸಿಕೊಳ್ಳುತ್ತಾ ಇರಬೇಕು. ನಾನು ಆತ್ಮವಾಗಿದ್ದು, ಆತ್ಮಾನಭೂತಿ ಹೊಂದುತ್ತಿಲ್ಲ ಎಂದರೆ ಅದಕ್ಕೆ ಕಾರಣ ಮನಸ್ಸೇ, ಮನಸ್ಸು ಎಂದರೆ ಮೇಘದಂತೆ. ಅದು ಮನಸ್ಸು ಎನ್ನುವ ಪೊರೆ ಕವಿದಿದೆ. ನೋಡಿ ಸೂರ್ಯನಿಗೆ ಎಷ್ಟೋ ಪ್ರಕಾಶವಿರುತ್ತದೆ, ಮೇಘವು ಬಂದ ಕೂಡಲೇ ಆ ಪ್ರಕಾಶ

ಕಡಿಮೆಯಾಗುತ್ತದೆ. ಹಾಗೆಂದ ಮಾತ್ರಕ್ಕೆ ಸೂರ್ಯ ಇಲ್ಲ ಎಂದು ಅರ್ಥವೇ? .. ಅಲ್ಲ ಸೂರ್ಯನು ಇದ್ದಾನೆ, ಮೇಘಗಳು ಅಡ್ಡ ಬಂದುದರಿಂದ ಅವನ ಬೆಳಕು ಕಡಿಮೆಯಾಗಿದೆ.

ನಿಮಗೂ ಕೂಡಾ ಒಳಗಡೆ ಆನಂದ ಎನ್ನುವ ಪರಮಾತ್ಮ, ಕೋಟಿ ಸೂರ್ಯರ ಪ್ರಕಾಶವಿದೆ. ಮತ್ತೇ ಅಂತಹ ಪರಮಾತ್ಮರು ನೀವೇ ಆಗಿದ್ದು, ಈ ಭ್ರಾಂತಿಯಲ್ಲಿ ಏಕೆ ಬೀಳುತ್ತಿರುವಿರಿ? ಏಕೆಂದರೆ ಅಹಂಕಾರ, ಮಮಕಾರ ಎನ್ನುವ ಮೇಘಗಳು ಅಡ್ಡವಾಗಿದೆ. ಈ ಮೇಘಗಳನ್ನು ತೊಲಗಿಸಿಕೊಳ್ಳುವ ಮಾರ್ಗವೇ, ಧ್ಯಾನ ಸಾಧನೆ. ನೀವು ಧ್ಯಾನ ಮಾಡುತ್ತಾ ಈ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುತ್ತಾ ಇರಬೇಕು. ಹಾಗೆ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ಇರಬೇಕು.

ನಮ್ಮ ಪ್ರಕಾಶವನ್ನು ಹೊರಗೆ ತರಬೇಕು ಎಂದರೆ ನಾನು ಆತ್ಮ ಎನ್ನುವ ಜ್ಞಾನ ಯಾವ ಕಾರಣದಿಂದಲೂ ಮರೆಯಬಾರದು. ರೆಪ್ಪೆ ಅಲುಗಿದಷ್ಟು ಮರೆತರೂ, ಮತ್ತೆ ಮಾಯಾ ಪ್ರಪಂಚಕ್ಕೆ ತೆಗೆದುಕೊಂಡು ಹೋಗುತ್ತದೆ. ಅದಕ್ಕೆ ಅನುಕ್ಷಣ ನಾನು ಆತ್ಮ ಎನ್ನುವ ಅರಿವನ್ನು ಕಳೆದುಕೊಳ್ಳದೆ ಅದನ್ನು ಇನ್ನೂ ಇನ್ನೂ ನೆನಪಿನಲ್ಲಿರಿಸಿಕೊಳ್ಳಲು ಧ್ಯಾನ ಮಾಡಬೇಕು.

ಅಂದರೆ ಜಾಗೃತಾವಸ್ಥೆಯಲ್ಲಿ ಮರೆತು ಹೋಗುತ್ತಿದ್ದೀರಿ. ಮತ್ತೆ ಧ್ಯಾನದಲ್ಲಿ ಕುಳಿತಾಗ ನೆನಪು ತಂದುಕೊಳ್ಳುತ್ತೀರಿ. ಯಾವ ಕೆಲಸ ಮಾಡುತ್ತಿದ್ದರೂ, ನಾನು ಆತ್ಮ ಎನ್ನುವ ಅರಿವು ಕಳೆದುಕೊಳ್ಳದೆ ಇದ್ದಾಗ ಮನಸ್ಸಿಗೆ ಇರುವ ಮಲಿನವನ್ನು ತೊಲಗಿಸಿಕೊಳ್ಳುತ್ತೀರಿ. ಮಲಿನಗಳಾದ ಅಹಂಕಾರ, ಮಮಕಾರ ಯಾವಾಗ ಹೋಗುತ್ತವೆಯೋ.... ಆಗ ಶುದ್ಧ ಆತ್ಮವಾಗಿ ತಯಾರಾಗುತ್ತೀರಿ. ನಿಮ್ಮ ಮನಸ್ಸು ಕೊಳಕಿನಿಂದ ತುಂಬಿದ್ದು ಆ ಕೊಳೆಯನ್ನು ಹೋಗಲಾಡಿಸಿಕೊಳ್ಳುವ ಮಾರ್ಗವೇ ಧ್ಯಾನ.

ಈ ಧ್ಯಾನದಿಂದ ಮಾತ್ರ ತಪ್ಪು ಅಭಿಪ್ರಾಯಗಳನ್ನು, ಅಪಾರ್ಥಗಳೆಲ್ಲವನ್ನು ತೊಲಗಿಸಿಕೊಳ್ಳುವ ಒಂದು ಸರಿಯಾದ ತಿಳಿವಳಿಕೆಯೊಂದಿಗೆ ನೀವು ಅಭಿವೃದ್ಧಿ ಹೊಂದುವಿರಿ.

*** ***

# ಬ್ರಹ್ಮವಿದ್ಯೆಯ ಹಿರಿಮೆ!

ನೀವು ಈ ಬ್ರಹ್ಮವಿದ್ಯೆಯನ್ನು ಕಲಿಯುತ್ತಾ, ಅದರ ಕುರಿತು ತಿಳಿದುಕೊಳ್ಳುತ್ತಿದ್ದೀರಿ. ಈ ಬ್ರಹ್ಮವಿದ್ಯೆಯನ್ನು ಕಲಿತುಕೊಳ್ಳುವುದರಿಂದ ಬರುವ ಲಾಭಗಳೇನು? ಯಾರು ಈ ವಿದ್ಯೆಯನ್ನು ಕಲಿಯಲು ಅರ್ಹರು? ಎನ್ನುವುದನ್ನು ತಿಳಿದುಕೊಳ್ಳೋಣ. ಬ್ರಹ್ಮವಿದ್ಯೆ ಎಂದರೆ ಬ್ರಹ್ಮದ ಕುರಿತು ತಿಳಿಯಪಡಿಸುವ ವಿದ್ಯೆ.... ವಿದ್ಯೆ ಅಂದರೆ ಜ್ಞಾನ. ಬ್ರಹ್ಮದ ಕುರಿತು ತಿಳಿಸುವ ವಿದ್ಯೆಯನ್ನು ಪರಾವಿದ್ಯೆ ಎಂದು ಪ್ರಾಪಂಚಿಕ ವಿದ್ಯೆಯನ್ನು ಅಪರಾವಿದ್ಯೆಯೆಂದು ಹೇಳಲಾಗಿದೆ.

ಆದರೆ ಪ್ರಾಪಂಚಿಕ ವಿದ್ಯೆ ಕಲಿತುಕೊಳ್ಳಲು ಎಲ್ಲರಿಗೂ ಅರ್ಹತೆ ಇರುತ್ತದೆ. ಆದರೆ, ಪರಾ ವಿದ್ಯೆ ಕಲಿತುಕೊಳ್ಳಬೇಕೆಂದರೆ ಕೆಲವರಿಗೆ ಮಾತ್ರ ಅರ್ಹತೆ ಇರುತ್ತದೆ. ತುಂಬಾ ಜನರು ಈ ಪರವಿದ್ಯೆ ಕಲಿತುಕೊಂಡರೆ ಲಾಭವೇನು? ಇದು ಯಾವುದಕ್ಕೂ ಕೆಲಸಕ್ಕೆ ಬಾರದ ವಿದ್ಯೆ ಎಂದು ಹೇಳುತ್ತಾ ಇರುತ್ತಾರೆ. ಅಪರಾವಿದ್ಯೆ ಕಲಿತುಕೊಂಡರೆ ಸಾಕಷ್ಟು ಹಣ ಸಂಪಾದಿಸಬಹುದು ಎಂದು ಅಂದುಕೊಳ್ಳುತ್ತಾರೆಯೇ ಹೊರತು, ಪರಾವಿದ್ಯೆಯಿಂದ ಎಷ್ಟು ಉಪಯೋಗವೋ, ಎಷ್ಟು ಲಾಭವೋ ಕೂಡಾ ತಿಳಿದುಕೊಳ್ಳಲಾರದಷ್ಟು ಹೀನ ಸ್ಥಿತಿಯಲ್ಲಿ ಜನರು ಇದ್ದಾರೆ. ಅವರು ಅಜ್ಞಾನದಿಂದ ಹಾಗೆ ಮಾತನಾಡುತ್ತಾರೆ.

ಈ ಪರಾವಿದ್ಯೆ ಅಂದರೆ ಬ್ರಹ್ಮವಿದ್ಯೆಯ ಕುರಿತು ನಮಗೆ ವೇದಗಳಲ್ಲಿಯೂ ಹೇಳಲಾಗಿದೆ. ವೇದವೆಲ್ಲವೂ ಮೊದಲು ಅಪರಾವಿದ್ಯೆ ಕುರಿತು ಹೇಳಿ ನಂತರ ಪರಾವಿದ್ಯೆಯ ಕುರಿತು ಹೇಳುತ್ತದೆ. ಪರಾವಿದ್ಯೆಯನ್ನು ಕಲಿತವನು ಈ ಭೂಮಿ ಮೇಲೆ ಅಲ್ಲದೆ ಪರಲೋಕಗಳಲ್ಲಿಯೂ  ಆನಂದವನ್ನು, ಸೌಖ್ಯವನ್ನು ಹೊಂದುತ್ತಾನೆ ಎಂದು ಹೇಳಲಾಗಿದೆ.

ಆದರೆ ಚರಿತ್ರೆಯನ್ನು ನೋಡಿದರೆ ಪ್ರಪಂಚವೂ ನಿಧಾನವಾಗಿ 'ಕೃತಯುಗ ದಾಟಿ ತ್ರೇತಾಯುಗ'.... 'ತ್ರೇತಾಯುಗ ದಾಟಿ ದ್ವಾಪರ ಯುಗ' ... 'ದ್ವಾಪರ ಯುಗ ದಾಟಿ, ಕಲಿಯುಗ.... ಹೀಗೆ ಒಂದೊಂದು ಯುಗವು ಬದಲಾಗುತ್ತಾ  ಹೋದಂತೆ, ಮಾನವರಿಗೆ ಈ ಬ್ರಹ್ಮವಿದ್ಯೆಯ ಮೇಲೆ ಆಸಕ್ತಿ ಕಡಿಮೆಯಾಯಿತು. ಬ್ರಹ್ಮವಿದ್ಯೆಯ ಮೇಲೆ ಎಲ್ಲೋ ಸ್ವಲ್ಪ ಮಂದಿಗೆ ಆಸಕ್ತಿ ಇದೆಯಾಗಲಿ ಎಲ್ಲರಿಗೂ ಇಲ್ಲ ಎಂದು ನಮಗೆ ಅರ್ಥವಾಗುತ್ತಾ ಇದೆ.

ಹಾಗೆ ಈ ಅಪರಾವಿದ್ಯೆಯನ್ನು ಯಾರಾದರೂ ಕಲಿಯಬಹುದು. ಆದರೆ ಪರಾವಿದ್ಯೆ ಕಲಿತುಕೊಳ್ಳಲು ಮಾತ್ರ ಎಲ್ಲೋ ಸ್ವಲ್ಪ ಮಂದಿಗೋ ಅರ್ಹತೆ ಇರುತ್ತದೆ ಎಂದು

ಅಧ್ಯಯನ ಮಾಡಿದರೆ ನಮಗೆ ಅರ್ಥವಾಗುತ್ತದೆ. ಅಂದರೆ ಪರಮಾತ್ಮನನ್ನು ತಿಳಿದುಕೊಳ್ಳುವುದಕ್ಕೆ ಅರ್ಹತೆ ಕೆಲಜನರಿಗೆ ಮಾತ್ರವೇ ಇರುತ್ತದೆ. ಆದರೆ ಎಲ್ಲರಿಗೂ ಇರುವುದಿಲ್ಲ. ಆ ಪರಬ್ರಹ್ಮದ ಕುರಿತು ಅಧ್ಯಯನ ಮಾಡುವುದು ಅಂದರೆ ತುಂಬಾ ಕಷ್ಟ. ಆದರೆ ಇಷ್ಟಪಟ್ಟವರಿಗೆ ಯಾವುದೂ ಕಷ್ಟವಲ್ಲ. ಅದಕ್ಕೆ ಇದರ ಲಾಭಗಳನ್ನು ತಿಳಿದುಕೊಂಡವರಿಗೆ ಕಷ್ಟವಾಗುವುದಿಲ್ಲ.

ಆದರೆ ಅರ್ಹತೆ ಇಲ್ಲದವನಿಗೆ ಇದರ ಲಾಭವು ತಿಳಿಯುವುದಿಲ್ಲ. ಇದನ್ನು ಹೊಂದುವ ಅರ್ಹತೆಯು ಇರುವುದಿಲ್ಲ. ಪರಲೋಕ ಸೌಖ್ಯಗಳ ಕುರಿತು ಅರ್ಥವಾಗುವುದಿಲ್ಲ. ಕೆಲವರು ಪರಲೋಕಗಳು ಇದೆಯೋ? ಇಲ್ಲವೋ? ನಮಗೆ ತಿಳಿದಿಲ್ಲ ಆದ್ದರಿಂದ ಇಹಲೋಕದಲ್ಲಿ ಸುಖ ಪಡಬೇಕು ಎನ್ನುತ್ತಾರೆ. ಇಂತಹ ಮಾತುಗಳನ್ನು ಕೇಳಿದರೆ ನಾಸ್ತಿಕರಿಗೆ ಇವರಿಗೆ ದೊಡ್ಡ ವ್ಯತ್ಯಾಸ ಇಲ್ಲ ಎನಿಸುತ್ತದೆ. ಏಕೆಂದರೆ, ನಾಸ್ತಿಕರು 'ಏನೂ ಇಲ್ಲ' ಎಂದು ಹೇಳುತ್ತಾರೆ. ಆದರೆ ಇವರು 'ಇವೆಯೋ? ಇಲ್ಲವೋ?' ಎನ್ನುವ ಅನುಮಾನ ವ್ಯಕ್ತಪಡಿಸುತ್ತಾರೆ.

ನಮ್ಮ ಉಪನಿಷತ್ತುಗಳು ಏನು ಹೇಳುತ್ತವೆ? ಎಂದರೆ, ಪರಾವಿದ್ಯೆ ಇಲ್ಲದ ಜಾತಿ ಯಾವಾಗಲೂ ಹಿಂದಕ್ಕೆ ಹೋಗುತ್ತದೆ, ನಾಶವಾಗುತ್ತದೆ. ಪರಾದೀನರಾಗುತ್ತಾರೆ ಎಂದು ಹೇಳುತ್ತದೆ. ಯಾವಾಗಾದರೆ ಜನಗಳಲ್ಲಿ ಬ್ರಹ್ಮವಿದ್ಯೆ ಲೋಪಿಸುವುದೋ, ಆಗ ಜನರು ಪಶುಗಳಂತೆ ಪರಾಧೀನರಾಗುತ್ತಾರೆ ಎಂದು ವೇದಾಂತ ಹೇಳುತ್ತದೆ. ಹಾಗಾಗಿ ಸತ್ಯವನ್ನು ತಿಳಿದುಕೊಳ್ಳೋಣವೆಂದು ಕಷಾಯವನ್ನು ತೊಟ್ಟರೂ, ಅವರಲ್ಲಿ ಈ ಬ್ರಹ್ಮವಿದ್ಯೆಯಾದ ಧ್ಯಾನದ ಕೊರತೆ ಇದ್ದರೆ ಅವರು ಸಾಧುಗಳು ಆಗಲಾರರು. ಸತ್ಯವನ್ನು ತಿಳಿದುಕೊಂಡವರು, ಸತ್ಯದಲ್ಲಿ ಜೀವಿಸುವವರೇ, ನಿಜವಾದ ಸಾಧುಗಳು.

ಹಾಗೆ ಯಾರಿಗಾದರೆ ಬಾಹ್ಯೇಂದ್ರಿಯ ನಿಗ್ರಹ, ಅಂತರೇಂದ್ರಿಯ ನಿಗ್ರಹ ಇರುವುದೋ, ಯಾರು ಗುರುವಿನ ಮೂಲಕ ತಿಳಿದುಕೊಂಡ ಬ್ರಹ್ಮಜ್ಞಾನವನ್ನು ಧ್ಯಾನದ ಮೂಲಕ ಅನುಭವಕ್ಕೆ ತಂದುಕೊಳ್ಳುತ್ತಾರೋ, ಅವರೇ ಸತ್ಯವನ್ನು ಹೇಳುವ ಅರ್ಹತೆಯನ್ನು ಸಂಪಾದಿಸಿಕೊಳ್ಳುತ್ತಾರೆ. ಅಂದರೆ ಗುರುವಿನ ಮೂಲಕ 'ಅಹಂಬ್ರಹ್ಮಾಸ್ಮಿ' ''ತತ್ವಮಸಿ' 'ಸರ್ವಂ ಖಲ್ವಿದಂ ಬ್ರಹ್ಮ' ಎನ್ನುವುದು ತಿಳಿದಾಗ. ಅಂದರೆ ಈ ಸೃಷ್ಟಿಯೆಲ್ಲವೂ ಬ್ರಹ್ಮಮಯವೇ, ಬ್ರಹ್ಮನ ಒಂದು ಚೈತನ್ಯದೊಂದಿಗೆ ಈ ಸೃಷ್ಟಿ ನಡೆಯುತ್ತಿದೆ ಎಂದು ತಿಳಿದು ಕೊಂಡಾಗ, ಈ ಬ್ರಹ್ಮವಿದ್ಯೆ ಅವರಿಗೆ ಚೆನ್ನಾಗಿ ಅರ್ಥವಾಗುತ್ತದೆ. ಅದಕ್ಕೆ ತೀವ್ರಾತಿ ತೀವ್ರವಾದ ಸಾಧನೆ ಇರಬೇಕು. ಧ್ಯಾನ ಇಲ್ಲದಿದ್ದರೆ ಗುರು ಹೇಳಿದ ವಿದ್ಯೆ ಬರುವುದಿಲ್ಲ. ಗುರು ಹೇಳುತ್ತಾನೆ... ಆದರೆ ಶಿಷ್ಯನು ಅದನ್ನು ಅನುಭವಕ್ಕೆ ತಂದುಕೊಳ್ಳಲು ಪ್ರಯತ್ನಿಸಬೇಕು.

ಅದಕ್ಕೆ ಈ ಬ್ರಹ್ಮ ವಿದ್ಯೆ ಇಲ್ಲದವರು ಪರಾಧೀನದ ಜೀವನವನ್ನು ಜೀವಿಸುತ್ತಾ ಇರುತ್ತಾರೆ ಎಂದು ಹೇಳಿದ್ದಾರೆ. ಸಾಧುಗಳು ಎಂದು ಹೇಳಿಕೊಂಡವರೂ ಕೂಡಾ ಈ ಬ್ರಹ್ಮವಿದ್ಯೆಯನ್ನು ಅರ್ಥ ಮಾಡಿಕೊಳ್ಳಲಾಗದೆ, ಆಚರಣೆಯಲ್ಲಿಡಲಾಗದೇ, ಧ್ಯಾನವಿಲ್ಲದೆ, ಬಾಹ್ಯೇಂದ್ರಿಯ, ಅಂತರೇಂದ್ರಿಯ ನಿಗ್ರಹ ಇಲ್ಲದೆ ಸತ್ಯವನ್ನು ಹೇಳುವ ಅರ್ಹತೆ ಕಳೆದುಕೊಳ್ಳುತ್ತಾರೆ ಎಂದು ಎಷ್ಟೋ ಸ್ಪಷ್ಟವಾಗಿ ನಮ್ಮ ವೇದಾಂತ ಕಟ್ಟಕಡೆಯದಾಗಿ ಎಚ್ಚರಿಕೆ ನೀಡಿದೆ.

ತುಂಬಾ ಜನರು ನಾವು ಕ್ಲಾಸ್ ಹೇಳುತ್ತೇವೆ, ಧ್ಯಾನ ಮಾಡುವ ಅಗತ್ಯವಿಲ್ಲ ಎಂದುಕೊಳ್ಳುತ್ತಾರೆ. ಆದರೆ ವೇದಾಂತ ಸ್ಪಷ್ಟವಾಗಿ ಹೇಳಿದೆ, ನೀವು ಎಷ್ಟು ತಿಳಿದುಕೊಂಡರು, ಕಲಿತುಕೊಂಡರು, ಆತ್ಮವಿದ್ಯೆ, ಬ್ರಹ್ಮವಿದ್ಯೆ ಸಾಧನೆ ಲೋಪವಾದರೆ ಇಂದ್ರಿಯ ನಿಗ್ರಹವಿಲ್ಲದೆ ಹೇಳುವ ಅರ್ಹತೆಯನ್ನು ಕಳೆದುಕೊಳ್ಳುವಿರಿ. ಅದಕ್ಕೆ ಬ್ರಹ್ಮವಿದ್ಯೆ ಎನ್ನುವುದು ಕತ್ತಿಯ ಮೇಲೆ ಇರುವ ಸಾಣೆಯಂತಹುದು ಎನ್ನುತ್ತಾರೆ. ಏಕೆ ಹೇಳಿದ್ದಾರೆ ಎಂದು ನಾವು ಇವೆಲ್ಲವನ್ನೂ ಓದುತ್ತಿದ್ದರೆ ಅರ್ಥವಾಗುತ್ತದೆ.

ಧ್ಯಾನದ ಮೇಲೆ ಅಶ್ರದ್ಧೆಯಿದ್ದರೂ, ಇಂದ್ರಿಯ ನಿಗ್ರಹವಿಲ್ಲದಿದ್ದರೂ, ಧರ್ಮವನ್ನು ಆಚರಿಸಿದಿದ್ದರೂ, ಅಪವಿತ್ರವಾದ ಜೀವನ ಮಾಡುತ್ತಿದ್ದರೂ, ಸತ್ಯವನ್ನು ಹೇಳುವ ಅರ್ಹತೆಯನ್ನು ಕಳೆದುಕೊಳ್ಳುತ್ತಾರೆ. ಹಾಗಾಗಿ ಅವರು ಪರಾಧೀನ ಜೀವನಗಳನ್ನು ಜೀವಿಸುತ್ತಾರೆ ಎಂದು ಹೇಳಲಾಗಿದೆ.

ಅದಕ್ಕೆ " 'ರತ್ನಗರ್ಭ'ವಾದ ನನ್ನ ದೇಶ ಆಧ್ಯಾತ್ಮಿಕತೆಯ ಕೊರತೆಯಿಂದ ದೇಶವು ಸಾಲದ ಪಾಲಾಗಿದೆ. ಯಾವಾಗ ನನ್ನ ದೇಶ ಆಧ್ಯಾತ್ಮಿಕತೆಯಲ್ಲಿ ಮುಂದೆ ಇರುತ್ತದೋ ಮತ್ತೆ ಅದು ಮತ್ತೆ ರತ್ನಗರ್ಭವಾಗುತ್ತದೆ " ಎಂದು ವಿವೇಕಾನಂದರು ಹೇಳಿದ್ದಾರೆ. ಈ ಲೋಕದಲ್ಲಿ ಚಕ್ರವರ್ತಿಗಳಿಗಿಂತ ಚಕ್ರವರ್ತಿ ಯಾರಯ್ಯಾ ಎಂದರೆ ಬ್ರಹ್ಮ ವಿದ್ಯೆಯನ್ನು ಕಲಿತುಕೊಂಡವನೇ ಎಂದು ಆ ದಿನಗಳಲ್ಲಿ ಬಹಳ ಹೆಮ್ಮೆಯಿಂದ ಹೇಳುತ್ತಿದ್ದರು.

ಏಕೆಂದರೆ ಚಕ್ರವರ್ತಿಗಳು ಕೂಡಾ ಬ್ರಹ್ಮವಿದ್ಯೆ ಕಲಿತ ಬ್ರಹ್ಮಜ್ಞಾನಿಯ ಪಾದಕ್ಕೆ ನಮಿಸುತ್ತಿದ್ದರು. ಆದರೆ 'ಬ್ರಹ್ಮಜ್ಞಾನಿ' ಯಾವಾಗಲೂ ಯಾರ ಕಾಲುಗಳನ್ನು ಹಿಡಿದುಕೊಳ್ಳುವುದಿಲ್ಲ. ಅಂದರೆ ಇದರ ಅರ್ಥ ಬ್ರಹ್ಮವಿದ್ಯೆ ಅಷ್ಟು ಉನ್ನತವಾದದ್ದು. ಆ ಪರಬ್ರಹ್ಮದ ಕುರಿತು ತಿಳಿದುಕೊಳ್ಳುವ ವಿದ್ಯೆ.

ಹಾಗಾದರೆ ಈ ಬ್ರಹ್ಮವಿದ್ಯೆಯಿಂದ ಲಾಭವೇನು? ಎಂದರೆ 'ಇಹಲೋಕದಲ್ಲಿ ಗೌರವ, ಪರಲೋಕದಲ್ಲಿ ಆನಂದ' ಹೊಂದುತ್ತಾರೆ ಎಂದು ಹೇಳಿದ್ದಾರೆ. ಹಾಗೆ ಗಮನಿಸಿದರೆ ಎಂತಹ ಪಾಪಾತ್ಮನಾದರೂ, ಸಮುದ್ರದಷ್ಟು ಪಾಪಗಳನ್ನು ಮಾಡಿದರೂ,

ಆ ಪಾಪಗಳಿಂದ ಈ ಭೂಲೋಕದಲ್ಲಿಯೇ ಬ್ರಹ್ಮವಿದ್ಯೆಯ ಮೂಲಕ ವಿಮುಕ್ತರಾಗಬಹುದು ಎಂದು ಕೂಡಾ ಹೇಳಿದ್ದಾರೆ. ಅಪವಿತ್ರವಾದ ಮನಸ್ಸು ಇರುವವನಿಗೆ ಬ್ರಹ್ಮವಿದ್ಯೆ ಬರುವುದಿಲ್ಲ. ಅದನ್ನು ತಿಳಿದುಕೊಳ್ಳಲಾರರು ಎಂದಿದ್ದಾರೆ. ಆದರೆ ಯಾವಾಗ ಬ್ರಹ್ಮ ವಿದ್ಯೆ ಕಲಿತು ಸಾಧನೆ ಮಾಡುವರೋ, ಈ ಭೂಮಿಯ ಮೇಲೆ ಇರುವಾಗಲೇ ನರಕಕ್ಕೆ ಹೋಗಬೇಕಾದ ಅಗತ್ಯವಿರುವುದಿಲ್ಲ.

ವಾಲ್ಮೀಕಿ ಚರಿತ್ರೆ ತೆಗೆದುಕೊಂಡರೆ ಆತ ಎಷ್ಟೋ ಜೀವಿಗಳನ್ನು ಭೇಟೆಯಾಡಿದನು, ಹಿಂಸಿಸಿದನು, ಎಷ್ಟೋ ಪಾಪವನ್ನು ಮಾಡಿದನು. ಆದರೂ ಒಬ್ಬ ಬ್ರಹ್ಮಜ್ಞಾನಿಯಾದ ನಾರದರ ಬಾಯಿಯಿಂದ ಬ್ರಹ್ಮಜ್ಞಾನ ತಿಳಿದುಕೊಂಡು ಎಷ್ಟೋ ಕಷ್ಟಪಟ್ಟು 14 ವರ್ಷಗಳು ಏಕಧಾಟಿಯಾಗಿ ದೃಢವಾಗಿ ಧ್ಯಾನದಲ್ಲಿ ಕುಳಿತು ಕೊಂಡನು. ಪ್ರತಿಯೊಬ್ಬರ ಒಳಗೆ ಆ ಶಕ್ತಿ ಇದೆ, ಆದರೆ ಪ್ರಯತ್ನ ಮಾಡದೇ ಇರುವುದರಿಂದ ಸಾಧಿಸಲಾರರು.

"ಈ ಪ್ರಪಂಚ ಬೇಕು ಎಂದುಕೊಂಡರೆ ಮನಸ್ಸಿನ ಪ್ರಮೇಯವಿರುತ್ತದೆ. ಆದರೆ ಈ ಪ್ರಪಂಚ ಬೇಡ ಪರಲೋಕದಲ್ಲಿ ಮೋಕ್ಷವೇ ಬೇಕೆಂದುಕೊಂಡವರಿಗೆ, ಆತ್ಮಶಕ್ತಿ ಅನಂತವಾಗಿ ಕೆಲಸ ಮಾಡುತ್ತದೆ ಎನ್ನುವುದು ನಮಗೆ ವಾಲ್ಮೀಕಿ ಚರಿತ್ರೆಯನ್ನು ನೋಡಿದರೆ ಅರ್ಥವಾಗುತ್ತದೆ. ಮನಸ್ಸಿಗೆ ಪ್ರಾಧಾನ್ಯತೆ ನೀಡಿದಾಗ ಈ ಶರೀರಕ್ಕೆ ಆಹಾರ ಬೇಕು ಇನ್ನೂ ತುಂಬಾ ಬೇಕು ಆದರೆ ವಾಲ್ಮೀಕಿ ಆತ್ಮಕ್ಕೆ ಪ್ರಧಾನ್ಯತೆ ನೀಡಿದರು.

ಯಾರಿಗೇ ಆದರೂ ಶರೀರವು ನಶಿಸಿ ಹೋಗುವುದೇ, ಆದರೆ ಧ್ಯಾನದಲ್ಲಿ ಮರಣಿಸಿದರೂ, ಮರುಜನ್ಮವು ಉತ್ತಮ ಜನ್ಮ ಬರುತ್ತದೆ ಎಂದು ನಾರದರು ಯಾವಾಗಾದರೆ ಭೋದಿಸಿದರೋ, ಆಗ ವಾಲ್ಮೀಕಿ ಎಷ್ಟೋ ಕಷ್ಟಪಟ್ಟು ಸಾಧನೆ ಮಾಡಿ ಬ್ರಹ್ಮಜ್ಞಾನಿಯಾಗಿ ಬೆಳೆದು ಪಾಪದ ಲೋಕಗಳಿಗೆ ಹೋಗಬೇಕಾದವನು, ಮೋಕ್ಷ ಸ್ಥಿತಿಗೆ ಸೇರಿದನು. ಅಂದರೆ ಕಷ್ಟವಾದ ಈ ಬ್ರಹ್ಮವಿದ್ಯೆಗಾಗಿ ಪ್ರಯತ್ನಿಸುತ್ತಾ, ಸಾಧನೆ ಮಾಡಿದರೆ ನರಕಕ್ಕೆ ಹೋಗಬೇಕಾದ ಸ್ಥಿತಿಯಿಂದ ಮೋಕ್ಷವನ್ನು ಹೊಂದುವ ಅರ್ಹತೆಗೆ ಬರುತ್ತದೆ ಎಂದು ಇಲ್ಲಿ ಹೇಳಲಾಗಿದೆ.

ಆದರೆ ಒಬ್ಬೊಬ್ಬರು ಓದುವುದಿಲ್ಲ ಅಂದರೆ ತಿಳಿದುಕೊಳ್ಳುವುದಿಲ್ಲ. ಆಗ ಅವರಿಗೆ ಪರಾವಿದ್ಯೆ ಹೊಂದುವ ಅವಕಾಶ ಸಿಗದೇ ಇರಬಹುದು. ಆದರೆ ಅವರಿಗೆ ಯಾವುದೋ ಪುಣ್ಯದಿಂದ ನಾರದರಂತಹ ಗುರು ದೊರೆತಾಗ, ಅವರಿಂದ ಈ ಜ್ಞಾನದ ಕುರಿತು ಕೇಳಿದಾಗ, ಅವರು ಎಷ್ಟೇ ಪಾಪಾತ್ಮರಾದರೂ ಸಹ, ತನ್ನ ಪ್ರಯತ್ನದಿಂದ ಪಾಪರಹಿತರಾಗುವ ಅರ್ಹತೆ ಇದೆ ಎಂದು ವಾಲ್ಮೀಕಿ ಚರಿತ್ರೆಯನ್ನು ಓದಿದರೆ ಎಲ್ಲರಿಗೂ ಅರ್ಥವಾಗುತ್ತದೆ.

ಆದರೆ ಒಮ್ಮೆ ಕೇಳಿ ಸಾಧನೆಯಲ್ಲಿ ಕುಳಿತುಕೊಳ್ಳುವುದಲ್ಲ. ಆ ತ್ರೇತಾಯುಗದಲ್ಲಿ ರತ್ನಾಕರನಿಗೆ ದೊರೆತ ವಾತಾವರಣ ಈ ಯುಗದಲ್ಲಿ ನಮಗೆ ಸಿಗದೇ ಇರಬಹುದು. ಅದಕ್ಕೆ ದ್ವಾಪರ ಯುಗದಲ್ಲಿ ಕಟ್ಟ ಕಡೆಯದಾಗಿ ಹೇಳಿದ ಈ ವೇದಾಂತ ಏನು ಹೇಳುತ್ತದೆ ಎಂದರೆ, ಬ್ರಹ್ಮವಿದ್ಯೆ ಹೊಂದಬೇಕು ಎಂದರೆ, ನಿತ್ಯವೂ ಬ್ರಹ್ಮ ವಿಚಾರಣೆ ಇರಬೇಕು. ಅದಕ್ಕೆ ವಿಚಾರಣೆ... ವಿಚಾರಣೆ ಎಂದು ನಾವು ಎಷ್ಟೋ ಸಾರಿ ಹೇಳಿಕೊಳ್ಳುತ್ತೇವೆ.

'ಬ್ರಹ್ಮ'ವು ಎಂದರೆ ಯಾರು? ಎನ್ನುವ ವಿಚಾರಣೆ ನಡೆಯಬೇಕು. ಬ್ರಹ್ಮ ಎಂದರೆ ಸರ್ವಜೀವಿಗಳಲ್ಲಿ ಅಂತರ್ಯಾಮಿಯಾಗಿ, ಆತ್ಮವಾಗಿ ಇರುವವನು. ಸೃಷ್ಟಿಯೆಲ್ಲವನ್ನು ತನ್ನ ಚೈತನ್ಯದಿಂದಲೇ ನಡೆಸುತ್ತಿರುವವನು. ಹಾಗಾಗಿ ಅರ್ಹತೆ ಇರುವವರಿಗೆ, ಈ ಪ್ರಕೃತಿಯ ಮೂಲಕ ಎಲ್ಲವನ್ನು ನೀಡಲಾಗುತ್ತಿದೆ ಎಂದು ನಾವು ತಿಳಿದುಕೊಳ್ಳುತ್ತಾ ನಿತ್ಯವೂ ಈ ಬ್ರಹ್ಮ ವಿಚಾರಣೆ ನಡೆಸುತ್ತಾ ಇರಬೇಕು.

ಹಾಗೆಯೇ 'ಸಮವು' ಎಂದರೆ ಅಂತರೇಂದ್ರಿಯ ನಿಗ್ರಹವಿರಬೇಕು. ಮನುಷ್ಯ ಮನಸ್ಸಿನ ಪ್ರಭಾವದೊಂದಿಗೆ ಜೀವಿಸುತ್ತಾನೆ. ಆದ್ದರಿಂದ ಮೊದಲು 'ಸಮ'ವೇ ಇರಬೇಕೆಂದು ಹೇಳುತ್ತಾರೆ. ಅಂದರೆ ಮನಸ್ಸಿಗೆ ಈ ಬ್ರಹ್ಮದ ಕುರಿತು ತಿಳಿಸುತ್ತಾ, ಇದ್ದರೆ ಪ್ರಾಪಂಚಿಕತೆಯ ಮೇಲೆ ಆಸಕ್ತಿ ಕಡಿಮೆಯಾಗಿ ಬ್ರಹ್ಮದ ಮೇಲೆ ಆಸಕ್ತಿ ಉಂಟಾಗುತ್ತದೆ. ಪ್ರಪಂಚದಲ್ಲಿರುತ್ತಾ ಪ್ರಪಂಚದ ಮೇಲೆ ಆಸಕ್ತಿ ಕಡಿಮೆ ಮಾಡಿಕೊಳ್ಳುತ್ತಾ ಇರುವುದು ತುಂಬಾ ಕಷ್ಟ. ಆದರೆ ನೋಡುವ ಪ್ರತಿಯೊಂದರ ಹಿಂದೆ ಆ ಪರಮಾತ್ಮನ ಶಕ್ತಿ ಇದೆ. ಒಂದು ಆಹಾರ ತೆಗೆದುಕೊಂಡರೂ, ಶ್ವಾಸವನ್ನು ತೆಗೆದುಕೊಂಡರೂ, ಒಂದು ಪಾನೀಯವನ್ನು ತೆಗೆದುಕೊಂಡರೂ, ಫಲಗಳನ್ನು ತಿನ್ನುತ್ತಿದ್ದರೂ ಬರುವ ಒಂದು ವೈಭೋಗವೆಲ್ಲಾ, ಶಕ್ತಿಯೆಲ್ಲಾ ಬ್ರಹ್ಮದ ಚೈತನ್ಯದೊಂದಿಗೆ ನಡೆಯುತ್ತದೆ.

ಈ ಪ್ರಪಂಚದಲ್ಲಿ ಇರುತ್ತಾ, ಹೀಗೆ ಪ್ರತಿಯೊಂದನ್ನು ವಿಚಾರಣೆ ಮಾಡುತ್ತಾ ಈ ಬ್ರಹ್ಮವಿದ್ಯೆಯ ಕುರಿತು ತಿಳಿದುಕೊಳ್ಳದಿದ್ದರೆ ನೀನು ಅಸಂಪೂರ್ಣವಾಗಿ ತಿಳಿದುಕೊಂಡಂತೆ. ಬ್ರಹ್ಮವಿದ್ಯೆ ತಿಳಿದುಕೊಂಡಾಗಲೇ ನೀನು ಸಂಪೂರ್ಣವಾಗಿ ತಿಳಿದುಕೊಂಡಂತೆ.

ಕೆಲವರು ಏನು ಮಾಡುತ್ತಾರೆಂದರೆ, ಗುರುವಿನ ಮೂಲಕ ಈ ಆತ್ಮಜ್ಞಾನ, ಬ್ರಹ್ಮಜ್ಞಾನ ತಿಳಿದುಕೊಂಡರೂ, ಆಸಕ್ತಿ ತೋರಿಸುವುದಿಲ್ಲ. ಏಕೆ ತೋರಿಸುವುದಿಲ್ಲ ಅಂದರೆ ಅವರಿಗೆ ಇದರ ಕುರಿತು ಅಧ್ಯಯನ ಮಾಡುವುದು, ವಿಚಾರಣೆ ಮಾಡುವುದರ ಕುರಿತು ತಿಳಿದಿಲ್ಲ. ಅದನ್ನು ಮಾಡುವುದು ಹೇಗೆ ಎನ್ನುವುದು ತಿಳಿದಿಲ್ಲ. ಆದರೆ ಇವೆಲ್ಲವೂ ನಮಗೆ ತಿಳಿಯುತ್ತಿವೆ ಎಂದರೆ ನಮಗೆ ಅರ್ಹತೆ ಇದೆ ಎಂದು ಅರ್ಥ ಮಾಡಿಕೊಳ್ಳಬೇಕು. ಯಾರು ಬ್ರಹ್ಮಜ್ಞಾನದ ಕುರಿತು ವಿಚಾರಣೆ ಮಾಡುತ್ತಾ, ಈ ವಿಷಯಗಳನ್ನೆಲ್ಲ ಶೇಖರಿಸುತ್ತಾರೋ ಅವರಿಗೆ ಬ್ರಹ್ಮನ ಮೇಲೆ ಆಸಕ್ತಿ ಹೆಚ್ಚುತ್ತದೆ.

ಹಾಗೆಯೇ, ಧಮವು ಅಂದರೆ ಬಾಹ್ಯೇಂದ್ರಿಯ ನಿಗ್ರಹವೂ ಇರಬೇಕು. ಪ್ರಪಂಚದಲ್ಲಿರುತ್ತಾ, ನಿಮ್ಮ ಬಾಹ್ಯೇಂದ್ರಿಯಗಳು ಪ್ರಪಂಚದಲ್ಲಿರುವುದನ್ನು ಸಂಪಾದಿಸಲು ಉಪಯೋಗಿಸುವಿರಿ ಅಥವಾ ಪ್ರಪಂಚದಲ್ಲಿ ಇರುವುದನ್ನು ಅನುಭವಿಸಲೇ ಉಪಯೋಗಿಸುವಿರಿ. ಆದರೆ ಈ ಇಂದ್ರಿಯಗಳೊಂದಿಗೆ ಸ್ವಾಧ್ಯಾಯಬೇಕು. ಕಿವಿಗಳೊಂದಿಗೆ ಬೋಧನೆಗಳನ್ನು ಕೇಳಬೇಕು. ಬಾಯಿಯನ್ನು ಸತ್ಯವನ್ನು ಹೇಳಲು ಉಪಯೋಗಿಸಿಕೊಳ್ಳಬೇಕು.

ಅಂದರೆ ಮೊದಲು ಸತ್ಯದ ಕುರಿತು ಅಧ್ಯಯನ ಮಾಡಿದರೆ, ಅಂತರೇಂದ್ರಿಯಗಳನ್ನು, ಬಾಹ್ಯೇಂದ್ರಿಯಗಳನ್ನು ಸತ್ಯಕ್ಕಾಗಿ ಉಪಯೋಗಿಸಿಕೊಳ್ಳುವ ಅರ್ಹತೆ ಬರುತ್ತದೆ. ಎಷ್ಟು ಅಧ್ಯಯನ ಮಾಡಿದರೆ ಅಷ್ಟು ಸತ್ಯವನ್ನು ಹೇಳುವ ಅರ್ಹತೆ ನಿಮಗೆ ಬರುತ್ತದೆ ಎಂದು ಹೇಳುತ್ತಾರೆ. ನೀವು ಆತ್ಮಜ್ಞಾನ, ಬ್ರಹ್ಮ ಜ್ಞಾನ ಬೆಳೆಸಿಕೊಳ್ಳುತ್ತಿರುವಾಗ... ನಿಮ್ಮಲ್ಲಿ ಅವಿದ್ಯೆ, ಅಜ್ಞಾನ, ಅಹಂಕಾರ ಈ ಮೂರು ನಾಶವಾಗುತ್ತವೆ.

ನೀವು ಯಾವಾಗಾದರೆ ಬ್ರಹ್ಮದ ಕುರಿತು ಅಧ್ಯಯನ ಮಾಡುವಿರೋ, ಆಗ ನಿಮಗೆ ತಿಳಿವಳಿಕೆಯ ಶಕ್ತಿ ಹೆಚ್ಚುತ್ತದೆ. ನಿಮ್ಮಲ್ಲಿ ಅಜ್ಞಾನ ಹೋಗಿ ಜ್ಞಾನ ಬೆಳೆಸಿಕೊಳ್ಳುತ್ತಾ ಇರುತ್ತೀರಿ... ಹಾಗೆ ನಾನು ಎನ್ನುವ ಈ ದೇಹಕ್ಕೆ ಪ್ರಾಪಂಚಿಕ ವಿದ್ಯೆಯಿಂದಾಗಲಿ, ಹಣದಿಂದಾಗಲಿ, ಅಹಂಕಾರ ಹೆಚ್ಚಾಗುತ್ತದೆ. ಆದರೆ ಬ್ರಹ್ಮಜ್ಞಾನ ತಿಳಿದುಕೊಂಡ ಕೂಡಲೇ ನನ್ನದು ಎನ್ನುವುದು ಯಾವುದು ಇಲ್ಲ, ಎಲ್ಲಾ ಪರಮಾತ್ಮನದೇ, ನನ್ನ ದೊಡ್ಡಸ್ತಿಕೆ ಏನು ಇಲ್ಲ ಎಂದುಕೊಳ್ಳುತ್ತೀರಿ. ಅಹಂಕಾರವೂ ನಶಿಸುತ್ತದೆ. ಈ ಬ್ರಹ್ಮಜ್ಞಾನದಿಂದ ಅಹಂಕಾರ, ಅವಿದ್ಯೆ, ಅಜ್ಞಾನವು ಹೋಗುತ್ತವೆ.

ಹಾಗೆಯೇ ಬ್ರಹ್ಮಜ್ಞಾನದಿಂದ ಸತ್ಶೀಲ, ಪವಿತ್ರತೆ ಈ ಎರಡು ಅಭ್ಯಾಸವಾಗುತ್ತವೆ. ಸತ್‌ಶೀಲ ಎಂದರೆ (ಕ್ಯಾರೆಕ್ಟರ್) ನಡತೆ ಯಾವಾಗ ನಡತೆ ಸರಿಯಾಗಿ ಇರಿಸಿಕೊಳ್ಳುವರೋ ಆಗ ಅವರಲ್ಲಿ ಸತ್ಪ್ರವರ್ತನೆ ಬರುತ್ತದೆ. ಅಂದರೆ ಎಲ್ಲರೊಂದಿಗೆ ಪ್ರೇಮದಿಂದ ಇರಬಲ್ಲರು. ಪ್ರತಿಯೊಬ್ಬರಲ್ಲೂ ಅಂತರ್ಯಾಮಿಯಾಗಿ ಪರಮಾತ್ಮನಿದ್ದಾನೆ ಆದ್ದರಿಂದ ಪ್ರತಿಯೊಬ್ಬರನ್ನು ಕೂಡಾ ಪ್ರೀತಿಸುವ ಮನಸ್ಥಿತಿ ಬರುತ್ತದೆ. ನಿಮ್ಮಲ್ಲಿ ಅಪವಿತ್ರತೆ ಹೋಗಿ ಪವಿತ್ರತೆ ಯಾವಾಗ ಬರುವುದೋ, ಸತ್‌ಶೀಲ ಯಾವಾಗ ಬರುವುದೋ ಆಗ ನಿಮಗೆ ಸತ್ಯವನ್ನು ನಿರ್ಭಯವಾಗಿ ಮಾತನಾಡಬಲ್ಲ ಶಕ್ತಿ ಬರುತ್ತದೆ.

ತುಂಬಾ ಜನರು ನಮಗೆ ಭಯ ಎಂದು ಹೇಳುತ್ತಾರೆ. ಏಕೆ ಭಯ ಅಂದರೆ ಎಲ್ಲೋ ತಪ್ಪು ನಡೆಯುತ್ತಿದೆ. ನೀವು ಇನ್ನೂ ಮಮಕಾರಕ್ಕೆ, ಅಹಂಕಾರಕ್ಕೆ ಭಯಕ್ಕೆ ವಶವಾಗುತ್ತಿದ್ದೀರಿ ಎಂದರೆ ನಿಮ್ಮ ಒಳಗೆ ಎಲ್ಲಿಯೋ ಅಪವಿತ್ರತೆ ಎನ್ನುವುದು ಇದೆ.

ಅಪವಿತ್ರತೆ ಎಂದರೆ ಅಗತ್ಯವಿಲ್ಲದ ಆಲೋಚನೆಗಳು. ಅವನು ಕೆಟ್ಟವನು, ಇವನು ಕೆಟ್ಟವನು ಎಂದು ಬೇರೆಯವರ ಕುರಿತು ಕೆಟ್ಟದಾಗಿ ಮಾತನಾಡುತ್ತೀರಿ ಅಂದರೆ ಇನ್ನು ನಿಮ್ಮಲ್ಲಿ ತಪ್ಪು ನಡೆಯುತ್ತಿದೆ ಎಂದು ಅರ್ಥ ಮಾಡಿಕೊಳ್ಳಬೇಕು.

ಎಲ್ಲರನ್ನು ಪ್ರೇಮಿಸುವುದು ಎಂದರೆ, ಅವರು ತಪ್ಪು ಮಾಡಿದರೂ ಕ್ಷಮಿಸುವುದಲ್ಲ. ಆ ತಪ್ಪನ್ನು ನಿರ್ಭಯವಾಗಿ ಹೇಳಬೇಕು. ಅವರಿಗೆ ತಾತ್ಕಾಲಿಕವಾಗಿ ಬೇಜಾರಾಗಬಹುದು. ಆದರೆ ಮುಂದಿನ ದಿನಗಳಲ್ಲಿ ಶಾಶ್ವತವಾದ ಸತ್ಯದಲ್ಲಿ ಇರುತ್ತಾರೆ. ಅದಕ್ಕೆ ಗುರುವು ಯಾರ ತಪ್ಪುಗಳನ್ನು ಸಮರ್ಥಿಸುವುದಿಲ್ಲ. ತಪ್ಪುಗಳನ್ನು ಸಮರ್ಥಿಸಿದರೆ ಆತ ಗುರುವೇ ಅಲ್ಲ. ತಪ್ಪುಗಳನ್ನು ಸರಿಪಡಿಸಿದರೆ ಮಾತ್ರ ಗುರು ಆಗುತ್ತಾನೆ.

ಈಗ ನಿಮ್ಮೆಲ್ಲರಿಗೂ ಅನ್ನಿಸಬಹುದು ಮೇಡಂ ಮಾತನಾಡುವುದಿಲ್ಲ... ಸಾರ್ ತುಂಬಾ ಜೋರಾಗಿ ನಿರ್ಭಯದಿಂದ ಒತ್ತಿ ಹೇಳುತ್ತಾರೆ ಎಂದು ಅನಿಸಬಹುದು. ನಾನು ಇನ್ನೂ ರಾಘವರಷ್ಟು ಎತ್ತರಕ್ಕೆ ಏರಿಲ್ಲ. ನನಗೆ ಸತ್ಯ ತಿಳಿದಿದೆ, ಧರ್ಮ ತಿಳಿದಿದೆ ಹೇಳಿದರೇನೇ ಎಲ್ಲರೂ ಚೆನ್ನಾಗಿರುತ್ತಾರೆ. ಆದರೆ ನಾನು ಇನ್ನೂ ಅವರಷ್ಟು ಸ್ಥಿತಿಯನ್ನು ತಲುಪಿಲ್ಲವಾದ್ದರಿಂದ ಅಷ್ಟು ದೃಢವಾಗಿ ಹೇಳಲಾರದೆ ಹೋಗುತ್ತಿದ್ದೇನೆ. ನನ್ನ ಬಾಯಿಂದ ಬರುತ್ತಿಲ್ಲವೆಂದರೆ ನನಗೆ ಇನ್ನೂ ಅಷ್ಟು ಧೈರ್ಯವಿಲ್ಲ ಎಂದು ನನಗೆ ಅರ್ಥವಾಗುತ್ತದೆ. ಮತ್ತೊಂದು ಏನೆಂದರೆ ನೀನು ರಾಘವರಾವ್ ಸರ್ ಹೇಳುತ್ತಿದ್ದಾರೆ ಅಲ್ಲವೇ ಮತ್ತೆ ನಾನು ಹೇಳುವುದೇನು ಸಾಕು ಎನ್ನುವ ವಿಶ್ವಾಸವೂ ಇದೆ.

ಏಕೆಂದರೆ ಇಬ್ಬರೂ ಗಂಡ ಹೆಂಡತಿ ಆದ್ದರಿಂದ ಇಬ್ಬರೂ ಒಂದೇ ಕೆಲಸ ಮಾಡುತ್ತಿದ್ದೇವೆ ಆದ್ದರಿಂದ, ಒಬ್ಬರು ಹೇಳುತ್ತಿದ್ದರೆ, ಮತ್ತೊಬ್ಬರು ಏಕೆ ಅದನ್ನೇ ಹೇಳುವುದು. ಏಕೆಂದರೆ ಒಮ್ಮೆ ಹೇಳಿದಾಗ ಗ್ರಹಿಸಬಲ್ಲ ಶಕ್ತಿ ನಿಮಗೆ ಇದೆ ಎಂದು ನನಗೆ ಅರ್ಥವಾಗಿದೆ.. ಹೀಗೆ ಎಷ್ಟೋ ಕಾರಣಗಳಿವೆ. ಅದಕ್ಕೆ ನಾನು ಹೇಳುತ್ತಿಲ್ಲ, ಇಲ್ಲಿ ಗಮನಿಸಿ, ಗುರು ಎನ್ನುವವರು ಯಾವಾಗಲೂ ಕೂಡಾ ಒಳಗೆ ಪ್ರೀತಿಯಿದ್ದರೂ ಹೊರಗೆ ಕಠಿಣವಾಗಿ ಕಾಣಿಸುತ್ತಾರೆ. ನಮ್ಮ ಯೋಗಕ್ಷೇಮಗಳನ್ನು ಬಯಸುವವನೇ ನಮ್ಮ ತಪ್ಪುಗಳನ್ನು ಸರಿಪಡಿಸುತ್ತಾನೆ ಎಂದು ಶಿಷ್ಯರು ತಿಳಿದುಕೊಳ್ಳಬೇಕು.

ಬ್ರಹ್ಮಜ್ಞಾನ ಹೊಂದುವುದು ಎಂದರೆ ಅದು ಆಟೋಮೆಟಿಕ್ ಆಗಿ ಬರುವುದಲ್ಲ. ಈಗ ಶಿಷ್ಯರಾದರೂ ಸರಿ, ಸಾಧನೆ ಮಾಡುವವರಾದರರೂ ಸರಿ ಒಂದು ದಿನ ಕಲಿತಿದ್ದೇವೆ ನಮಗೆ ಎಲ್ಲಾ ತಿಳಿದಿದೆ ಎನ್ನುವುದಲ್ಲ. ನಿರಂತರ ಪರಿಶ್ರಮದಿಂದಲೇ ಅವರು ಆ ಸ್ಥಾಯಿಗೆ ಸೇರಬಲ್ಲರು. ಅದಕ್ಕೆ ಈಗ ನಮ್ಮ ವೇದಾಂತ ನಾಲ್ಕು ವಿಷಯಗಳನ್ನು ಹೇಳಿದೆ. ಅದೇನೆಂದರೆ...

**1. ನೀರಿನಿಂದ ಅವಯವಗಳು ಶುಭ್ರಗೊಳ್ಳುತ್ತವೆಯಂತೆ :**

ನಾವು ದಿನಾ ಸ್ನಾನ ಮಾಡುತ್ತೇವೆ. ಇಂದು ಮಾಡಿದ್ದೇವೆ ಎಂದು ನಾಳೆ ಸ್ನಾನ ಮಾಡದೇ ಇರುವುದಿಲ್ಲ. ಸ್ನಾನದಿಂದ ಶರೀರ ಅವಯವಗಳು ಶುದ್ಧತ್ವವನ್ನು ಹೊಂದುತ್ತವೆ.

**2) ಸತ್ಯಾಚರಣೆಯಿಂದ ಮನಸ್ಸು ಶುದ್ದಿಯಾಗುವುದಂತೆ :** ಸತ್ಯಾಚರಣೆ ಎಂದರೆ ಸತ್ಯವನ್ನು ತಿಳಿದುಕೊಳ್ಳುತ್ತಾ, ನಾವು ಯಾವಾಗಲೂ ಸತ್ಯದಲ್ಲಿ ಜೀವಿಸುತ್ತಾ ಇದ್ದರೆ ಮನಸ್ಸು ಶುದ್ದಿಯಾಗುತ್ತದೆಯಂತೆ. ಅಂದರೆ ಏನು ಮಾಡುತ್ತಿದ್ದರೂ, ಪರಮಾತ್ಮನಿಗೆ ಮಾಡುತ್ತಿದ್ದೇನೆ. ಏನು ಸ್ವೀಕರಿಸಿದರೂ ಪರಮಾತ್ಮನ ದಯೆಯಿಂದ ಸ್ವೀಕರಿಸುತ್ತಿದ್ದೇನೆ ಎಂದು ನೀವು ಸತ್ಯವಾದ ಆಲೋಚನೆ ಮಾಡುತ್ತಾ, ಸತ್ಯಾಚಾರಣೆ ಮಾಡುತ್ತಿರುವಾಗ ನಿಮ್ಮ ಮನಸ್ಸು ಶುದ್ಧತ್ವವನ್ನು ಹೊಂದುತ್ತದೆ.

**3) ಹಾಗೆ ವಿದ್ಯೆಯಿಂದ, ತಪಸ್ಸಿನಿಂದ ಜೀವಾತ್ಮ ಶುದ್ಧತ್ವ ಹೊಂದುತ್ತದೆಯಂತೆ :** ಅಂದರೆ ನೀವು ಶರೀರದೊಳಗೆ ಪ್ರವೇಶಿಸಿ ಮನಸ್ಸಿನ ಒಂದು ಪ್ರಾಬಲ್ಯದಲ್ಲಿ ಇರುವಾಗ ಜೀವಾತ್ಮ ಎನ್ನುತ್ತಾರೆ. ಮನಸ್ಸಿನ ಪ್ರಾಬಲ್ಯ ಕಡಿಮೆ ಮಾಡಿಕೊಳ್ಳುತ್ತಾ, ಯಾವಾಗ ನಾನು ಶರೀರವಲ್ಲ ಆತ್ಮ ಎನ್ನುವ ಭಾವದಲ್ಲಿ ಇರುವಿರೋ, ಆ ಸ್ಥಿತಿಯಲ್ಲಿಯೇ ಜೀವಿಸುವಿರೋ ನೀವೇ ಪರಮಾತ್ಮನಾಗುವಿರಿ. ಅದಕ್ಕೆ ಈಗ ಎಲ್ಲರನ್ನು ಜೀವಾತ್ಮ ಎನ್ನುತ್ತಾರೆ. ಏಕೆಂದರೆ ನೀವು ಇನ್ನೂ ನಿಮ್ಮ ಮನಸ್ಸಿನ ಪ್ರಭಾವದಲ್ಲಿದ್ದೀರಿ... ಜೀವಾತ್ಮ ಯಾವಾಗ ಶುದ್ಧತ್ವ ಹೊಂದುತ್ತದೆ ಎಂದರೆ ವಿದ್ಯೆಯಿಂದ, ತಪಸ್ಸಿನಿಂದ..

ಅಂದರೆ ಈ ಬ್ರಹ್ಮವಿದ್ಯೆ, ಆತ್ಮವಿದ್ಯೆಯನ್ನು ಕಲಿತುಕೊಳ್ಳುತ್ತಾ, ಪ್ರಾಪಂಚಿಕ ಅಗತ್ಯಗಳಿಗೆ ಪರಿಮಿತವಾಗುತ್ತಾ, ಅಂದರೆ ಶರೀರಕ್ಕೆ ಆಹಾರ ಅಗತ್ಯವಾದ್ದರಿಂದ ಎಷ್ಟು ಬೇಕೋ ಅಷ್ಟನ್ನೇ ತೆಗೆದುಕೊಳ್ಳಬೇಕು, ನಿತ್ಯವೂ ಆತ್ಮಕ್ಕೆ ಧ್ಯಾನವು ಅಗತ್ಯವಾದ್ದರಿಂದ ಅನಗತ್ಯ ಸುದ್ದಿಗಳನ್ನು ಹಾಕಿಕೊಳ್ಳುತ್ತಾ, ಕುಳಿತುಕೊಳ್ಳುವುದನ್ನು ಬಿಟ್ಟು ಧ್ಯಾನವನ್ನು ಮಾಡಬೇಕು. ಹಾಗೆ ವಿದ್ಯೆಯಿಂದ ತಪಸ್ಸಿನಿಂದ ಜೀವಾತ್ಮ ಶುದ್ಧತ್ವವನ್ನು ಹೊಂದುತ್ತದೆ.

**4) ಬ್ರಹ್ಮ ಜ್ಞಾನದಿಂದ ಬುದ್ಧಿ ಪವಿತ್ರವಾಗುತ್ತದೆ :** ಇಲ್ಲಿಯವರೆಗೂ ನೀವು ವಿಗ್ರಹಾರಾಧನೆ ಮಾಡುತ್ತಾ, ಪೂಜೆಗಳು ಮಾಡುತ್ತಾ ನನಗೆ ಸ್ವರ್ಗ ಲೋಕ ಬಂದಿದೆ ಎಂದುಕೊಳ್ಳುವಿರಿ. ಆದರೆ ಭೂಮಿ ಮೇಲೆ ಸಾಧನೆ ಮಾಡಿ ಬ್ರಹ್ಮಜ್ಞಾನವನ್ನು ತಿಳಿದುಕೊಳ್ಳುವುದರಿಂದ, ಅದಕ್ಕಿಂತ ಉನ್ನತವಾದ ಸತ್ಯಲೋಕವನ್ನೇ ಸೇರಬಹುದು ಎಂದು ತಿಳಿದುಕೊಳ್ಳಬೇಕು.

ಅದಕ್ಕೆ ನೀವು ಈ ಭೂಮಿ ಮೇಲೆ ಇರುವಾಗಲೇ ಈ ಬ್ರಹ್ಮಜ್ಞಾನ, ಆತ್ಮಜ್ಞಾನ ತಿಳಿದುಕೊಳ್ಳುತ್ತಾ.... ಸಾಧನೆ ಮಾಡಬೇಕು. ಸುಮ್ಮನೆ ಕೇಳಿದರೆ ಪಂಡಿತರಂತೆ ಇರುವಿರಿ.

ಎಷ್ಟು ಜನ ಪಂಡಿತರು ಎಷ್ಟು ಪ್ರವಚನಗಳು ಹೇಳಿದರೂ, ಎಷ್ಟು ಪುರಾಣಗಳನ್ನು ಹೇಳಿದರೂ, ಪರಬ್ರಹ್ಮನೇ ಈ ಸೃಷ್ಟಿಯನ್ನು ನಡೆಸುತ್ತಿದ್ದಾನೆಂದು... ಪರಬ್ರಹ್ಮನನ್ನು ಸೇರಬೇಕೆಂದಾಗಲಿ, ಸತ್ಯ ಲೋಕವನ್ನು ಸೇರಬೇಕೆಂದರೆ ಮೋಕ್ಷ ಬೇಕು ಅದಕ್ಕೆ ಧ್ಯಾನ ಮಾಡಬೇಕು ಎಂದಾಗಲಿ ಯಾವ ವಚನಕರ್ತರು, ಯಾರು ಹೇಳುವುದಿಲ್ಲ.

ಅವರು ಹೇಳದೇ ಇರುವುದು ಅವರ ಲೋಪವಲ್ಲ. ಸತ್ಯವನ್ನು ಅಧ್ಯಯನ ಮಾಡುವ ಶಕ್ತಿ, ಹೇಳುವ ಶಕ್ತಿ ಒಬ್ಬ ಬ್ರಹ್ಮ ಜ್ಞಾನಿಗೇ ಇರುತ್ತದೆ. ಪವಿತ್ರವಾದ ಹೃದಯದಲ್ಲಿ ಪರಮಾತ್ಮನಿಗೆ ಸ್ಥಾನವನ್ನು ಕೊಡಬೇಕು ಅಂದರೆ ನಿಮ್ಮ ಬಾಯಿಂದ ಅಸತ್ಯ ಬರಬಾರದು. ನಾವು ಅಪವಿತ್ರವಾದ ಜೀವನವನ್ನು ಯಾವಾಗಲೂ ನಡೆಸಬಾರದು. ಪರಬ್ರಹ್ಮದ ಕುರಿತು ಮಾತನಾಡಬೇಕೆಂದರೂ, ಹೇಳಬೇಕೆಂದರೂ ನೀವು ಎಷ್ಟೋ ಪವಿತ್ರವಾದ ಜೀವನವನ್ನು ಮಾಡಿ, ಪವಿತ್ರವಾದ ಮಾತುಗಳನ್ನು ಆಡಿದರೆ ಮಾತ್ರ ಆ ಸತ್ಯವನ್ನು ಹೇಳುವ ಅರ್ಹತೆ ನಿಮಗೆ ಬರುತ್ತದೆ ಎಂದು ವೇದಗಳು ಸ್ಪಷ್ಟವಾಗಿ ಹೇಳಿವೆ.

ಅದಕ್ಕೆ ಬ್ರಹ್ಮಜ್ಞಾನ ಎಷ್ಟು ಉನ್ನತವಾದದ್ದು ತಿಳಿದುಕೊಂಡಾಗ ಆ ಜ್ಞಾನವನ್ನು ಹೊಂದಲು ನೀವು ಪ್ರಯತ್ನಿಸುವಿರಿ. ಆ ಪರಬ್ರಹ್ಮಕ್ಕೆ ನೀವು ಇಷ್ಟವಾಗಿರುವುದರಿಂದಲೇ, ಪತ್ರೀಜಿಯಂತಹ ಗುರುವನ್ನು ಹೊಂದಿ, ಇಂದು ಈ ಸ್ಥಿತಿಯಲ್ಲಿ ಇರುವಿರಿ. ಹಾಗೂ ಆ ಪರಮಾತ್ಮನ ಕೃಪೆಯಿಂದ ಬ್ರಹ್ಮಜ್ಞಾನ ಹೊಂದಿದರೆನೇ ನಿಮ್ಮ ಬುದ್ಧಿ ಪವಿತ್ರವಾಗಿರುತ್ತದೆ. ಆದರೆ ಪಾಪಕರ್ಮಗಳನ್ನು ಹೋಗಲಾಡಿಸಿಕೊಳ್ಳಲು ಧ್ಯಾನ, ಮೋಕ್ಷವನ್ನು ಹೊಂದಲು ಬ್ರಹ್ಮಜ್ಞಾನ ಈ ಎರಡನ್ನು ಮಾನವ ತಾನು ಭೂಮಿ ಮೇಲೆ ಇರುವಾಗಲೇ ಸಾಧಿಸಬಲ್ಲನು.

ಹಾಗಾಗಿ ಈ ಸತ್ಯವನ್ನು ತಿಳಿದುಕೊಂಡ ನೀವು ಅದಕ್ಕಾಗಿ ಪ್ರಯತ್ನಿಸುತ್ತಾ, ನಿರಂತರ ಸಾಧನೆ ಮಾಡುತ್ತಾ, ಪವಿತ್ರವಾಗಿ ಜೀವಿಸುತ್ತಿದ್ದೀರಿ. ಸೃಷ್ಟಿಯಲ್ಲಿ ಎಲ್ಲರೂ ಪವಿತ್ರವಾಗಿ ಜೀವಿಸಲು ಬೇಕಾಗಿರುವುದು ಬ್ರಹ್ಮಜ್ಞಾನವೇ ಎಂದು ತಿಳಿದುಕೊಂಡಿರುವ ನಿಮಗೆ, ಎಲ್ಲರಿಗೂ ಹೇಳುವ ಅರ್ಹತೆಯೂ ಕೂಡಾ ಬರುತ್ತದೆ. ಸಾಧನೆ ಮಾಡದಿದ್ದರೆ ಮತ್ತೆ ಆ ಅರ್ಹತೆಯನ್ನು ಕಳೆದುಕೊಳ್ಳುವಿರಿ

ಹಾಗಾಗಿ ಪತ್ರೀಜಿಯವರಂತೆ ಉನ್ನತವಾದ ಜೀವನವನ್ನು ಜೀವಿಸಬೇಕೆಂದರೆ ನಿರಂತರ ಸಾಧನೆ ಮಾಡುತ್ತಾ, ಪ್ರಾಪಂಚಿಕ ಸೌಖ್ಯಗಳ ಕುರಿತು ಆಲೋಚಿಸದೇ, ಪರಲೋಕಗಳಿಗೆ ಹೇಗೆ ಹೋಗಬೇಕು? ಎಷ್ಟು ಬೇಗನೆ ಹೋಗಬೇಕು? ಎಷ್ಟು ಹೆಚ್ಚು ಕಲಿತುಕೊಳ್ಳಬೇಕು ಎನ್ನುವುದರ ಮೇಲೆ ಹೆಚ್ಚು ದೃಷ್ಟಿ ಇಟ್ಟರೆ ಈ ಭೂಮಿ ಮೇಲೆ ಇರುವಾಗಲೇ, ಆನಂದಕರವಾದ ಜೀವನ ಜೀವಿಸುತ್ತೀರಿ.

*** ***

# ಸುಖವಾಗಿ ಸಂತೋಷವಾಗಿ ಹಾಯಾಗಿ ಜೀವಿಸಬೇಕೆಂದರೆ ಏನು ಮಾಡಬೇಕು?

ಪ್ರತಿ ಮಾನವನು ನಾನು ಸುಖವಾಗಿ, ಹಾಯಾಗಿ, ಸಂತೋಷವಾಗಿ ಇರಬೇಕೆಂದು ಬಯಸುತ್ತಾನೆ. ಅವುಗಳಿಗಾಗಿ ಎಷ್ಟೋ ಪ್ರಯತ್ನಗಳನ್ನು ಮಾಡುತ್ತಾನೆ. ಆಧ್ಯಾತ್ಮಿಕತೆಗೆ ಬಂದರೂ ಕೂಡಾ ಹೆಚ್ಚಾಗಿ ಈ ಮೂರು ವಿಷಯಗಳ ಕುರಿತು ಪ್ರಯತ್ನಗಳನ್ನು ಮಾಡುತ್ತಾ ಇರುತ್ತಾನೆ. ಈ ವಿಧವಾಗಿ ಇರಬೇಕೆಂದರೆ, ಭಗವಂತನು ಸೃಷ್ಟಿಯಲ್ಲಿ ಏರ್ಪಾಟು ಮಾಡಿದ ಧರ್ಮವನ್ನು ಪಾಲಿಸಬೇಕು. ಅದೇನೆಂದರೆ, ನೀನು ಸೃಷ್ಟಿಗೆ ಏನು ಕೊಟ್ಟರೆ ಸೃಷ್ಟಿಯಿಂದ ಅದನ್ನೇ ಹೊಂದುವೆ ಇದು ಸೃಷ್ಟಿ ನಿಯಮ.

ಅಂದರೆ ನೀನು ಸುಖವಾಗಿ ಇರಬೇಕೆಂದರೆ, ಬೇರೆಯವರ ಸುಖವನ್ನು ಬಯಸಬೇಕು. ನೀನು ಹಾಯಾಗಿ ಜೀವಿಸಬೇಕೆಂದರೆ, ಬೇರೆಯವರನ್ನು ಹಾಯಾಗಿ ಜೀವಿಸಲು ಬಿಡಬೇಕು. ನೀನು ಸಂತೋಷವಾಗಿ ಇರಬೇಕೆಂದರೆ, ಬೇರೆಯವರ ಸಂತೋಷಕ್ಕೆ ನೀನು ಸಹಕರಿಸಬೇಕು.

ಪ್ರಾಪಂಚಿಕ ಜೀವನದಲ್ಲಿ ಹಾಗೆ ಅಂದುಕೊಳ್ಳುವವರು ತುಂಬಾ ವಿರಳ. ತಮಗೆ ತಾವೇ ಸುಖ ಪಡಬೇಕು.... ತಾವೇ ಆನಂದವಾಗಿ ಜೀವಿಸಬೇಕು ತಾವು ಮಾತ್ರ ಸಂತೋಷವಾಗಿರಬೇಕು ಎಂದುಕೊಳ್ಳುತ್ತಾರೆ. ಅದಕ್ಕೆ ಕಾರಣ ಪ್ರತಿ ಮನುಷ್ಯನಲ್ಲಿರುವ ಸ್ವಾರ್ಥ... ಆ ಸ್ವಾರ್ಥದಿಂದ ಯಾರನ್ನೂ ಹಿಡಿಸಿಕೊಳ್ಳುವುದಿಲ್ಲ. ಆದರೆ ಯಾವಾಗದರೆ ನೀವು ಸಾಧನೆ ಮಾಡುತ್ತಾ ವಿನಯದಿಂದ ಇದ್ದು ಜ್ಞಾನವನ್ನು ಸಂಪಾದನೆ ಮಾಡುವಿರೋ, ಅದೇ ವಿಧವಾಗಿಯೇ ಜೀವಿಸುತ್ತೀರಿ.

ಆದರೆ ಪ್ರಾಪಂಚಿಕತೆಯಲ್ಲಿ ಅಹಂಕಾರ ಹೋಗುವುದಿಲ್ಲ. ವಿನಯ ಬರುವುದಿಲ್ಲ. ಸಾಧನೆ ಇಲ್ಲದಿದ್ದರೆ ತಾನೇ ದೊಡ್ಡವನು, ತಾನೇ ಚೆನ್ನಾಗಿರಬೇಕು ಎನ್ನುವ ಕೋರಿಕೆಯಿಂದ ಮತ್ತಷ್ಟು ದುಃಖದಲ್ಲಿ ಬೀಳುತ್ತಾ ಇರುತ್ತೀರಿ. ಆದರೆ ಆಧ್ಯಾತ್ಮಿಕ ಜೀವನಕ್ಕೆ ಬಂದ ಮೇಲೆ ಗುರುಗಳು ಮೊಟ್ಟಮೊದಲನೆಯದಾಗಿ ಶಿಷ್ಯರಿಗೆ ಕಲಿಸುವುದು ವಿನಯವೇ... ಪ್ರಾಪಂಚಿಕ ಜೀವನದಲ್ಲಿ ಯಾವಾಗಲೂ ಕೂಡ ಭಯ, ದುಃಖ ಎನ್ನುವ ಎರಡು ವಿಷಯಗಳು ಇರುತ್ತವೆ. ತನಗಿರುವುದು ಏನಾದರೂ ಸರಿ, ಯಾವುದಾದರೂ ಸರಿ.,.. ಕಾಪಾಡಿಕೊಳ್ಳಲು ಪ್ರಯತ್ನಿಸುತ್ತೀರಿ. ಅದು ಕಳೆದುಕೊಳ್ಳುತ್ತೇವೆ ಎಂದು ಭಯಪಡುತ್ತೀರಿ. ತನ್ನವರು ತನ್ನಿಂದ ದೂರವಾದರೆ ತನ್ನ ಬಳಿಯಿಂದ ಹೊರಟು ಹೋದರೆ ದುಃಖಿಸುತ್ತೀರಿ.

ಈ ಭಯಗಳಾಗಲಿ, ದುಃಖಗಳಾಗಲಿ, ಕೆಟ್ಟ ಭಾವಗಳು ಇವೆಲ್ಲವೂ ಮನಸ್ಸಿಗೆ ಇರುವ ದುರ್ಗಣಗಳು. ಎಷ್ಟು ಪೂಜೆಗಳು ವ್ರತಗಳು, ಮಾಡಿದರೂ, ಹರಕೆ ಹೊತ್ತರೂ, ಯಜ್ಞಗಳು ಮಾಡಿದರೂ, ಮಾನವರಲ್ಲಿ ಈ ದುರ್ಗುಣಗಳು ಹೋಗುವುದಿಲ್ಲ. ಒಂದು ಧ್ಯಾನ ಸಾಧನೆಯಿಂದಲೇ ಆ ಗುಣಗಳನ್ನು ಬದಲಾಯಿಸಿಕೊಳ್ಳಬಹುದು. ಈ ಭೂಮಿ ಮೇಲೆ ಸಾಧನೆ ಮಾಡದೇ ಯಾವುದು ಸಾಧಿಸಲಾರಿರಿ. ಅದಕ್ಕೆ "ಸಾಧನೆಯಿದ್ದರೆ ಈ ಧರಣಿಯಲ್ಲಿ ಎಲ್ಲವನ್ನು ಸಾಧಿಸಬಹುದು" ಅಸಾಧ್ಯ ಯಾವುದೂ ಇಲ್ಲ ಎನ್ನುತ್ತಾರೆ.

ಹಾಗಾಗಿ ಪ್ರಪಂಚದ ಕಡೆಗೆ ಹೊರಳಿದ ಮನಸ್ಸು ಅಪವಿತ್ರವಾಗಿ ಅನೀತಿಗೆ ಅಭ್ಯಾಸವಾಗುತ್ತದೆ. ದುರ್ಗುಣಗಳಿಗೆ ಅಭ್ಯಾಸವಾಗುತ್ತದೆ. ಅಪವಿತ್ರತೆ ಎಂದರೆ ಕೆಟ್ಟ ಕೆಲಸಗಳನ್ನು ಮಾಡುವುದು ಕೆಟ್ಟದಾಗಿ ಜೀವಿಸುವುದು. ಅನೀತಿ ಎಂದರೆ ಅಡ್ಡದಾರಿಯಲ್ಲಿ ಹೋಗಿ ಅಕ್ರಮವಾಗಿ ಹಣ ಸಂಪಾದಿಸಬೇಕು ಎನ್ನುವ ಭಾವನೆ. ಈಗ ಪ್ರಪಂಚವೆಲ್ಲವೂ ಹೀಗೆ ಇದೆ. ವ್ಯಾಪಾರದಲ್ಲಿ  ಅನೀತಿ, ಉದ್ಯೋಗದಲ್ಲಿ ಅನೀತಿ ಎಲ್ಲದರಲ್ಲೂ ಅನೀತಿ ಎದ್ದು ಕಾಣಿಸುತ್ತಿದೆ.

"ದುರ್ಗುಣಗಳು" ಎಂದರೆ ಗತಜನ್ಮದ ಕೆಟ್ಟ ಸಂಸ್ಕಾರಗಳನ್ನು ಬಿಡದೆ, ಅವು ಅಭ್ಯಾಸಗಳಾಗಿ ಬದಲಾಗಿ ಮಾಂಸ ತಿಂದರೆ ತಪ್ಪೇನು? ಮಧ್ಯಪಾನ ಮಾಡಿದರೆ ತಪ್ಪೇನು? ಎನ್ನುತ್ತಾರೆ. ಅಪವಿತ್ರತೆ, ಅನೀತಿ, ದುರ್ಗುಣಗಳು ಹೊಂದಿರುವವರು ಆನಂದವಾಗಿ ಜೀವಿಸಲಾರರು.

ಹಾಗಾದರೆ ಈ ಮೂರು ಗುಣಗಳು ಹೇಗೆ ತೊಲಗಬೇಕೆಂದರೆ, ಧ್ಯಾನ ಸ್ವಾಧ್ಯಾಯ ಕೂಡಾ ಮಾಡಬೇಕು. ಸುಖ ಸಂತೋಷ ಒಳ್ಳೆಯ ಜೀವನ ಬೇಕು ಎಂದರೆ, ಈ ಭೂಮಿ ಮೇಲೆ ಯಾವ ಗುಣಗಳಾದರೆ ಅಭ್ಯಾಸಗಳಾಗಿ ಬದಲಾಗಿವೆಯೋ... ಅವುಗಳನ್ನು ಧ್ಯಾನದಿಂದ ತೊಲಗಿಸಿಕೊಳ್ಳಬೇಕು.

ಈ ವಿಧವಾಗಿ ಮಾಡುತ್ತಾ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಲು ಒಳ್ಳೆಯ ಸ್ನೇಹಿತರನ್ನು ಹೆಚ್ಚಿಸಿಕೊಳ್ಳಬೇಕು. ನಿಮಗೆ ಯಾರಾದರೂ ಹಿತಕರವಾದ ಮಾತುಗಳನ್ನು ಹೇಳಿದರೆ ಅವರನ್ನು ಸ್ನೇಹ ಭಾವದಿಂದ ಸ್ವೀಕರಿಸಬೇಕು. ಎಲ್ಲಿ ವಿರೋಧ ಇರುತ್ತದೋ ಅದನ್ನು ತೊಲಗಿಸಿಕೊಳ್ಳಲು ಪ್ರಯತ್ನಿಸಬೇಕು.

ಆರಂಭದಲ್ಲಿ ನಾವು ಹೇಳಿದರೆ ಕೇಳುವುದಿಲ್ಲ. ಆದರೆ ಪದೇಪದೇ ಹೇಳುವುದರಿಂದ ಅವರಲ್ಲಿ ಬದಲಾವಣೆ ಬರಬಹುದು. ಹೊರಗಿನವರು ನಿಮ್ಮ ಮಾತುಗಳನ್ನು ಕೇಳುವಷ್ಟು ಶಕ್ತಿಪರರು ನೀವಾಗಬೇಕು ಅಷ್ಟೇ.

ಈಗ ಪಕ್ಷಿಗಳನ್ನು ನೋಡಿ ಅವುಗಳೇ ಮನೆಗಳನ್ನು ಕಟ್ಟಿಕೊಳ್ಳುತ್ತವೆ. ಇರುವೆ ತನ್ನ ಆಹಾರವನ್ನು ತಾನೇ ತಂದುಕೊಳ್ಳುತ್ತದೆ. ಅವುಗಳಿಗೆ ಬುದ್ಧಿವಂತಿಕೆ ಇಲ್ಲ ಎನ್ನುವಿರೆ?

ಹಾಗೆ ನೋಡಿದರೆ ಎಲ್ಲಾ ಜೀವಿಗಳು ಕಷ್ಟ ಪಡುತ್ತವೆ. ಬೇರೆಯವರನ್ನು ದೋಚಿಕೊಳ್ಳಬೇಕೆಂದು ನೋಡುವುದಿಲ್ಲ, ಬಯಸುವುದಿಲ್ಲ. ಆದರೆ ಮಾನವನೇ ಬೇರೆ ಪ್ರಾಣಿಯನ್ನು ಕೊಂದು ಮಾಂಸ ತಿಂದು ತಾನೇನೋ ಬಲವನ್ನು ತಂದುಕೊಳ್ಳಬೇಕೆಂಬ ಕೋರಿಕೆಗಳೊಂದಿಗೆ ಹಿಂಸೆ ಮಾಡುತ್ತಿದ್ದಾನೆ.

ಪಾಪವು ಮಿತಿಮೀರಿದಾಗ ಪರಮಾತ್ಮನೇ ಯಾವುದೋ ಒಂದು ರೂಪದಲ್ಲಿ ಶಿಕ್ಷಿಸುತ್ತಾನೆ. ಹಾಗೆ ಶಿಕ್ಷೆಗಳು ಅನುಭವಿಸಿದರೆ, ಜೀವನದಲ್ಲಿ ಸುಖ ಸಂತೋಷಗಳು ಹೇಗೆ ಇರುತ್ತವೆ? ಆಲೋಚಿಸಿ.

ಆದ್ದರಿಂದ "ಶ್ವಾಸದ ಮೇಲೆ ಗಮನ" ಸಾಧನೆ ಮಾಡಿ ವಿಶ್ವಶಕ್ತಿಯನ್ನು ತೆಗೆದುಕೊಂಡು ನಿಮ್ಮಲ್ಲಿ ಇರುವ ಪರಮಾತ್ಮನಿಗೆ ಅರ್ಪಿಸಬೇಕು. ಸ್ವಲ್ಪವಾದರೂ ಕಷ್ಟಪಡದಿದ್ದರೆ ಆನಂದ ಎನ್ನುವುದು ಬರುವುದಿಲ್ಲ. ಪ್ರಾಪಂಚಿಕ ಹಣದಿಂದ ವಸ್ತುಗಳು ಬರಬಹುದು. ಆದರೆ ಆನಂದವು ಸಾಧನೆಯಿಂದಲೇ ಬರುತ್ತದೆ. ನೀವು ಎಲ್ಲರನ್ನೂ ಆನಂದಿಸುವಂತೆ ಮಾಡಬೇಕು ಎಂದರೆ ಹಿಂಸಾ ಮಾರ್ಗದಿಂದ ಅಹಿಂಸಾ ಮಾರ್ಗಕ್ಕೆ ಬರುವುದು ಮೊಟ್ಟ ಮೊದಲ ಹಂತ. ಪರೋಪಕಾರ ಮಾಡುವುದು ಎರಡನೆಯ ಹಂತ. ಸಾಧನೆ, ಸ್ವಾಧ್ಯಾಯ ಮಾಡಿ ವಿಚಾರಣೆ ಮಾಡಿಕೊಳ್ಳುವುದು ಮೂರನೇ ಹಂತ.

ಈ ಮೂರು ಇದ್ದರೇನೇ, ಅದ್ಭುತವಾದ ಆನಂದಕರವಾದ ಜೀವನ ಜೀವಿಸಬಲ್ಲರು. ಮೋಕ್ಷ ಬರುವುದು ಎಂದರೆ ನಿತ್ಯವೂ ಆನಂದ ಸ್ಥಿತಿಯಲ್ಲಿ ಇರುವುದೇ... ಯಾವಾಗ ಮನಸ್ಸನ್ನು ಶುದ್ಧವಾಗಿ ಇರಿಸಿಕೊಳ್ಳುವಿರೋ, ಆಗ ಆತ್ಮದರ್ಶನ ಉಂಟಾಗುತ್ತದೆ. ಮನಸ್ಸು ಶುದ್ಧವಾಗಿ ಅದ್ವೈತದಲ್ಲಿ ಜೀವಿಸುತ್ತಿದ್ದಾಗ, ಆನಂದವಾಗಿ ಜೀವಿಸಬಲ್ಲರು. ಹಾಗೂ ನೀವು ಸುಖವಾಗಿ, ಸಂತೋಷವಾಗಿ, ಹಾಯಾಗಿ ಜೀವಿಸಬೇಕೆಂದರೆ ಈ ಸೃಷ್ಟಿಯಲ್ಲಿ ಪ್ರತಿಯೊಬ್ಬರನ್ನು ಹಾಗೆ ಜೀವಿಸಲು ಬಿಡಬೇಕು.

**“ಪರಿಧಿಗೆ ಪರಿಮಿತವಾಗುವವನು ಮೂರ್ಖನು,**
**ಪರಿಧಿಗಳನ್ನು ದಾಟಿ ಕಲಿತುಕೊಳ್ಳುವುದಕ್ಕೆ**
**ಪ್ರಯತ್ನಿಸುವನೇ ವಿವೇಕವಂತನು‘**

–"ಬ್ರಹ್ಮರ್ಷಿ" ವಟವರ್ತಿ ವೀರರಾಘವ ರಾವ್

# ಸಂಪತ್ತನ್ನು ನೋಡಿ ಸಂಭ್ರಮಿಸುವುದಲ್ಲ, ಜ್ಞಾನ ಹೊಂದಿದಾಗ ಸಂಭ್ರಮಿಸಬೇಕು.....

ಮಾನವರು ಉನ್ನತ ಸ್ಥಿತಿಗೆ ಹೋಗಬೇಕೆಂದು ಎಷ್ಟು ಪ್ರವಚನಗಳನ್ನು ಕೇಳಿದರೂ, ಎಷ್ಟು ಸಾಧನೆ ಮಾಡಿದರೂ, ತಮಗೆ ತಿಳಿಯದಂತೆ ಮಧ್ಯದಲ್ಲಿಯೇ ಮಾಯೆಯ ವಶವಾಗಿ, ಆ ಮಾಯೆಯಿಂದ ತಪ್ಪಿಸಿಕೊಳ್ಳಲಾರದೆ ಕೆಳ ಸ್ಥಾಯಿಗೆ ಇಳಿಯುತ್ತಾರೆ. ಅದಕ್ಕೆ ನಿತ್ಯವೂ ಧ್ಯಾನ ಮಾಡುತ್ತಾ, ಜ್ಞಾನವನ್ನು ಕೇಳುತ್ತಾ, ದಿನವೂ ಮನನವನ್ನು ಮಾಡಿಕೊಳ್ಳುತ್ತಾ ಇರಬೇಕು.

ಏಕೆಂದರೆ ನಿತ್ಯ ನಮ್ಮ ಶರೀರಕ್ಕೆ ಆಹಾರ ಹೇಗೆ ಅಗತ್ಯವೋ, ಹಾಗೆ ಆತ್ಮಕ್ಕೆ ಆ ಪ್ರಾಣಶಕ್ತಿ ಅಷ್ಟು ಅಗತ್ಯ. ಹಾಗೂ ಈ ವಿಧವಾಗಿ ನೀವು ನಿತ್ಯವೂ ಸಾಧನೆಯಿಂದ, ಶ್ರವಣ ಮಾಡುವುದರಿಂದ ಎಷ್ಟೋ ವಿಷಯಗಳನ್ನು ಕಲಿಯುತ್ತೀರಿ. ತುಂಬಾ ಜನರು ನಿಮ್ಮನ್ನು ಎಷ್ಟು ದಿನ ಅಂತ ಹೀಗೆ ಕೇಳುತ್ತೀರಿ? ಎಷ್ಟು ದಿನ ಕಲಿಯುವಿರಿ? ಎಂದು ಕೇಳುತ್ತಾರೆ. ನಾವು ಜೀವಿಸಿದಷ್ಟು ದಿನಗಳು ಆಹಾರ ಎಷ್ಟು ಮುಖ್ಯವೋ,  ಒಬ್ಬ ಆತ್ಮಜ್ಞಾನಿಗೆ ಭೂಮಿ ಮೇಲೆ ಇದ್ದಷ್ಟು ದಿನ ಸಾಧನೆ ಮತ್ತು ಜ್ಞಾನ ಇವೆರಡರ ಅವಶ್ಯಕತೆ ಇದೆ ಎಂದು ತಿಳಿದುಕೊಳ್ಳಬೇಕು. ಯಾರೋ ಒಬ್ಬ ನಿಮ್ಮನ್ನು ಮತ್ತೆ ಮತ್ತೆ ಪ್ರಶ್ನೆಗಳನ್ನು ಕೇಳುತ್ತಿದ್ದಾನೆ ಎಂದರೆ ಅವನಿಗೆ ಅಜ್ಞಾನ ಹೋಗಿಲ್ಲ ಎಂದು ನಿಮಗೆ ಅರ್ಥವಾಗಬೇಕು.

ನೀವು ಈ ಮಾರ್ಗಕ್ಕೆ ಬರುವ ಮುಂಚೆ ಹೇಗೆ ಜೀವಿಸಿದರೂ ಆಧ್ಯಾತ್ಮಿಕ ಜೀವನಕ್ಕೆ ಹೆಜ್ಜೆ ಇಟ್ಟ ನಂತರ ಎಲ್ಲಾ ತಿಳಿದುಕೊಂಡ ಮೇಲೆ ತುಂಬಾ ಜಾಗ್ರತೆಯಿಂದ ನಾನು ಎಲ್ಲಿಯಾದರೂ ಮಾಯೆಗೆ ವಶವಾಗುತ್ತಿರುವೆನೆ? ಎಂದು ಆಗಾಗ ಪರಿಶೀಲನೆ ಮಾಡಿಕೊಳ್ಳುತ್ತಿರಬೇಕು. ಮಾಯೆಗೆ ವಶವಾಗುತ್ತಾ ಮಾನವ ಹೇಗಿರುತ್ತಾನೆಂದರೆ, ಅಹಂಕಾರದಿಂದ, ಗರ್ವದಿಂದ, ಎಷ್ಟೋ ಕೋರಿಕೆಗಳಿಂದ ಅವನು ಕೂಡಿರುತ್ತಾನೆ. ಕಣ್ಣಿಗೆ ಕಾಣುವುದು ಯಾವುದು ಉನ್ನತವಾಗಿ ಇದ್ದರೂ.. ಅಂದರೆ ಪದವಿ ಹೆಚ್ಚಿದರೂ, ವಿದ್ಯೆ ಹೆಚ್ಚಿದರೂ, ಸಂಪತ್ತು ಹೆಚ್ಚಿದರೂ ಮತ್ತಷ್ಟು ಅಹಂಕಾರ ಹೆಚ್ಚಾಗುತ್ತದೆ.

ಅದಕ್ಕೆ ಮಹಾತ್ಮರಾಗಲಿ ಗುರುಗಳಾಗಲಿ ನಮಗಿಂತ ಮೊದಲು ಧ್ಯಾನ ಮಾಡಿ ಉನ್ನತ ಜ್ಞಾನವನ್ನು ಹೊಂದಿದ ಹಿರಿಯರು ಯಾರೇ ಆಗಲಿ ಆತ್ಮಜ್ಞಾನಿಕ್ಕೆ ಅಹಂಕಾರ ಇರಬಾರದು ಎಂದು ಎಷ್ಟೋ ಉಪಮಾನಗಳೊಂದಿಗೆ ನಮಗೆ ಹೇಳುತ್ತಾರೆ. ಹಾಗೂ ಕೆಲವರು ಮಹಾತ್ಮರು "**ಸಂಪತ್ತು ನೋಡಿ ಸಂಭ್ರಮಿಸಬಾರದು, ಜ್ಞಾನ ಹೊಂದಿದರೆ ಸಂಭ್ರಮಿಸಬೇಕು**" ಎಂದು ಹೇಳುತ್ತಾರೆ. ಅಂದರೆ ಕೆಲವರು ಸಂಪತ್ತು ಬರುತ್ತಿದೆ ಎನ್ನುವ

ಸಂಭ್ರಮದಿಂದ ಅಹಂಕಾರವನ್ನು ಹೆಚ್ಚಿಸಿಕೊಳ್ಳುತ್ತಾ, ಬೇರೆಯವರನ್ನು ಕೀಳಾಗಿ ನೋಡುತ್ತಾರೆ. ಹಾಗೆಯೇ ಕೆಲವರು ವಂಶ ಪಾರಂಪರ್ಯವಾಗಿ ಬಂದ ಸಂಪತ್ತನ್ನು ತಾನೇ ಸಂಪಾದಿಸಿದಂತೆ ತೋರಿಸಿಕೊಳ್ಳುತ್ತಾ ಇನ್ನೂ ಕೀಳು ಮಟ್ಟಕ್ಕೆ ಇಳಿಯುತ್ತಾರೆ.

ಅದೇ ಒಬ್ಬ ಆತ್ಮಜ್ಞಾನಿ ದಿನವೂ ಸಾಧನೆ ಮಾಡುತ್ತಾ... ದಿನವೂ ಜ್ಞಾನವನ್ನು ಕೇಳುತ್ತಾ... ಯಾವುದಾದರೂ ಒಂದು ವಿಷಯ ತಿಳಿದುಕೊಂಡಾಗ ಸಂಭ್ರಮಿಸುತ್ತಾನೆ. ನೀವು ಗಮನಿಸಿ ಒಮ್ಮೊಮ್ಮೆ ಹೊಸ ವಿಷಯಗಳನ್ನು ಕೇಳಿದಾಗ ಅರೇ, ನಾನು ಈ ದೃಷ್ಟಿಕೋನದಿಂದ ಆಲೋಚಿಸಲಿಲ್ಲವೆ? ಎಂದು ನಿಮಗೇ ಆಶ್ಚರ್ಯವಾಗುತ್ತದೆ. ಏಕೆಂದರೆ ನಮಗೇ ತಿಳಿದಿರುವುದೇ ಸರಿ ನಮ್ಮ ಆಧ್ಯಾತ್ಮಿಕತೆಯ ಏಳಿಗೆಗೆ ಅದೊಂದೇ ಮಾರ್ಗ ಎಂದುಕೊಳ್ಳುವಿರಿ. ಆದರೆ ನಿಮ್ಮ ಕಣ್ಣ ಮುಂದೆ ಒಂದೇ ಮಾರ್ಗವಿದೆ ಎಂದಾದರೆ ಇಷ್ಟು ಜನ ಇಷ್ಟು ಪುಸ್ತಕಗಳುನ್ನು ಏಕೆ ತಂದಿದ್ದಾರೆ?!

ಎಷ್ಟು ವಿಧಗಳಾಗಿ ಹೇಳುತ್ತಿದ್ದರೂ ನೀವು ಜ್ಞಾನದಲ್ಲಿ ಸ್ಥಿತವಾಗಲಾರಿರಿ. ಏಕೆಂದರೆ ಪರಮಾತ್ಮ ಕಾಣಿಸುವುದಿಲ್ಲ, ಆತನ ಸೃಷ್ಟಿ ಮಾತ್ರವೇ ಕಾಣಿಸುತ್ತದೆ. ಅದಕ್ಕೆ ನಿಮಗೆ ಮನಸ್ಸು ಇದೆಯಾದ್ದರಿಂದ ಅದು ಅನುಕ್ಷಣ ಮಾಯೆಗೆ ವಶವಾಗಿದೆ. ಭೂಮಿ ಮೇಲೆ ಇರುವ ಪ್ರತಿಯೊಂದು ಕೋರಿಕೆಗಳಿಗೆ ದಾಸರಾಗಿ ಇರುವ ಸಂಪತ್ತನ್ನು ನೋಡಿಕೊಳ್ಳುತ್ತಾ..., ಅಹಂಕಾರವನ್ನು ಹೆಚ್ಚಿಸಿಕೊಳ್ಳುತ್ತಾ... ಮಾನವ ಜನ್ಮದ ಉದ್ದೇಶವೇನು? ಎನ್ನುವುದನ್ನು ತಿಳಿದಿದ್ರು ಮರೆಯುತ್ತೀರಿ..

ಅದಕ್ಕೆ ನಿತ್ಯವೂ ಸಾಧನೆ, ಶ್ರವಣ ಎನ್ನುವುದು ಖಂಡಿತ ಸಾಧಕನಿಗೆ ಇರಬೇಕು. ಶಂಕರಾಚಾರ್ಯರು ಭಜಗೋವಿಂದಲ್ಲಿ ಏನು ಹೇಳಿದ್ದಾರೆ ಎಂದರೆ

**ಮಾ ಕುರು ಧನಂಜನ ಯೌವ್ವನ ಗರ್ವಂ**
**ಹರತಿ ನಿಮೇಷತ್ಕಾಲಃ ಸರ್ವಂ**
**ಮಾಯಾ ಮಯ ಮಿದ ಮಖಿಲಂ ಭೂತ್ವಾ**
**ಬ್ರಹ್ಮ ಪದಂ ತ್ವಂ ಪ್ರವಿಶ ವಿದಿರತ್ವ**

**ಅರ್ಥ:–** ನನಗೆ ಇಷ್ಟು ಹಣ ಇದೆಯೆಂದು, ಇಷ್ಟು ಜನ ನನ್ನ ಪರಿವಾರದವರು ನನ್ನ ರಕ್ಷಣೆಗೆ ಇದ್ದಾರೆ ಎಂದು, ನಾನು ಯೌವನದಲ್ಲಿದ್ದೇನೆ ಶಕ್ತಿ ಸಾಮರ್ಥ್ಯದೊಂದಿಗೆ ಕೂಡಿದ್ದೇನೆ ಇವೆಲ್ಲಾ ಇವೆ ಎಂದು ಗರ್ವ ಪಡದಿರು. ಅವೆಲ್ಲಾ ಒಂದೊಂದು ಬಾರಿ ಒಂದು ನಿಮಿಷದಲ್ಲಿ ಹೋಗಿಬಿಡುತ್ತವೆ. ಅವೆಲ್ಲವೂ ಕ್ಷಣಮಾತ್ರದಲ್ಲೇ ಹೋಗಿಬಿಡುತ್ತವೆ. ಇದೆಲ್ಲ ಮಾಯೆ. ಹಾಗೂ ಈ ಮಾಯೆಯನ್ನು ಜಯಿಸಬೇಕು. ಹಾಗೆ ಜಯಿಸಬೇಕು ಎಂದರೆ ಏನು ಮಾಡಬೇಕು? ಅವೆಲ್ಲ ಆಶಾಶ್ವತ ಎಂದುಕೊಳ್ಳುತ್ತಾ, ಇದೆಲ್ಲಾ ಮಾಯೆ

ಎಂದು ತಿಳಿದುಕೊಳ್ಳುತ್ತಾ... ಜ್ಞಾನಿಯಾಗಿ ಪರಬ್ರಹ್ಮವನ್ನು ಸ್ಮರಿಸು ಎಂದಿದ್ದಾರೆ ಶಂಕರಾಚಾರ್ಯರು.

ಅಂದರೆ ಈ ಭೂಮಿ ಮೇಲೆ ಇರುವ ಸಂಪತ್ತುಗಳೆಲ್ಲ ನಶಿಸುವುದೇ ಆಗಿದ್ದಾಗ ನಶಿಸದ ಸಂಪತ್ತು ಎಂದರೆ ಯಾವುದು? ಎಂದರೆ ಪರಮಾತ್ಮನ ಸನ್ನಿಧಿ. ಅದನ್ನು ಯಾವಾಗ ನೀನು ತಿಳಿದುಕೊಳ್ಳುವೆಯೋ, ಆಗ ಮಾತ್ರ ಯಾವುದನ್ನೋ ಆಧಾರ ಮಾಡಿಕೊಂಡು ಇದು ನನಗಿದೆ ಎಂದು ನೀನು ಗರ್ವಪಡುವುದಿಲ್ಲ.

ಉದಾಹರಣೆಗೆ ದುರ್ಯೋಧನನನ್ನು ತೆಗೆದುಕೊಂಡರೆ ವಂಶ ಪಾರಂಪರ್ಯವಾಗಿ ಬಂದ ಸಂಪತ್ತನ್ನು ನೋಡಿಕೊಂಡು ಅಹಂಕಾರವನ್ನು ಬೆಳೆಸಿಕೊಂಡನು. ಚಿಕ್ಕಂದಿನಿಂದ ಪಾಂಡವರೊಂದಿಗೆ ಸ್ನೇಹವಾಗಿದ್ದರೂ, ಈ ರಾಜ್ಯ ನಮ್ಮದು, ನಾವು ಚಕ್ರವರ್ತಿಗಳು ಎನ್ನುವ ಅಹಂಕಾರ ಬೆಳೆಸಿಕೊಳ್ಳುತ್ತಾ..., ನಿಜವಾದ ವಾರಸುದಾರರಾದ ಪಾಂಡವರೊಂದಿಗೆ ವಿರೋಧ ತಂದುಕೊಂಡನು. ಕೊನೆಗೆ ಆ ಸಂಪತ್ತುಗಳನ್ನು ಕಳೆದುಕೊಳ್ಳಬೇಕಾಗಿ ಬಂದಿತು. ಇದನ್ನೇ ಶಂಕರಾಚಾರ್ಯರು ಹೇಳಿದ್ದಾರೆ.

ಇವೆಲ್ಲ ಇವೆಯೆಂದು ಗರ್ಮಿಸುತ್ತಿರುವೆ ಹೊರತು ಅವುಗಳೆಲ್ಲ ಮಾಯೆಯೇ... ಸೃಷ್ಟಿ ಎನ್ನುವುದೇ ಮಾಯೆ! ಅದಕ್ಕೆ "ಆತ್ಮಸತ್ಯ ಜಗತ್ ಮಿಥ್ಯ" ಎಂದು ಎಷ್ಟೋ ಬಾರಿ ನಾವು ಎಷ್ಟೋ ವಿಧಗಳಾಗಿ ತಿಳಿದುಕೊಳ್ಳುತ್ತಾ ಇದ್ದೇವೆ. ಹಾಗೆ ತಿಳಿದುಕೊಂಡರೂ ಸಹಾ ಮಾಯೆಯಲ್ಲಿ ಸಿಲುಕಿಕೊಳ್ಳುತ್ತಾ ಇದ್ದೇವೆ. ಆ ಕ್ಷಣದಲ್ಲಿ ಅವರಿಗೆ ಅರಿವು ಇರುವುದಿಲ್ಲ. ಏಕೆಂದರೆ ಇದಕ್ಕೆ ಶಂಕರಾಚಾರ್ಯರು ಅರ್ಹತೆ ಇರುವವರಿಗೆ ಎರಡು ವಿಧಗಳಾಗಿ ಪರೀಕ್ಷೆಗಳು ಇರುತ್ತವೆ ಎಂದು ಹೇಳುತ್ತಾರೆ.

ಅರ್ಹತೆ ಇರುವವರಿಗೆ ಪರಬ್ರಹ್ಮ ಕಷ್ಟಗಳನ್ನು ಕೊಟ್ಟು, ಆ ಕಷ್ಟಗಳನ್ನು ಜಯಿಸಿದರೆ ತನ್ನ ಬಳಿಗೆ ಸೇರಿಸಿಕೊಳ್ಳುವನು. ಅರ್ಹತೆ ಇಲ್ಲದವರಿಗೆ ಸಂಪತ್ತನ್ನು ನೀಡಿ ಅವರನ್ನು ಮಾಯೆಯಲ್ಲಿ ದೂಡಿ ಅದೇ ಸರಿ ಎನ್ನುಕೊಳ್ಳುವಂತೆ ಭ್ರಾಂತಿಯನ್ನುಂಟು ಮಾಡಿ ಮತ್ತಷ್ಟು ಹಿಂದೆ ಹೋಗುವಂತೆ ಮಾಡುತ್ತಾನಂತೆ. ನೋಡಿ ನೀವು ಅಭಿವೃದ್ಧಿಯಾಗಬೇಕೆಂದರೆ, ಪ್ರಾಪಂಚಿಕತೆಯಲ್ಲಿ ಇದ್ದರೂ ಪರೀಕ್ಷೆ ಇರುತ್ತದೆ. ಧ್ಯಾನದಲ್ಲಿದ್ದರೂ ಪರೀಕ್ಷೆ ಇರುತ್ತದೆ. ಎರಡೂ ಪರೀಕ್ಷೆಗಳೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಪ್ರಾಪಂಚಿಕ ಜೀವನವನ್ನು ಇಷ್ಟಪಟ್ಟವರು ಈ ಸಂಪತ್ತನ್ನು ನೋಡಿಕೊಂಡು ಸಂಭ್ರಮಿಸುತ್ತಾನೆ ಹೊರತು, ಪರಮಾತ್ಮನ ಮೌಲ್ಯವನ್ನು ಮರೆಯುತ್ತಾ ಇರುತ್ತಾನೆ.

ಆದರೆ ಆಧ್ಯಾತ್ಮಿಕ ಜೀವನದಲ್ಲಿ ಇರುವವನು ಎಷ್ಟು ಸಂಪತ್ತು ಇದ್ದರೂ, ಪರಮಾತ್ಮನನ್ನು ಮರೆಯುವುದಿಲ್ಲ. ಅದಕ್ಕೆ ಉದಾಹರಣೆ ಬಲಿಚಕ್ರವರ್ತಿ... ಬಲಿಚಕ್ರವರ್ತಿಯ ಬಳಿಗೆ ವಿಷ್ಣುಮೂರ್ತಿ ವಾಮನನಾಗಿ ಬಂದಾಗ, ಗುರು ಶುಕ್ಲಾಚಾರ್ಯ "ಆತ ಏನು ದಾನ ಕೇಳಿದರೂ ಕೊಡಬೇಡ" ಎಂದು ಕಿವಿಮಾತು ಹೇಳಿದನಂತೆ. ಆತ ನಿನ್ನನ್ನು ಸಂಹರಿಸಲೇ ಬರುತ್ತಿದ್ದಾನೆ ಎಂದು ಹೇಳಿದರೂ, ಬಲಿಚಕ್ರವರ್ತಿ ಏನು ಹೇಳಿದನೆಂದರೆ?

ಎಷ್ಟೋ ಜನ ರಾಜರು ಭೂಮಿಯ ಮೇಲೆ ಬಂದು ಎಷ್ಟೋ ಸಂಪತ್ತುಗಳನ್ನು ಹೊಂದಿದ್ದಾರೆ. ಎಷ್ಟು ಚಕ್ರವರ್ತಿಗಳು ಈ ಭೂಮಿಯನ್ನು ಆಳಿದ್ದಾರೆ. ಆದರೆ ಯಾರ ಹೆಸರು ಶಾಶ್ವತವಾಗಿದೆ? ಈ ಹೆಸರು ಪ್ರತಿಷ್ಠೆಗಳಿಗಿಂತ, ಈ ಸಂಪತ್ತುಗಳಿಗಿಂತ, ರಾಜ್ಯಕ್ಕಿಂತ ಪರಮಾತ್ಮ ನನ್ನ ಮುಂದೆ ಕೈಚಾಚಿದಾಗ ನಾನು ಸತ್ತರೂ, ಈ ಜೀವನ ಮುಗಿದು ಹೋದರೂ, ಆತನಿಗೆ ಶರಣಾಗತನಾಗುತ್ತೇನೆ ಎಂದನು. ಗುರುವಿನ ಎಚ್ಚರಿಕೆಯ ಮಾತನ್ನು ಕೇಳದೆ ದಾನವನ್ನು ನೀಡಿದನು.

ಸಹಜವಾಗಿ ಮರಣಿಸುವುದು ಏನು ದೊಡ್ಡ ವಿಷಯವಲ್ಲ. ಪರಮಾತ್ಮನ ಕೈಯಲ್ಲಿ ಮರಣ ಎಷ್ಟೋ ದೊಡ್ಡ ಪುಣ್ಯಕಾರ್ಯ ಎಂದು ಆತ ನಿರ್ಣಯ ತೆಗೆದುಕೊಂಡು ದಾನ ಕೊಡಲು ನಿರ್ಣಯಿಸಿಕೊಂಡನು. ಅದಕ್ಕೆ ಚರಿತ್ರೆಯಲ್ಲಿ ಶಾಶ್ವತವಾಗಿ ಉಳಿದನು. ನಾನು ಚಕ್ರವರ್ತಿ ಎಂದು ಆತ ಪರಮಾತ್ಮನನ್ನು ಮರೆತು ಹೋಗಲಿಲ್ಲ. ಅದಕ್ಕೆ ರಾಕ್ಷಸ ಕುಲದಲ್ಲಿ ಹುಟ್ಟಿದ ಪ್ರಹ್ಲಾದನಾಗಲಿ, ಬಲಿಚಕ್ರವರ್ತಿಯಾಗಲಿ, ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿದು ಹೋಗಿದ್ದಾರೆ.

ಎಷ್ಟೋ ಜನ ರಾಕ್ಷಸರನ್ನು ನಾವು ಕೀಳಾಗಿ ನೋಡುತ್ತೇವೆ. ಯಾರಾದರೂ ಸರಿಯಾಗಿ ವರ್ತಿಸದಿದ್ದರೆ ರಾಕ್ಷಸ ಎನ್ನುತ್ತೇವೆ. ಹಾಗಾದರೆ ರಾಕ್ಷಸ ಜಾತಿಯಲ್ಲಿ ಹುಟ್ಟಿದರೂ, ತಮ್ಮ ಒಳ್ಳೆಯ ಗುಣಗಳಿಂದ ದೇವತಾ ಸ್ವಭಾವವನ್ನು ಹೊಂದಿದರು. ಯಾರಾದರೂ ಸರಿಯೇ ಭೂಮಿ ಮೇಲೆ ಸಾಧನೆ ಮಾಡಿದಾಗ ಉನ್ನತ ಸ್ಥಿತಿಯನ್ನು ಸೇರಬೇಕು. ಅಷ್ಟು ಉನ್ನತ ಸ್ಥಿತಿಗೆ ಯಾರು ಹೋಗುತ್ತಾರೆ ಎಂದರೆ ಪರಮಾತ್ಮನ ಕುರಿತು ಧ್ಯಾನ ಮಾಡುತ್ತಾ, ಆತನ ಸನ್ನಿಧಿಯೊಳಗೆ ಸೇರಿಕೊಳ್ಳಬೇಕು ಎಂದುಕೊಳ್ಳುವವರು ಮಾಯೆಯನ್ನು ಜಯಿಸುತ್ತಾರೆ. ಕಷ್ಟಗಳನ್ನು ಜಯಿಸುತ್ತಾರೆ ಉನ್ನತ ಸ್ಥಿತಿಗೆ ಬೆಳೆಯುತ್ತಾರೆ. ಅಹಂಕಾರಿಯಾದವನು ಮಾತ್ರವೇ ಮಾಯೆಯನ್ನು ಜಯಿಸುವುದಿಲ್ಲ ಎಂದು ಇಲ್ಲಿ ಅರ್ಥ ಮಾಡಿಕೊಳ್ಳಬೇಕು.

ರಾಮಕೃಷ್ಣ ಪರಮಹಂಸರು **"ಈ ಸೃಷ್ಟಿಯಲ್ಲಿ ನಾನೇ ಅಲ್ಲದೇ ನನ್ನನ್ನು ಮೀರಿದ ಮಹಾನುಭಾವರು, ಮಹನೀಯರು ಯಾವಾಗಲೂ ಇರುತ್ತಾರೆ ಎಂದು**

**ತಿಳಿದುಕೊಳ್ಳಬೇಕು"** ಎನ್ನುತ್ತಾ ತನ್ನ ಶಿಷ್ಯರಿಗೆ ಬೋಧಿಸುತ್ತಿದ್ದರಂತೆ. ಇದು ಪ್ರತಿ ಧ್ಯಾನಿ ತಿಳಿದುಕೊಳ್ಳಬೇಕಾದ ಮುಖ್ಯ ವಿಷಯ. ನೀವೇ ಮಹಾತ್ಮರಲ್ಲ ನಿಮ್ಮನ್ನು ಮೀರಿದ ಮಹಾತ್ಮರು ಈ ಸೃಷ್ಟಿಯಲ್ಲಿ ಯಾವಾಗಲೂ ಇರುತ್ತಾರೆ. ನಿಮಗಿಂತ ಜ್ಞಾನಿಗಳಿರಬಹುದು.... ನಿಮಗಿಂತ ಧ್ಯಾನ ಮಾಡುವವರು ಇರಬಹುದು... ನಿಮಗಿಂತ ಲೋಕಕ್ಕೆ ಉಪಯೋಗವಾಗುವವರು ಇರಬಹುದು. ಅದಕ್ಕೆ ನೀವೇ ಮಹಾತ್ಮರು ಎಂದು ಅಹಂಕಾರ ಬೆಳೆಸಿಕೊಳ್ಳಬಾರದು ಎಂದು ರಾಮಕೃಷ್ಣ ಪರಮಹಂಸರು ಶಿಷ್ಯರಿಗೆ ಬೋಧಿಸುತ್ತಾ ಒಂದು ಚಿಕ್ಕ ಉದಾಹರಣೆಯನ್ನು ಕೂಡಾ ಹೇಳಿದ್ದಾರೆ ಅದನ್ನು ತಿಳಿದುಕೊಳ್ಳೋಣ.

ಮಿಂಚು ಹುಳಗಳು ಕತ್ತಲಾದ ಕೂಡಲೇ ಹೊರಗೆ ಬಂದು ಅವುಗಳ ಕಾಂತಿಯನ್ನು ಹರಡುತ್ತವೆ. ಪ್ರತಿ ಹುಳುವು ಸಂಜೆಯಾಗುವ ಹೊತ್ತಿಗೆ ದೂರದಿಂದ ನೋಡಿದರೆ ಬೆಂಕಿಯ ಜ್ವಾಲೆಯಂತೆ ಕಾಣಿಸುತ್ತದೆ. ಆ ಮಿಂಚು ಹುಳಗಳು ಆಗ ನಾವೇ ಲೋಕಕ್ಕೆ ಕಾಂತಿಯನ್ನು ನೀಡುತ್ತಿದ್ದೇವೆ ಎಂದುಕೊಳ್ಳುತ್ತವೆಯಂತೆ. ಹಾಗೆ ಅಂದುಕೊಂಡ ಕೂಡಲೇ ಕ್ಷಣದಲ್ಲಿಯೇ ಆಕಾಶದಲ್ಲಿ ನಕ್ಷತ್ರಗಳು ಕಾಣುತ್ತವೆಯಂತೆ. ಆಗ ಮಿಂಚುಹುಳದ ಕಾಂತಿ ನಕ್ಷತ್ರದ ಮುಂದೆ ಪೇಲವವಾಗುತ್ತದೆಯಂತೆ. ಅಂದರೆ ಅವುಗಳಿಗಿಂತ ಕಾಂತಿಯನ್ನು ಹೊರಸೂಸುವ ನಕ್ಷತ್ರಗಳು ಬಂದಿವೆ ಎಂದು ಅವು ತಿಳಿದುಕೊಳ್ಳುತ್ತವೆ.

ಹಾಗೆ ನಕ್ಷತ್ರಗಳು ಕೂಡಾ ಆಕಾಶದಲ್ಲಿ ಪ್ರಕಾಶಿಸುತ್ತಿದ್ದಾಗ... ಅವು ಕೂಡಾ ಈ ಲೋಕಕ್ಕೆ ನಾವೇ ಕಾಂತಿಯನ್ನು ನೀಡುತ್ತಿದ್ದೇವೆ.. ನಮ್ಮಿಂದಲೇ ಕಾಂತಿ ಬರುತ್ತದೆ ಅಂದುಕೊಳ್ಳುವುತ್ತವೆಯಂತೆ. ಅವು ಹಾಗೆ ಅಂದುಕೊಂಡು ಅಹಂಕಾರ ಬೆಳೆಸಿಕೊಳ್ಳುವುದರೊಳಗೆ ಚಂದ್ರ ಬರುತ್ತಾನಂತೆ.

ಚಂದ್ರನು ಬಂದು ತನ್ನ ತಂಪನ್ನು, ಬೆಳಕನ್ನು ಕೊಡುತ್ತಾ... ನಾನು ಲೋಕಕ್ಕೆ ಎಷ್ಟೋ ಬೆಳಕನ್ನು ಆಹ್ಲಾದತೆಯನ್ನು ಕೊಡುತ್ತಿದ್ದೇನೆ ಎನ್ನುತ್ತಾನಂತೆ. ಹಾಗೆಂದುಕೊಂಡ ಸ್ವಲ್ಪ ಹೊತ್ತಿಗೆ ಸೂರ್ಯನು ಬರುತ್ತಾನಂತೆ, ಸೂರ್ಯನ ಕಿರಣಗಳ ಮುಂದೆ ಎಲ್ಲವೂ ಕಾಂತಿಹೀನ. ಆತನ ಕಾಂತಿಯ ಮುಂದೆ ಯಾವ ಕಾಂತಿಯಾದರೂ ಪೇಲವವಾಗುತ್ತದೆ.

ಸೂರ್ಯ ಪ್ರಪಂಚಕ್ಕೆ ಬೆಳಕನ್ನು ನೀಡುತ್ತಾನೆ. ಅದಕ್ಕೆ ದಿವ್ಯ ಮಾನವರನ್ನು ಸೂರ್ಯನೊಂದಿಗೆ ಹೋಲಿಸಿದ್ದಾರೆ. ರಾಮಕೃಷ್ಣ ಪರಮಹಂಸರು ಇದನ್ನೇ ಹೇಳುತ್ತಾ, ನಾವು ಕೂಡ, ಒಬ್ಬ ಸೂರ್ಯನಂತೆ ಪ್ರಜ್ವಲಿಸಬೇಕಾಗಲಿ, ಅದು ಬಿಟ್ಟು ಚಿಕ್ಕ ಶಕ್ತಿಗಳಿಗೆ ಅಹಂಕಾರವನ್ನು ಬೆಳೆಸಿಕೊಂಡರೆ, ಇರುವವು ಹಿಂದಕ್ಕೆ ತೆಗೆದುಕೊಳ್ಳಲ್ಪಡುತ್ತವೆ. ಎಂದು

ಹೇಳುತ್ತಿದ್ದರು. ಆದ್ದರಿಂದ ನಮಗಿಂತ ದೊಡ್ಡವರು ಈ ಲೋಕದಲ್ಲಿ ಇದ್ದೇ ಇರುತ್ತಾರೆ ಎನ್ನುವುದನ್ನು ಯಾರೂ ಮರೆಯಬಾರದು.

ಪರಬ್ರಹ್ಮವನ್ನು ಹೊಂದುವುದೇ ಪರಮಜ್ಞಾನ ಎಂದು ತಿಳಿದುಕೊಳ್ಳಲಾರದ ಬುದ್ಧಿಹೀನರೇ ಈ ಲೋಕದಲ್ಲಿ ಇರುವ ಸಂಪತ್ತನ್ನು ನೋಡಿ, ಬಂಧುಬಳಗವನ್ನು ನೋಡಿ ಅಹಂಕಾರ ಪಡುತ್ತಾರೆ. ಆದರೆ ಆ ಪರಬ್ರಹ್ಮವನ್ನು ಹೊಂದಿದರೆ ಬರುವ ಆನಂದ ಬೇರೆ ಯಾವುದರಿಂದಲೂ ಬರುವುದಿಲ್ಲ. ಅದಕ್ಕೆ, ಸಂಪತ್ತನ್ನು ನೋಡಿ ಮರೆಯಬಾರದು. ಸಂಪತ್ತುಗಳನ್ನು ನೋಡಿ  ಸಂಭ್ರಮ ಪಡಬಾರದು. ಜ್ಞಾನ ಹೊಂದಿದ ದಿನವೇ, ನೀನು ದಿವ್ಯ ಮಾನವನಾದ ದಿನವೇ ಸಂಭ್ರಮಿಸು ಎಂದಿದ್ದಾರೆ.

ನೀವು ದಿವ್ಯ ಮಾನವರಾಗುವುದು ಯಾವಾಗ? ಎಂದರೆ ಆತ್ಮವನ್ನು ದರ್ಶಿಸಿದಾಗ. ಈ ಬ್ರಹ್ಮಾಂಡವನ್ನು ತಿಳಿದುಕೊಂಡಾಗ, ದಿವ್ಯ ಮಾನವರಾಗುವಿರಿ. ಪತ್ರೀಜಿಯವರು ಯಾವಾಗಲು ನೀನು ಒಬ್ಬ ಕೊ–ಕ್ರಿಯೇಟರ್ ಆಗಬೇಕು ಎನ್ನುತ್ತಿದ್ದರು. ಸೃಷ್ಟಿಗೆ ಪ್ರತಿ ಸೃಷ್ಟಿ ಮಾಡಬಲ್ಲ ಶಕ್ತಿ ನಿನ್ನಲ್ಲಿಯೇ ಇರುವಾಗ, ನಿಮಗೆ ಬ್ರಹ್ಮಜ್ಞಾನ ಬಂದಂತೆಯೇ. ಅಂತಹ ಶಕ್ತಿ ಸಂಪಾದಿಸಬೇಕಾದ ಲಕ್ಷ್ಯ ನಿಮ್ಮ ಮುಂದೆ ಇರುವಾಗ, ಈ ಚಿಕ್ಕ ಚಿಕ್ಕ ನಶಿಸಿ ಹೋಗುವ ಸಂಪತ್ತುಗಳಾಗಲಿ ಈ ಭೂಮಿ ಮೇಲಿರುವ, ನಶಿಸಿ ಹೋಗುವ ವಿದ್ಯೆಗಳಾಗಲಿ ಯಾವುದನ್ನಾದರೂ ನೋಡಿ ನೀನು ಗರ್ವಿಸಿದರೆ ನಿನಗೆ ನಿಜವಾದ ಜ್ಞಾನ ಹೊಂದುವ ಅವಕಾಶವೂ ಹೋಗುತ್ತದೆ.

ಈ ಭೂಮಿ ಮೇಲೆ ಬಂದ ನಂತರ ನಿಮ್ಮ ಗಮ್ಯವೇನು? ನಿಮ್ಮ ಲಕ್ಷ್ಯವೇನು? ಎನ್ನುವುದನ್ನು ಪತ್ರೀಜಿಯವರು ಈಗಾಗಲೇ ಕಲಿಸಿದ್ದಾರೆ. ಹಾಗೆ ಕಲಿಸಿ ನಿಮ್ಮನ್ನು ಸುಮ್ಮನೆ ಬಿಟ್ಟಿಲ್ಲ. ಆತ ನಿಮ್ಮಿಂದ ನಿರಂತರ ಧ್ಯಾನ ಸಾಧನೆ ಮಾಡಿಸಿದ್ದಾರೆ. ಶ್ರವಣ ಮಾಡಿಸಿದ್ದಾರೆ, ಸ್ವಾಧ್ಯಾಯವನ್ನು ಮಾಡಿಸಿದ್ದಾರೆ. ಅದು ನಿಮಗೆ ಮನನವಾಗಲು 10 ಜನರಿಗೆ ಹಂಚು ಎಂದಿದ್ದಾರೆ. ನೀವು ಹತ್ತು ಜನರಿಗೆ ಹಂಚಿದಾಗ ಆ ಜ್ಞಾನ ಪ್ರಪಂಚವೆಲ್ಲಾ ವಿಸ್ತರಿಸುತ್ತದೆ. ಅದಕ್ಕೆ ಎಲ್ಲರಿಗೂ ಹೇಳಿ ಧ್ಯಾನ ಪ್ರಚಾರ ಮಾಡಿ ಎಂದು ಹೇಳುತ್ತಾರೆ.

ನೀವು ಮಾಸ್ಟರ್ ಆಗಿ ಬೆಳೆಯಲು ಎಷ್ಟೋ ಪುಸ್ತಕಗಳನ್ನು ಓದುತ್ತಿದ್ದೀರಿ. ಗುರುಗಳ ಬೋಧೆಗಳನ್ನು ಕೇಳುತ್ತಿದ್ದೀರಿ. ಆದರೆ ಅದಕ್ಕಿಂತ ಮೊದಲು ಮನಸ್ಸು ಶುದ್ಧತ್ವಕ್ಕೆ ಬರಬೇಕು ಅದಕ್ಕೆ ನಿರಂತರ ಸಾಧನ ಅಗತ್ಯ.

ಏಕೆಂದರೆ ಈಗ ನೋಡಿ ಒಂದು ವಸ್ತ್ರದ ಮೇಲೆ ಪ್ರಿಂಟ್ ಹಾಕಬೇಕು ಎಂದರೆ ಮೊದಲು ಆ ವಸ್ತ್ರವನ್ನು ಶುಭ್ರಗೊಳಿಸುತ್ತಾರೆ. ಶುಭ್ರಗೊಳಿಸಿದ ನಂತರವೇ ಪ್ರಿಂಟ್ ಹಾಕುತ್ತಾರೆ. ಇಲ್ಲದಿದ್ದರೆ ಆ ಪ್ರಿಂಟ್ ಸರಿಯಾಗಿ ಕಾಣುವುದಿಲ್ಲ. ಹಾಗೆಯೇ ನಿಮ್ಮ ಮನಸ್ಸು ಪ್ರಪಂಚದ ಕಡೆಗೆ ಹೊರಳಿ ಕೊಳೆಯನ್ನು ಸಂಗ್ರಹಿಸಿಕೊಳ್ಳುತ್ತದೆ. ಅದು ಯಾವ ಕೊಳೆ? ಎಂದರೆ ಆಸೆ ಎನ್ನುವ ಕೊಳೆ, ಸ್ವಾರ್ಥ ಎನ್ನುವ ಕೊಳೆ. ದಿನವೂ ಸಾಧನೆಯಿಂದ ನೀವು ಆ ಮನಸ್ಸಿಗೆ ಹಿಡಿದ ಕೊಳೆಯನ್ನು ಹೋಗಲಾಡಿಸಿಕೊಳ್ಳಬೇಕು.. ಹೋಗಲಾಡಿಸಿಕೊಂಡು ಶುಭ್ರವಾದ ಹಾಳೆಯಂತೆ ಇರಿಸಿಕೊಂಡಾಗ, ಗುರುಗಳು ಹೇಳಿದ್ದು... ಆತ್ಮ ಜ್ಞಾನ ಹೊಂದಿದ ಮಾಸ್ಟರ್ ಹೇಳಿದ ವಿಷಯಗಳು ನಿಮ್ಮಲ್ಲಿ ಅಚ್ಚೊತ್ತುತ್ತವೆ. ಆಗ ನೀವು ಮತ್ತೊಬ್ಬರಿಗೆ ಅದನ್ನು ಹೇಳಿದಾಗ ನೀವು ಮತ್ತಷ್ಟು ಜ್ಞಾನವಂತರಾಗಿ ಬೆಳೆಯಲು ಸಾಧ್ಯ.

ನಿಜವಾಗಿಯೂ ನೀವು ಏಕೆ ಜ್ಞಾನವಂತರಾಗಬೇಕು ಎಂದರೆ, ಮಾನವ ಜನ್ಮದ ಪರಮಾರ್ಥ ಈ ದೇಹ ಇರುವಾಗಲೇ ನಿಮ್ಮನ್ನು ಸೃಷ್ಟಿಸಿದವನನ್ನು ತಿಳಿದುಕೊಳ್ಳಲಿಕ್ಕಾಗಿ... ತಿಳಿದುಕೊಳ್ಳದೆ ಇದ್ದರೆ ನೀವು ಅದನ್ನು ತಿಳಿಯುವವರೆಗೂ ಜನ್ಮಗಳನ್ನು ತೆಗೆದುಕೊಳ್ಳುತ್ತಾ ಇರಬೇಕು. ಜನ್ಮ ಎಂದರೆ ಮತ್ತೆ ನೋವುಗಳು, ಕಷ್ಟಗಳು, ಕಣ್ಣೀರು, ಕೋರಿಕೆಗಳು, ಅಹಂಕಾರಗಳು, ಮಮಕಾರಗಳು. ಸ್ವಲ್ಪ ಹೊತ್ತು ಸುಖ, ಸ್ವಲ್ಪ ಹೊತ್ತು ಕಷ್ಟ, ಸ್ವಲ್ಪ ಹೊತ್ತು ದುಃಖ, ಸ್ವಲ್ಪ ಹೊತ್ತು ಸಂತೋಷ ಇರುತ್ತದೆ.

ಅದಕ್ಕೆ ಇವೆಲ್ಲವೂ ಇಲ್ಲದೆ ಶಾಶ್ವತವಾದ ಆನಂದ ಹೊಂದಬೇಕು ಎಂದರೆ, ಭೂಮಿಯ ಮೇಲೆ ಸೃಷ್ಟಿಸಲ್ಪಟ್ಟ ಪ್ರತಿ ಜೀವಿಯು ತಾನು ಮಾನವ ಜನ್ಮ ತೆಗೆದುಕೊಂಡು, ಜನ್ಮದ ಅಂತಿಮ ಗುರಿಯಾದ ಪರಮಾತ್ಮನನ್ನು ತಿಳಿದುಕೊಳ್ಳಬೇಕು. ನಿಮ್ಮ ಗಮ್ಯವಾದ ಸತ್ಯಲೋಕವನ್ನು ಸೇರಬೇಕು. ಮತ್ತೆ ಈ ವಿಷಯವನ್ನು ನೀವು ಈ ಮಾರ್ಗಕ್ಕೆ ಬಂದ ನಂತರ ನೀವು ತಿಳಿದುಕೊಂಡಿದ್ದೀರಾ... ಆದ್ದರಿಂದ ಆ ಲಕ್ಷ್ಯವನ್ನು ಸಾಧಿಸಲು ಪ್ರಯತ್ನಿಸಬೇಕು.

ನೋಡಿ ಈಗ ಪ್ರಾಪಂಚಿಕ ಓದಿನಲ್ಲಿ ಒಳ್ಳೆಯ ಅಂಕಗಳು ಬರಬೇಕು. ಅಂದರೆ ಒಳ್ಳೆಯ ರಾಂಕ್ ಬರಬೇಕು. ಅಂದುಕೊಂಡ ಹಾಗೆ ಸೀಟ್ ಬರಬೇಕು ಅಂದರೆ ವಿದ್ಯಾರ್ಥಿಗಳು ತುಂಬಾ ಕಷ್ಟಪಡುತ್ತಾರೆ. ರಾತ್ರಿ ಹಗಲು ಓದುತ್ತಾರೆ. ಸ್ಪೆಷಲ್ ಕೋಚಿಂಗ್ ತೆಗೆದುಕೊಳ್ಳುತ್ತಾರೆ. ಎಷ್ಟೋ ತಂತ್ರಗಳನ್ನು ಕಲಿಯುತ್ತಾರೆ. ಕಲಿತು ತಮಗೆ ಬೇಕಾದ ಸೀಟನ್ನು ಸಂಪಾದಿಸಿಕೊಳ್ಳುತ್ತಾರೆ.

ಹಾಗೆ ಸತ್ಯಲೋಕವಾಸಿಗಳಾದ ನೀವು ಕೂಡಾ ಭೂಮಿ ಮೇಲೆ ಬಂದು ಮತ್ತೆ ಮರಳಿ ಅಲ್ಲಿಗೆ ಸೇರಿಕೊಳ್ಳಲು ನಿತ್ಯವೂ ಸಾಧನೆ, ಸಜ್ಜನ ಸಾಂಗತ್ಯ, ಸ್ವಾಧ್ಯಾಯವನ್ನು

ಕಡ್ಡಾಯವಾಗಿ ಮಾಡಿದಾಗ ಎಷ್ಟೋ ವಿಷಯಗಳು ತಿಳಿದುಕೊಳ್ಳುತ್ತಾ... ಮುಂದಕ್ಕೆ ಸಾಗುವಿರಿ. ಅಹಂಕಾರ ಎನ್ನುವುದು ನಾಲ್ಕು ಅಕ್ಷರಗಳ ಮಾತು. ಆದರೆ ಅದೇ ನಿಮ್ಮನ್ನು ಕೆಳಗೆ ತಳ್ಳಲು ದೊಡ್ಡ ಕಾರಣ ಆಗುತ್ತದೆ. ಮಮಕಾರ ಕಡಿಮೆ ಇದ್ದರೂ, ಅಹಂಕಾರ ಎನ್ನುವುದು ಎಲ್ಲರಿಗೂ ಹೆಚ್ಚಾಗಿಯೇ ಇರುತ್ತದೆ.

ಅದಕ್ಕೆ ಸಂಪತ್ತಿನಿಂದ ಆಗಲಿ, ಪರಿವಾರದಿಂದ ಆಗಲಿ ಯಾವುದು ಬರುವುದೋ ಅದೆಲ್ಲವೂ  ಕ್ಷಣ ಕಾಲ ಇರುತ್ತವೆ. ಇದನ್ನು ತಿಳಿದುಕೋ ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಇವು ಕ್ಷಣ ಕಾಲದಲ್ಲಿ ಹೋಗಬಹುದು. ದುರ್ಯೋಧನನು ಎಷ್ಟು ಅಹಂಕಾರ ಪಟ್ಟನು. ಆದರೆ ತಾನು ಮರಣಿಸಿದ ನಂತರ ಏನು ತೆಗೆದುಕೊಂಡು ಹೋಗಲಿಲ್ಲ. ಯಾವುದನ್ನು ತೆಗೆದುಕೊಂಡು ಹೋಗಲಿಲ್ಲ. ಅಹಂಕಾರದೊಂದಿಗೆ ಕೃಷ್ಣ ಪರಮಾತ್ಮ ಪಕ್ಕದಲ್ಲಿ ಇದ್ದರೂ ಗುರುತಿಸಲಾರದೆ ಹೋದನು. ಅಹಂಕಾರದೊಂದಿಗೆ ಕೃಷ್ಣನ ಮಾತುಗಳನ್ನು ಉಪೇಕ್ಷಿಸಿದನು. (ತಿರಸ್ಕರಿಸಿದನು).

ಹಾಗೆ ನೀವು ಅಗತ್ಯವಿಲ್ಲದ ವಿಷಯಗಳನ್ನು ಕೇಳುವುದಕ್ಕಿಂತ, ಗುರು ಹೇಳಿದ ಕೆಲವು ವಾಕ್ಯಗಳನ್ನು ಕೇಳಿದರೆ ಎಷ್ಟೋ ಉನ್ನತ ಸ್ಥಿತಿಗೆ ಸೇರಿಕೊಳ್ಳುತ್ತಾರೆ. ಗಮನಿಸಿ ಪತ್ರೀಜಿಯವರು ಸರಳವಾದ ವಾಕ್ಯಗಳಲ್ಲಿ **'ಧ್ಯಾನದಿಂದಲೇ ಜ್ಞಾನ.. ಜ್ಞಾನದಿಂದಲೇ ಮೋಕ್ಷ'** ಎಂದು ಹೇಳಿದ್ದಾರೆ.

ನಿನಗೆ ಮೋಕ್ಷ ಬೇಕೆಂದರೆ ಧ್ಯಾನ ಮಾಡು. ಯಾರೋ ಹೇಳಿದ ಜ್ಞಾನವನ್ನು, ಪುಸ್ತಕದ ಜ್ಞಾನವನ್ನು ನೀನು ತಿಳಿದುಕೊಂಡಿದ್ದರೂ ನಿನ್ನಲ್ಲಿ ಆ ಜ್ಞಾನ ಸ್ಥಿತವಾಗಿ ಇರಬೇಕೆಂದರೆ, "ಶ್ವಾಸದ ಮೇಲೆ ಗಮನ "ಎನ್ನುವ ಧ್ಯಾನ ಇರಲೇ ಬೇಕು. ಅದನ್ನು ನೀವು ಎಲ್ಲಿ ಮರೆತು ಹೋಗುತ್ತೀರೋ ಎಂದು ಧ್ಯಾನ ಅಂದರೆ "ಶ್ವಾಸದ ಮೇಲೆ ಗಮನ"ವೆಂದು ಎಲ್ಲಾ ಕಡೆ ಬೋರ್ಡ್ ಬರೆಸಿ ಇಟ್ಟಿದ್ದಾರೆ. ಎಲ್ಲವನ್ನು ತಿಳಿದುಕೊಂಡರೂ, ನೀವು ಅಹಂಕಾರ ಬೆಳೆಸಿಕೊಳ್ಳುತ್ತಾ, ಸಂಪತ್ತು ಇದೆ ಎಂದು ಸಂತೋಷಪಡುತ್ತಾ ಸಂಭ್ರಮಗಳನ್ನು ಮಾಡಬಾರದು.

ಸಂಪತ್ತು ಬೆಳೆಯುತ್ತಾ ಹೋದಂತೆ ಪ್ರತಿಯೊಂದು ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಹುಟ್ಟಿದ ದಿನ, ಮದುವೆಯ ದಿನ,  ಮೊಮ್ಮಗ ಹುಟ್ಟಿದ ದಿನ, ಮಗ ಹುಟ್ಟಿದ ದಿನ,  ಆ ದಿನ... ಈ ದಿನ.. ಎಂದು ಎಷ್ಟೋ ಸಂಭ್ರಮಗಳು ಇರುತ್ತವೆ. ಆದರೆ ಇಂತಹ ಸಂಭ್ರಮಗಳು ಮಾಡಿಕೊಳ್ಳುವುದಲ್ಲ. ಜ್ಞಾನ ಹೆಚ್ಚಿದ ದಿನದಲ್ಲಿ ನೀನು ಒಬ್ಬ ಆತ್ಮ ಜ್ಞಾನಿ ಯಾಗುವೆ, ಬ್ರಹ್ಮಜ್ಞಾನಿಯಾದ ಆ ದಿನವೇ ನೀನು ಸಂಭ್ರಮ ಆಚರಿಸಬೇಕು.

ಹಾಗಾದರೆ ನಿಮಗೆ ಜ್ಞಾನ ಹೆಚ್ಚಿದೆ ಎನ್ನಲು ಇರುವ ಕುರುಹು ಏನು? ಎಂದರೆ ಧ್ಯಾನ ಕಲಿಯುವರನ್ನು ಪ್ರಕೃತಿಯು ನಿಮ್ಮ ಮುಂದೆ ಕಳುಹಿಸುತ್ತದೆ. ಪತ್ರೀಜಿಯವರು 'ನಿನ್ನ ಮುಂದೆ ಎಷ್ಟೋ ಜನ ಕುಳಿತಿದ್ದಾರೋ ಅಷ್ಟು ಶಕ್ತಿ ನಿನಗಿದೆ ಎಂದು ತಿಳಿದುಕೋ' ಎಂದು ಹೇಳಿದ್ದಾರೆ. ಈ ದಿನ 10 ಜನರು ಬಂದಿದ್ದಾರೆ ಅಂದರೆ ನಿನ್ನ ಶಕ್ತಿಗೆ ನೂರು ಜನರು ಬರಬೇಕೆಂದು ನೀನು ಕೋರಿದರೆ ಅಷ್ಟು ಶಕ್ತಿ ನೀನು ಸಂಪಾದಿಸಿದ ದಿನವೇ ಪ್ರಕೃತಿಯೇ ನಿನ್ನ ಮುಂದೆ ಅಷ್ಟು ಜನರನ್ನು ಕುಳ್ಳಿರಿಸುತ್ತದೆ. ಪ್ರಕೃತಿಗೆ ಯಾವ ಪಕ್ಷಪಾತವೂ ಇಲ್ಲ.

ಅಷ್ಟೇ ಹೊರತು ನಾನು ಕ್ಲಾಸ್‌ಗೆ ಹೋಗುವುದಿಲ್ಲ ಜನರು ಕಡಿಮೆ ಬಂದಿದ್ದಾರೆ ಎಂದುಕೊಂಡರೆ? ಅದು ಜನರ ತಪ್ಪಲ್ಲ ನಿನ್ನ ಶಕ್ತಿಯ ಲೋಪ ಅದಕ್ಕೆ ಧ್ಯಾನವನ್ನು ಹೆಚ್ಚಿಸಿಕೋ... ಧ್ಯಾನ ಶಕ್ತಿಯನ್ನು ಹೆಚ್ಚಿಸಿಕೋ... ಜ್ಞಾನ ಶಕ್ತಿಯನ್ನು ಹೆಚ್ಚಿಸಿಕೋ... ಆಗಲೇ ನೀನು ಹೇಳುವ ಜ್ಞಾನವನ್ನು ಕೇಳಲು ಎಷ್ಟೋ ಜನರು ಬರುತ್ತಾರೆ. ಇಲ್ಲಿ ಅವರ ಲೋಪ ಇವರ ಲೋಪ ಯಾವುದೂ ಇಲ್ಲ. ಆ ಲೋಪವೆಲ್ಲಾ ನಿನ್ನಲ್ಲಿ ಇದೆ. ಸೃಷ್ಟಿಯಲ್ಲಿ ಯಾವುದೇ ಲೋಪ ಇಲ್ಲ. ನಿನ್ನ ದೃಷ್ಟಿಯಲ್ಲಿ ಲೋಪವಿದೆ. ನೀನು ಅಧ್ಯಾತ್ಮಿಕತೆಯಲ್ಲಿ ಎಷ್ಟೋ ಬೆಳೆದಿದ್ದೇನೆ ಅಂದುಕೊಳ್ಳುವೆ. ಆದರೆ ನಿಜವಾಗಿಯೂ ನೀನು ಹಾಗೆ ಬೆಳೆದರೆ ಪ್ರಕೃತಿಯೇ ನಿನ್ನ ಮುಂದೆ ಜನರನ್ನು ಕೂರಿಸುತ್ತದೆ.

ಯಾವಾಗಲೂ ನಾನು ಉತ್ತಮ ಸ್ಥಿತಿಯಲ್ಲಿ ಇದ್ದೇನೆ ಎಂದು ಸಂಭ್ರಮಿಸಬಾರದು. ಇನ್ನು ಬೆಳೆಯಬೇಕು ಬೆಳೆಯಬೇಕು ಎನ್ನುವ ಕೋರಿಕೆ ನಿರಂತರ ನಿನ್ನಲ್ಲಿ ಇದ್ದಾಗ, ನೀನು ಅಭಿವೃದ್ಧಿಯಾಗಲು ಪ್ರಯತ್ನಿಸುವೆ ಎಂದು ಪತ್ರೀಜಿಯವರು ಯಾವಾಗಲೂ ಹೇಳುತ್ತಾರೆ. ಪ್ರಪಂಚದಲ್ಲಿರುವುದೆಲ್ಲವೂ ನಿನಗೆ ಅಹಂಕಾರ ಹೆಚ್ಚಿಸಲು ನಿನ್ನ ಸುತ್ತಲೂ ಇರುತ್ತದೆ. ಆದರೆ ನೀನು ಆ ಮಾಯೆಗೆ ಸಿಲುಕಬಾರದು.

ಪತ್ರೀಜಿಯವರು ಸಾಯುವ ಮೊದಲು ಕೊನೆಯ ಬಾರಿ ನಮ್ಮ ಮನೆಗೆ ಬಂದು ಹೋಗುವಾಗ, ಮತ್ತೆ ಹಿಂದಕ್ಕೆ ಬಂದು "ನೀನು ಯಾವಾಗಲೂ ಮಾಯೆಗೆ ಒಳಗಾಗಬೇಡ" ಎಂದು ಮೂರು ಸಾರಿ ಹೇಳಿ ಕಾರು ಹತ್ತಿ ಹೊರಟು ಹೋದರು. ಅದೇ ಕೊನೆಯ ಬಾರಿ ಪರ್ಸನಲ್ ಆಗಿ ನನ್ನೊಂದಿಗೆ ಮಾತನಾಡಿದ ಮಾತು. ನಾನು ಆಗ ಅದನ್ನು ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ. ನಾನೇಕೆ ಮಾಯೆಯಲ್ಲಿ ಬೀಳುತ್ತೇನೆ? ಎಂದುಕೊಂಡೆ.

ಆದರೆ ನಮ್ಮ ಸುತ್ತಲೂ ಮಾಯೆ ಎನ್ನುವುದು ಎಷ್ಟೋ ವಿಧಗಳಾಗಿ ಬರುತ್ತದೆ ಎಂದು ಶಂಕರಾಚಾರ್ಯರು 'ಭಜಗೋವಿಂದಂ' ನ ಈ ಶ್ಲೋಕದಲ್ಲಿ ಹೇಳಿದ್ದಾರೆ. ಧನದಿಂದ, ಪರಿವಾರದಿಂದ, ಯೌವ್ವನದಿಂದ ನಮಗೆ ಅಹಂಕಾರ ಬರಬಹುದು. ನಾನು

ಖರ್ಚು ಮಾಡುತ್ತಿದ್ದೇನೆ ಎಂದು ಬರಬಹುದು, ಅಥವಾ ನಿಮ್ಮ ಕ್ಲಾಸಿಗೆ ಬಂದ ಜನ ನಿಮ್ಮನ್ನು ಹೊಗಳುತ್ತಿದ್ದಾರೆ ಎಂದು ಅಹಂಕಾರ ಬರಬಹುದು. ಅಥವಾ ನಾನು ಇಷ್ಟು ಓಡಾಡುತ್ತಿದ್ದೇನೆ ಎಂದು ಬರಬಹುದು. ಆದರೆ ಇವೆಲ್ಲ ಮಾಯೆ... ಇವುಗಳು ಒಂದು ಕ್ಷಣದಲ್ಲಿ ಹೋಗಲೂಬಹುದು.

ಅದಕ್ಕೆ ಪ್ರಪಂಚದಲ್ಲಿ ನೀವು ಎಷ್ಟು ಉನ್ನತ ಸ್ಥಾಯಿಗೆ ಹೋದರೂ, ಪ್ರತಿ ನಿಮಿಷ ನಿನ್ನ ಮನಸ್ಸಿನಲ್ಲಿ ಇದೆಲ್ಲ ಮಾಯೆ. ಈ ಜಗತ್ತೇ ಮಾಯೆ ಎಂದು ತಿಳಿದುಕೊಂಡಾಗ, ಇವೆಲ್ಲವೂ ಮಾಯೆಯಲ್ಲಿ ಭಾಗಗಳೇ ಅಂದುಕೊಂಡಾಗ, ನೀವು ಸಂಪತ್ತನ್ನು ನೋಡಿ ಸಂಭ್ರಮಗಳನ್ನು ಆಚರಿಸುವುದಿಲ್ಲ. ಜ್ಞಾನವನ್ನು ಬೆಳೆಸಿಕೊಂಡ ದಿನವೇ ಸಂಭ್ರಮಗಳನ್ನು ಆದರಿಸುವಿರಿ.

*** ***

## ಆಧ್ಯಾತ್ಮಿಕ ಜೀವನದ ಮೇಲೆ ಏಕೆ ದೃಷ್ಟಿ ಹರಿಸಲು ಆಗುತ್ತಿಲ್ಲ?

ಆಧ್ಯಾತ್ಮಿಕ ಜೀವನದಿಂದಲೇ ಮಾನವನು ಪೂರ್ಣತ್ವವನ್ನು ಹೊಂದುತ್ತಾನೆ. ಎಂದು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಮತ್ತೆ ಅಮರತ್ವ ಹೊಂದಲು ಮಾನವ ಜನ್ಮವೇ ಅನುಕೂಲವಾದ ಜನ್ಮ. ಏಕೆಂದರೆ ಮಾನವ ಜನ್ಮದಲ್ಲಿ ಅಮರತ್ವ ಎಂದರೇನು? ಆಧ್ಯಾತ್ಮಿಕ ಮಾರ್ಗದಲ್ಲಿ ಅದನ್ನು ಹೇಗೆ ಸಾಧಿಸಬಹುದು? ಎಂದು ಹೇಳುತ್ತಾರೆ.

ಅದಕ್ಕೆ ಪ್ರಾಪಂಚಿಕ ಜೀವನ ಮಾತ್ರ ಜೀವಿಸಿದರೆ ಅದು ಅಸಂಪೂರ್ಣ ಜೀವನ. ಪ್ರಾಪಂಚಿಕ ಜೀವನದೊಂದಿಗೆ ಆಧ್ಯಾತ್ಮಿಕ ಜೀವನವನ್ನು ಸ್ವೀಕರಿಸಿದರೆ ಅಮರ ಜೀವನ ಹೊಂದಬಹುದು ಎಂದು ಹೇಳುತ್ತಾರೆ.

ತುಂಬಾ ಜನರು ಅಮರತ್ವ ಎಂದರೆ ಸಾಯುವುದು ಎಂದುಕೊಳ್ಳುತ್ತಾರೆ. ಆದರೆ ಅದಲ್ಲ, ಅದು ತುಂಬಾ ಉನ್ನತವಾದ ಜೀವನ. ಪರಿಪೂರ್ಣವಾದ ಜೀವನ. ಅದಕ್ಕೆ ಮಹಾತ್ಮರು ಏನು ಹೇಳುತ್ತಾರೆಂದರೆ, ಅಮರತ್ವ ಜೀವನ ಹೊಂದಲು ಈ ಭೂಮಿ ಮೇಲೆ ಆಧ್ಯಾತ್ಮಿಕ ಮಾರ್ಗ ಹಾಗೂ ಮಾನವ ಜನ್ಮ ಎರಡೂ ಇದ್ದರೆ ಮಾತ್ರ ಅವರು ಮೇಲಿನ ಲೋಕದಲ್ಲೂ, ಈ ಲೋಕದಲ್ಲೂ ಚೆನ್ನಾಗಿ ಆನಂದವಾಗಿ ಜೀವಿಸಬಲ್ಲರು ಎಂದು ಹೇಳುತ್ತಾರೆ.

ಭಗವಂತನ ಕುರಿತು ತಿಳಿದುಕೊಳ್ಳುವ ಜೀವನವನ್ನೇ ಆಧ್ಯಾತ್ಮಿಕ ಜೀವನ ಎನ್ನುತ್ತಾರೆ. ಪ್ರಾಪಂಚಿಕ ಜೀವನದಲ್ಲಿ ಭಗವಂತ ಕೊಡುವುದು ಅನುಭವಿಸುತ್ತಾ... ಅದೇ ಆನಂದ ಎಂದುಕೊಳ್ಳುತ್ತಾ ಪರಿಮಿತ ಸಂತೋಷ, ಪರಿಮಿತ ಸುಖಗಳು, ಪರಿಮಿತ ಆನಂದ ಹೊಂದುತ್ತಾ ಒಮ್ಮೊಮ್ಮೆ ಆ ಭೋಗಗಳ ಮೇಲೆ ವಿರಕ್ತಿ ಹೊಂದುತ್ತಾ, ದುಃಖವನ್ನು ಅನುಭವಿಸುತ್ತಿದ್ದಾರೆ.

ಅವರು ಕೆಲವು ಜನ್ಮಗಳು ಆ ವಿಧವಾದ ಜೀವನವನ್ನು ಜೀವಿಸಿದ ನಂತರ ಒಬ್ಬ ಗುರುವಿನಿಂದಲೂ, ಸ್ನೇಹಿತನಿಂದಲೂ, ಯಾರೋ ಒಬ್ಬ ಅನಾಮಿಕ ವ್ಯಕ್ತಿಯಿಂದಲೋ ಈ ಆಧ್ಯಾತ್ಮಿಕ ಜೀವನದ ಕುರಿತು ತಿಳಿದುಕೊಂಡು ಇದರಲ್ಲಿ ಜೀವಿಸಲು ಮುಂದಾಗುತ್ತಾರೆ. ಆದರೆ ಈ ಆಧ್ಯಾತ್ಮಿಕ ಜೀವನ ಎಷ್ಟು ಉನ್ನತವಾದದ್ದು ಎಂದು ತಿಳಿದುಕೊಂಡರೂ, ಇದರಿಂದ ಪ್ರಪಂಚದಲ್ಲಿ ಬರುವ ಲಾಭಗಳನ್ನು ತಿಳಿದುಕೊಂಡರೂ ಕೆಲವರು ಶ್ರದ್ಧೆಯನ್ನು ಇಡುವುದಿಲ್ಲ. ಹಾಗೂ ಇದೇ ಶಾಶ್ವತವಾದ ಆನಂದವನ್ನು ನೀಡುತ್ತದೆ ಎಂದು ತಿಳಿದುಕೊಂಡರೂ ಇದರ ಮೇಲೆ ದೃಷ್ಟಿಯನ್ನು ಹರಿಸುತ್ತಿಲ್ಲ. ಅದಕ್ಕೆ ಕಾರಣವೇನು ತಿಳಿದುಕೊಳ್ಳೋಣ.

1) ಚಿಕ್ಕಂದಿನಿಂದ ಅವರು ಬೆಳೆದ ವಾತಾವರಣದಲ್ಲಿ ಆಧ್ಯಾತ್ಮಿಕ ಪರಿಜ್ಞಾನ ಇಲ್ಲದಿರುವುದು... ಕೆಲವರು ಜೀವನದಲ್ಲಿ ನೋಡಿದರೆ ತಂದೆ ತಾಯಿಗೆ ಈ ಆಧ್ಯಾತ್ಮಿಕ ಜೀವನದ ಹಿರಿಮೆ ತಿಳಿದುಕೊಳ್ಳುವಷ್ಟು ಪರಿಜ್ಞಾನ ಇರುವುದಿಲ್ಲ. ಅವರಿಗೆ ಈ ಜ್ಞಾನವಿಲ್ಲದೆ ತಮ್ಮ ಮಕ್ಕಳಿಗೂ ಏನೂ ಹೇಳುವುದಿಲ್ಲ. ಆಧ್ಯಾತ್ಮಿಕತೆ ತಿಳಿಯದ ಪರಿಸರದಲ್ಲಿ ಬೆಳೆದ ಮಕ್ಕಳು ಅದೇನು ತಿಳಿಯದೆ ಕಣ್ಣೆದುರಿಗೆ ಕಾಣುತ್ತಿರುವ ಸೃಷ್ಟಿಯನ್ನೇ ತುಂಬಾ ಉನ್ನತವಾದದ್ದು ಎಂದುಕೊಳ್ಳುತ್ತಾರೆ.

ಆ ಪರಿಜ್ಞಾನ ಇರುವವರು ಮಾತ್ರ ಭಗವಂತನ ಹಿರಿಮೆಯನ್ನು ತಿಳಿದುಕೊಳ್ಳುತ್ತಾರೆ. ಈ ಭೂಮಿ ಮೇಲೆ ಎಷ್ಟು ಹೊಂದಿದರೂ, ಏನು ಹೊಂದಿದರೂ ಸುಖ ಸಂತೋಷ ಹೊಂದಬಹುದು. ಆದರೆ ಶಾಶ್ವತ ಆನಂದ ಬರುವುದಿಲ್ಲ. ಆ ಶಾಶ್ವತ ಆನಂದ ಹೊಂದಬೇಕು ಎಂದರೆ ಆಧ್ಯಾತ್ಮಿಕ ಜೀವನದಿಂದಲೇ ಸಾಧ್ಯ ಎಂದು ತಿಳಿದುಕೊಳ್ಳುವ ಪರಿಜ್ಞಾನ ತಂದೆ ತಾಯಿಯರಿಗೆ ಇಲ್ಲದೆ ಆ ಮಕ್ಕಳು ಕೂಡ ತಿಳಿಯಲಾರರು.

ಈಗ ಎಷ್ಟೊ 99% ಜನರು ಈ ಜ್ಞಾನ ಇಲ್ಲದೆ ಈ ಭೂಮಂಡಲದಲ್ಲಿ ದುಃಖ ಅನುಭವಿಸುತ್ತಿದ್ದಾರೆ. ಶಾಂತಿ ಇಲ್ಲದೇ ಜೀವಿಸುತ್ತಿದ್ದಾರೆ. ಆತಂಕದಿಂದ ಬದುಕುತ್ತಿದ್ದಾರೆ. ಹೊರಗೆ ನೋಡಲು ಎಲ್ಲರೂ ಚೆನ್ನಾಗಿರುವಂತೆ ಕಂಡರೂ, ಒಳಗೆ ಆತಂಕಕ್ಕೆ ಒಳಗಾಗಿರುತ್ತಾರೆ.

ಈ ನಡುವೆ ಒಂದು ಸಂಘಟನೆ ನಡೆಯಿತು. ಒಬ್ಬರು ತಮ್ಮ ಅಂಗಡಿಯ ಪ್ರಾರಂಭೋತ್ಸವಕ್ಕೆ ಕರೆದರು. ನಾಲ್ಕು ದಿನಗಳಿಂದ ವಿಪರೀತವಾದ ಮಳೆ ಬೀಳುತ್ತಿತ್ತು. ಅವರೆಲ್ಲರೂ ಆತಂಕಕ್ಕೆ ಒಳಗಾಗುತ್ತಿದ್ದರು. ಹೀಗೆ ಮಳೆ ಬರುತ್ತಿದ್ದರೆ ಈ ಕಾರ್ಯಕ್ರಮ ಹೇಗೆ ನಡೆಯುತ್ತದೆ? ಎಂದುಕೊಳ್ಳುತ್ತಿದ್ದರು. ನಂತರ ಮಾರನೆಯ ದಿನ ಮಳೆ ಸ್ವಲ್ಪ ಕಡಿಮೆಯಾಯಿತು. ಆ ದಿನ ಪೂರ್ತಿಯಾಗಿ ಕಡಿಮೆಯಾಗಿ ವಿಪರೀತವಾದ ಬಿಸಿಲು ಬಂದಿತು. ಆಗ  ಇವರೆಲ್ಲರೂ ತಮಗೆ ತಾವೇ  ಊಟಮಾಡುವಾಗ, ನಾನು ದೇವರಿಗೆ ಬೇಡಿಕೊಂಡೆನು ಅದಕ್ಕೆ ಬಿಸಿಲು ಬಂದಿದೆ, ಅಂದುಕೊಳ್ಳುತ್ತಿದ್ದರು. ಆ ಮಾತು ಕೇಳಿ ನನಗೆ ನಗು ಬಂದಿತು.

ನಿಜಕ್ಕೂ ಪ್ರಕೃತಿ ಯಾವಾಗಲೂ ಸಹಜವಾಗಿಯೆ ಅದರ ಕೆಲಸ ಅದು ಮಾಡಿಕೊಳ್ಳುತ್ತಾ ಇರುತ್ತದೆ. ಅದಕ್ಕೆ ನಾವು ಬೇಡಿಕೊಂಡಿದ್ದರಿಂದ ನಿಂತು ಹೋಯಿತು ಎಂದರೆ  ನಿಲ್ಲುವುದಿಲ್ಲ ಅದು ನಮ್ಮ ಮೂರ್ಖತ್ವ. ಇವರು ಬೇಡಿಕೊಂಡರೆ ಹೊರತು ಬೇರೆ ಯಾರೂ ಮಳೆ ಬರಬಾರದು ಎಂದುಕೊಂಡಿರಲಿಲ್ಲ ಅಲ್ಲವೇ? ಆದರೂ ಅವರಿಗೆ ಬಿಸಿಲು ಬಂದಿತಲ್ಲ... ಅಂದರೆ ಅಲ್ಲಿಯವರೆಗೂ ಆಲೋಚಿಸುವ ಜ್ಞಾನ ಅಜ್ಞಾನಿಗಳಿಗೆ ಇರುವುದಿಲ್ಲ. ಇದು ನಾವು ಅರ್ಥ ಮಾಡಿಕೊಂಡು ನಗುವುದರ ಹೊರತು ಅವರಿಗೆ ಏನು ಹೇಳಲಾರೆವು.

ಕೆಲವರಾದರೆ ರಾಜ್ಯಲಕ್ಷ್ಮಿ ಅವರು ಹೆಚ್ಚು ಧ್ಯಾನ ಮಾಡುತ್ತಾರಲ್ಲವೇ ಅದಕ್ಕೆ ಅವರು ಓಪನಿಂಗ್ ಮಾಡಿದಾಗ ಜನಗಳಿಗೆ ಕಷ್ಟ ಬರದಂತೆ ಬಿಸಿಲು ಬಂದಿತು ಎಂದುಕೊಂಡರು. ನಾನು ಇದಕ್ಕೆ ಹಿಗ್ಗಲಿಲ್ಲ. ಅವರ ಮಾತಿಗೆ ಸ್ಪಂದಿಸಲಿಲ್ಲ. ನಗುತ್ತಾ ನೋಡುತ್ತಿದ್ದೆನು. ಜನರ ಮನಸ್ಥಿತಿ ಹಾಗೆ ಇರುತ್ತದೆ. ನಾನು ಹೋಗಲಿ ಬಿಡಿ ನೀವು ಕೂಡ ಧ್ಯಾನ ಮಾಡಿ ನೀವು ಎಲ್ಲಿಗೆ ಹೋದರು ಚೆನ್ನಾಗಿರುತ್ತೆ ಅನ್ನಬಹುದಿತ್ತು. ಆದರೆ ನಾನೇನು ಮಾತನಾಡಲಿಲ್ಲ. ಅವರ ಭಾವಗಳಿಗೆ ನಗುತ್ತಾ ಇದ್ದೆನು. ಏಕೆಂದರೆ ಪ್ರಕೃತಿ ಮಾಡಬೇಕಾಗಿರುವುದನ್ನು ಮಾಡುತ್ತಾ ಇರುತ್ತದೆ. ಅದನ್ನು ಅಂಗೀಕರಿಸುವುದೇ ನಮ್ಮ ಕೆಲಸ ಆಗಲೇ ಪ್ರಕೃತಿಯನ್ನು ಗೌರವಿಸಿದಂತೆ ಆಗುತ್ತದೆ.

ಇದು ಹೀಗಿದೆ, ಅದು ಹೀಗಿದೆ ಎಂದುಕೊಳ್ಳದೆ ಇರಬೇಕು. ನಮಗೆ ಆಧ್ಯಾತ್ಮಿಕತೆ ತಿಳಿದಿದೆ ಆದ್ದರಿಂದ ಪ್ರಕೃತಿ ಯಾವಾಗಲೂ ಯಾರನ್ನು ಕಷ್ಟಕ್ಕೆ ಗುರಿಮಾಡುವಷ್ಟು ಕ್ರೂರತ್ವದಿಂದ ಪ್ರವರ್ತಿಸುವುದಿಲ್ಲ ಎಂದು ನಮಗೆ ತಿಳಿದಿದೆ. ಆದರೆ ಇಲ್ಲಿ ಆಧ್ಯಾತ್ಮಿಕ ಪರಿಜ್ಞಾನ ಇರುವವರ ಆಲೋಚನಾ ವಿಧಾನಕ್ಕೆ ಆಧ್ಯಾತ್ಮಿಕ ಪರಿಜ್ಞಾನ ಇಲ್ಲದವರ ಆಲೋಚನಾ ವಿಧಾನಕ್ಕೆ ತುಂಬಾ ವ್ಯತ್ಯಾಸ ಇರುತ್ತದೆ ಎನ್ನುವುದನ್ನು ಗಮನಿಸಬೇಕು.

ಈ ಮಾರ್ಗಕ್ಕೆ ಬಂದ ನಂತರ ನಮ್ಮ ಕೆಲಸ ನಾವು ಮಾಡಬೇಕೇ ಹೊರತು ಪ್ರಕೃತಿಯನ್ನು ಯಾವಾಗಲೂ ವಿಮರ್ಶಿಸಬಾರದು. ಎಂದು ನಾವು ತಿಳಿದುಕೊಳ್ಳುತ್ತೇವೆ. ಆಧ್ಯಾತ್ಮಿಕತೆ ಇರುವವನು ಪ್ರಕೃತಿಯನ್ನು ಗೌರವಿಸುತ್ತಾನೆ. ಇಲ್ಲದಿದ್ದರೆ ಪ್ರಕೃತಿಯನ್ನು ಗೌರವಿಸಲಾರರು. ಇದಕ್ಕೆ ಮತ್ತೊಂದು ಕಾರಣವೇನೆಂದರೆ!

2) ಶರೀರಕ್ಕೆ ಸಂಬಂಧಿಸಿದ ಬಂಧುಗಳಿಂದ, ಆಧ್ಯಾತ್ಮಿಕತೆ ತಿಳಿದರೂ ಅದರಲ್ಲಿ ಇರಲಾರರು. ನಮ್ಮ ಸುತ್ತಲೂ ಇರುವ ಬಂಧುಗಳೆಲ್ಲರೂ ಪ್ರಾಪಂಚಿಕ ಸ್ಥಿತಿಯಲ್ಲಿರುವಾಗ ಆಧ್ಯಾತ್ಮಿಕತೆಯ ಕುರಿತು, ಅಂದರೆ ಈ ಧ್ಯಾನ, ಜ್ಞಾನ ಎನ್ನುವ ಜೀವನದ ಕುರಿತು ಇದರ ವೈಭವದ ಕುರಿತು ತಿಳಿದರೂ ಅವರಿಂದ ನೀವು ಒಮ್ಮೊಮ್ಮೆ ಹಿಂದೆ ಬೀಳುವಿರಿ. ಅಷ್ಟು ಶ್ರದ್ದೆಯಿಂದ ಮಾಡಲಾರಿರಿ. ಒಂದು ಸ್ಥಾಯಿಗೆ ಬರುವವರೆಗೂ ನೀವು ಶ್ರದ್ಧೆಯಿಂದ ಇರಬೇಕು. ಎಲ್ಲಿಯವರೆಗೂ ಎಂದರೆ ಎಷ್ಟು ಜನರಲ್ಲಿದ್ದರೂ ನಿಮ್ಮ ದೃಷ್ಟಿ ಚದುರದಿರುವವರೆಗೂ ನೀವು ಇದನ್ನೇ ಹೆಚ್ಚಾಗಿ ಹಿಡಿದುಕೊಳ್ಳಬೇಕು. ನಿಮ್ಮ ದೃಷ್ಟಿ ಚದುರಿ ಹೋಗುತ್ತಿದೆ ಎಂದರೆ ಅದಕ್ಕೆ ಸಂಘಟನೆಗಳೇ ಕಾರಣವಾಗುತ್ತದೆ.

ಈಗ ಬಂಧುಗಳೆಲ್ಲರೂ ಪ್ರಾಪಂಚಿಕವಾಗಿರುವಾಗ, ನೀವು ಧ್ಯಾನವನ್ನು ಅಸಡ್ಡೆ ಮಾಡುವಿರಿ. ಆದರೆ ಹಾಗೆ ಮಾಡಬಾರದು. ಧ್ಯಾನ ಧ್ಯಾನವೇ ಎಷ್ಟು ಜನರಲ್ಲಿದ್ದರೂ, ಹೇಗೆ ಮಾತನಾಡಿದರೂ, ನಿಮ್ಮ ಕೆಲಸ ಬಂದಾಗ ಮಾಡಿಕೊಳ್ಳುತ್ತಾ ಮುಂದೆ ಸಾಗಿದರೆ ನಿಮ್ಮ ಪುರೋಗಮನ ಇರುತ್ತದೆ. ಆದರೆ ಇನ್ನೂ ಅವರ ಕುರಿತು ಆಲೋಚಿಸಿದಾಗ ಮತ್ತೆ ಹಿಂದಕ್ಕೆ ಹೋಗುವಿರಿ.

ಯಾರೋ ಒಬ್ಬರು ನಮಃ ಶಿವಾಯ ಎನ್ನುವ ಅಕ್ಷರ ಹೇಗೆ ಬಂದಿತು ಎಂದು ನನಗೆ ಪ್ರಶ್ನೆ ಹಾಕಿದರು. ಇಷ್ಟು ನೂರಾರು ಜನರು, ಸಾವಿರಾರು ಜನರು ಇದ್ದಾರೆ. ಆದರೆ ನನಗೆ ಏಕೆ ಪ್ರಶ್ನೆ ಹಾಕಿದರು? ಅಂದರೆ ಅಲ್ಲಿ ಅವರಿಗೆ ತಿಳಿದಿಲ್ಲ, ನಮಗೆ ತಿಳಿದಿದೆ ಎನ್ನುವ ವಿಷಯ ಅವರಿಗೆ ಅರ್ಥವಾಗಿದೆ ಆದ್ದರಿಂದ. ಕೇಳಿದ್ದಾರೆಂದರೆ, ಆಧ್ಯಾತ್ಮಿಕತೆಯಲ್ಲಿ ಇರುವವರು ಎಲ್ಲದಕ್ಕೂ ಉತ್ತರ ಹೇಳಬಲ್ಲರು ಎನ್ನುವ ಅಭಿಪ್ರಾಯ ಅವರಿಗೆ ಇದೆ.

ಅಂದರೆ ಅವರು ಇನ್ನೂ ಅಧ್ಯಾತ್ಮದ ಹಾದಿಗೆ ಬಂದಿಲ್ಲ. ಆದರೆ ನಮ್ಮ ಮೇಲೆ ಒಂದು ಗೌರವವಿದೆ. ನಮ್ಮ ಜೀವನ ನೋಡಿ ಅವರಿಗಿಂತ ಜೀವನದಲ್ಲಿ ಇರುವ ನಾವೇ ಒಂದು ಹಂತ ಮೇಲೆ ಇದ್ದೇವೆ ಎಂದು ಅವರಿಗೆ ಅರ್ಥವಾಗಿದೆ. ಈಗ ಈ ಸ್ಥಾಯಿಗೆ ಬಂದ ನಂತರ ನಾವು ಮೆಟ್ಟಿಲುಗಳನ್ನು ಇಳಿಯುವುದಿಲ್ಲ. ಅವರನ್ನೇ ಮೇಲಿನ ಮೆಟ್ಟಿಲಿಗೆ ಹತ್ತಿಸುತ್ತೇವೆ. ಆ ಸ್ಥಾಯಿಗೆ ಬರುವವರೆಗೂ, ನೀವು ನಿರಂತರ ಶ್ರಮಪಡುತ್ತಾ ಇರಬೇಕು. ಯಾವಾಗಲೂ ಇಟ್ಟ ಹೆಜ್ಜೆ ಹಿಂದಕ್ಕೆ ಇಡಬಾರದು.

ನಿಮ್ಮ ಸುತ್ತಲೂ ಇರುವ ಪರಿಸರಗಳ ಅನುಸಾರ ನೀವು ಬದಲಾಗುವುದಲ್ಲ ನಿಮ್ಮ ಸುತ್ತಲೂ ಇರುವ ಪರಿಸರಗಳನ್ನು ನೀವು ಬದಲಾಯಿಸಬಲ್ಲ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಕೋಟಿ ಲಿಂಗಗಳಲ್ಲಿ ಒಂದು ಲಿಂಗದಂತೆ ಬದುಕುವುದಲ್ಲ... ಕೋಟಿ ಲಿಂಗಗಳಲ್ಲಿಯೂ ನಾವೇ ಪ್ರತ್ಯೇಕ ಲಿಂಗವಾಗಬೇಕು. ಆಗ ನಿಮ್ಮ ಸುತ್ತಲೂ ಇರುವ ಬಂಧುಗಳು ಎಷ್ಟು ಪ್ರಾಪಂಚಿಕವಾಗಿದ್ದರೂ ನೀವು ಮಾತ್ರ ಬದಲಾಗುವುದಿಲ್ಲ.

3) ಹಾಗೆಯೇ ಹುಟ್ಟಿದ ಊರನ್ನು, ನಿಮ್ಮ ಮನೆಯನ್ನು ನಿಮ್ಮ ಪರಿಸರಗಳನ್ನು ಪದೇ ಪದೇ ನೆನಪಿಸಿಕೊಳ್ಳುವುದರಿಂದ ನೀವು ಅಧ್ಯಾತ್ಮಿಕತೆಯ ಮೇಲೆ ದೃಷ್ಟಿ ಇಡಲಾಗದು. ನಮ್ಮ ಊರು ಹೀಗೆ, ನಮ್ಮ ಮನೆಯಲ್ಲಿ ಹೀಗೆ ಇರುತ್ತೇವೆ, ಹಾಗೆ ಇರುತ್ತೇವೆ ಎಂದು ನೆನಪಿಸಿಕೊಳ್ಳುತ್ತಾರೆ. ಕೆಲವರು ಮದುವೆಯಾಗಿ 50 ವರ್ಷವಾದರೂ, 70 ವರ್ಷವಾದರೂ ಇನ್ನೂ ಚಿಕ್ಕಂದಿನಲ್ಲಿ ನಡೆದ ವಿಷಯಗಳನ್ನು, ಆ ಊರಿನ ವಿಷಯಗಳನ್ನು, ಆ ಮನೆಯ ವಿಷಯಗಳನ್ನು ಪದೇಪದೇ ನೆನಪಿಸಿಕೊಳ್ಳುತ್ತಾ ಇರುತ್ತಾರೆ. ಬುದ್ಧ ವರ್ತಮಾನದಲ್ಲಿ ಜೀವಿಸಿ ಎಂದು ಹೇಳಿದ್ದಾನೆ. ಪದೇ ಪದೇ ಗತ ಜೀವನವನ್ನು ನೆನೆಪಿಸಿಕೊಳ್ಳುವುದರಿಂದ ವರ್ತಮಾನದಲ್ಲಿರುವ ಉನ್ನತ ಅವಕಾಶವನ್ನು ನೀವು ಕಳೆದುಕೊಳ್ಳುತ್ತೀರಿ. ಅದಕ್ಕೆ ವರ್ತಮಾನದಲ್ಲಿ ನಾನು ಎಷ್ಟು ಸಾಧನೆ ಮಾಡಬೇಕು? ಎಷ್ಟು ಜ್ಞಾನ ಹೆಚ್ಚಿಸಿಕೊಳ್ಳಬೇಕು? ಎನ್ನುವುದರ ಮೇಲೆ ದೃಷ್ಟಿಯನ್ನು ಇಡಬೇಕು.

ಅಷ್ಟೇ ಹೊರತು ನಡೆದು ಹೋಗಿರುವುದನ್ನು ಸ್ಮರಿಸಿಕೊಳ್ಳುತ್ತಾ, ಹತ್ತು ಜನರನ್ನು ಒಟ್ಟಾಗಿಸಿ ನಿಮ್ಮ ಕಥೆಯನ್ನು ಚರಿತ್ರೆಯಂತೆ ಹೇಳುವುದಲ್ಲ. ವರ್ತಮಾನದಲ್ಲಿ ಈ ಧ್ಯಾನ ಜೀವನ ಎಷ್ಟೋ ಉನ್ನತವಾಗಿದೆ. ನೀವು ಪುರೋಗಮನಕ್ಕೆ ಅವಕಾಶವಿದೆ ಎನ್ನುವುದನ್ನು ಆಲೋಚಿಸಬೇಕು. ಪ್ರಾಪಂಚಿಕ ಜೀವನದಲ್ಲಿ ಹಣ ಸಂಪಾದಿಸಲು ಎಷ್ಟೋ ಅವಕಾಶ ಇರುತ್ತವೆ. ಸಾಯುವವರೆಗೂ ಸಂಪಾದಿಸುತ್ತಿರಿ.

ಹಾಗೆಯೇ ಆಧ್ಯಾತ್ಮಿಕ ಜೀವನದಲ್ಲಿ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಎಷ್ಟೋ ಅವಕಾಶಗಳು ಇವೆ. ಅವು ಸಾಯುವವರೆಗೂ ಇದ್ದೇ ಇರುತ್ತದೆ.

ಇದನ್ನು ಗ್ರಹಿಸಿದ ಜ್ಞಾನಿಗಳು ಗತವನ್ನು ತಿಳಿದುಕೊಳ್ಳದೆ ವರ್ತಮಾನದಲ್ಲಿ ಜ್ಞಾನವನ್ನು ಬೆಳೆಸಿಕೊಳ್ಳಲು ನಿರಂತರ ಪ್ರಯತ್ನಿಸುತ್ತಾರೆ. ಹಳೆಯದನ್ನು ನೆನಪು ಮಾಡಿಕೊಳ್ಳುವುದರಿಂದ ವರ್ತಮಾನದಲ್ಲಿದ್ದು ಧ್ಯಾನ ಮಾಡಲಾರದೆ ಹೋಗುತ್ತಿದ್ದಾರೆ.

4) ಭೌತಿಕ ಶಾಸ್ತ್ರಗಳನ್ನು ಹೆಚ್ಚಾಗಿ ಓದಿ ಅವುಗಳ ಮೇಲೆ ನಂಬಿಕೆ ಹೆಚ್ಚಿಸಿಕೊಳ್ಳುತ್ತಾ, ಆಧ್ಯಾತ್ಮಿಕ ಶಾಸ್ತ್ರದ ಮೌಲ್ಯ ತಿಳಿಯದೆ ಭೌತಿಕ ಶಾಸ್ತ್ರಗಳನ್ನೆ ಪದೇ ಪದೇ ನೆನಪಿಸಿಕೊಳ್ಳುವುದರಿಂದ ಕೂಡ ದೃಷ್ಟಿ ಹರಿಸಲಾರರು. ಭೌತಿಕ ಶಾಸ್ತ್ರಗಳು ಸೃಷ್ಟಿಯಲ್ಲಿ

ಇರುವುದರ ಕುರಿತಾಗಿ ಹೇಳುತ್ತವೆ. ಸೃಷ್ಟಿಕರ್ತನ ಕುರಿತು ಹೇಳುವುದಿಲ್ಲ. ಸೃಷ್ಟಿಕರ್ತನ ಕುರಿತು ನಾನು ಓದಿಲ್ಲವಾದ್ದರಿಂದ ಇಲ್ಲ ಎಂದರೆ ಅದನ್ನು ಧರ್ಮ ಒಪ್ಪಿಕೊಳ್ಳುವುದಿಲ್ಲ. ಅದಕ್ಕೆ ಭೌತಿಕ ಶಾಸ್ತ್ರಗಳು ತುಂಬಾ ಹೆಚ್ಚಾಗಿ ಅಧ್ಯಯನ ಮಾಡಿದವರಿಗೆ ಅದರ ನಂತರ ಈ ಶಾಸ್ತ್ರ ಹೀಗೆ ಬರೆದಿದ್ದಾರೆ ಹೊರತು ಇದಕ್ಕಿಂತ ಅವರ ಮೇದಸ್ಸಿಗೆ ಏನು ಸಿಗುವುದಿಲ್ಲ. ಅದು ಸಿಗದಿರುವಾಗ, ನಾನು ಇಲ್ಲಿಯವರೆಗೆ ಓದಿದ್ದೇನೆ... ಅದೇ ಸರಿ, ದೇವರು ಇಲ್ಲ ಎನ್ನುತ್ತಾರೆ. ನಮಗೆ ಕಾಣಲಿಲ್ಲ ಆದ್ದರಿಂದ ದೇವರು ಇಲ್ಲ ಎಂದರೆ ಅದು ಹೇಗೆ ಸಾಧ್ಯ?

ಗಾಳಿ ಕಾಣುವುದಿಲ್ಲ ಕಾಣದಿರುವುದರಿಂದ ಗಾಳಿ ಇಲ್ಲ ಎಂದು ನೀನು ನಂಬುವೆಯಾ? ಇಲ್ಲವೆಂದು ಅಂದುಕೊಳ್ಳುವೆಯಾ. ನೀನು ಅನುಭೂತಿ ಹೊಂದುತ್ತಿರುವೆಯಲ್ಲ! ಹಾಗೆ ಕಾಣುತ್ತಿಲ್ಲ ಆದ್ದರಿಂದ ಗಾಳಿ ಇಲ್ಲ ಎಂದುಕೊಳ್ಳುವುದು ಮೂರ್ಖತ್ವ. ಕಾಣಿಸುವುದು ನೀನು ಎಷ್ಟೋ ಗ್ರಹಿಸಬಲ್ಲೆ. ಆದರೆ ಕಾಣದಿರುವುದನ್ನು ತಿಳಿದುಕೊಳ್ಳಲು ನಿನ್ನ ಮೇದಸ್ಸನ್ನು ಹೆಚ್ಚಿಸಿಕೊಳ್ಳಬೇಕು. ಆ ಮೇಧಸ್ಸನ್ನು ಹೆಚ್ಚಿಸಿಕೊಳ್ಳುವ ಮಾರ್ಗವೇ, "ಶ್ವಾಸದ ಮೇಲೆ ಗಮನ" ಧ್ಯಾನ.

ಅದಕ್ಕೆ ಭೌತಿಕ ಶಾಸ್ತ್ರಗಳ ಮೇಲೆ ನಂಬಿಕೆ ಇಟ್ಟುಕೊಂಡು ಆಧ್ಯಾತ್ಮಿಕ ಶಾಸ್ತ್ರದ ಮೇಲೆ ವ್ಯತಿರಿಕ್ತ ಭಾವವನ್ನು ವ್ಯಕ್ತಪಡಿಸುವುದು ಸರಿಯಲ್ಲ. ಭೌತಿಕವೆಲ್ಲ ಅಪರಾವಿದ್ಯೆ, ಅಧ್ಯಾತ್ಮಿಕತೆ ಯೆಲ್ಲಾ ಪರಾವಿದ್ಯೆ. ಬೌತಿಕ ಶಾಸ್ತ್ರ 50 % ನಾವು ಕಲಿತುಕೊಂಡು ಹಾಗೆ 50% ಆಧ್ಯಾತ್ಮಿಕ ಶಾಸ್ತ್ರವನ್ನು ಓದಬೇಕು. ಆಧ್ಯಾತ್ಮಿಕ ಶಾಸ್ತ್ರ ಓದದವನಿಗೆ, ಪರಾವಿದ್ಯೆಯನ್ನು ಕಲಿಯದವನಿಗೆ ಪರಮಾತ್ಮನ ಕುರಿತು ಅರ್ಥವಾಗುವುದಿಲ್ಲ.

ಒಂದು ಬೀಜ ಮಹಾವೃಕ್ಷವಾಗಿದೆ ಅಂದರೆ ಭೌತಿಕ ಶಾಸ್ತ್ರ ಓದಿದವನು ಬಿಸಿಲಿನಿಂದ, ನೀರಿನಿಂದ, ಮಣ್ಣಿನಿಂದ ಆಗಿದೆ ಎಂದುಕೊಳ್ಳುತ್ತಾನೆ. ಆದರೆ ಬಿಸಿಲಿಗೆ, ನೀರಿಗೆ, ಭೂಮಿಗೆ ಅವುಗಳ ವಿಧಿಯನ್ನು ನಿರ್ವಹಿಸಲು ಬೇಕಾದ ಶಕ್ತಿ ಆ ಪರಮಾತ್ಮನ ಬಳಿಯಿಂದಲೇ ಬಂದಿದೆ ಎಂದು ಅರ್ಥ ಮಾಡಿಕೊಳ್ಳುವುದೇ ಆಧ್ಯಾತ್ಮಿಕ ಶಾಸ್ತ್ರ.

ಕಾಣಿಸುವ ಅವುಗಳಿಗೆ ಕೂಡಾ ಕಾಣದ ಪರಮಾತ್ಮನು ಶಕ್ತಿಯನ್ನು ನೀಡುತ್ತಿದ್ದಾನೆ ಎಂದು ಯಾರು ತಿಳಿದುಕೊಳ್ಳುವರೋ ಅವರು ಯೋಗಿಗಳಾಗುತ್ತಾರೆ. ಜ್ಞಾನಿಯಾಗಿರುತ್ತಾರೆ. ಬ್ರಹ್ಮನಾಗುತ್ತಾರೆ, ಬ್ರಹ್ಮರ್ಷಿಗಳಾಗುತ್ತಾರೆ. ಆದರೆ ಭೌತಿಕ ಶಾಸ್ತ್ರ ತಿಳಿದವರು ಸಾಧಾರಣ ವ್ಯಕ್ತಿಗಳಾಗಿ ಇರುತ್ತಾರೆ ಹೊರತು, ಯೋಗಿಗಳನ್ನು ಗುರುತಿಸುವ ಬುದ್ಧಿವಂತಿಕೆಯಾಗಲಿ, ಮೇಧಸ್ಸಾಗಲಿ ಅವರಿಗೆ ಇರುವುದಿಲ್ಲ.

ಹಾಗೆ ಶರೀರ ಶಾಶ್ವತ ಅಂದುಕೊಳ್ಳುವುದು, ನಿಮ್ಮ ಸುತ್ತಲೂ ಇರುವ ಅತಿಥಿಗಳು ಬಂಧುಗಳು ಶಾಶ್ವತ ಎಂದುಕೊಳ್ಳುವುದು, ಯಾವಾಗಲೂ ತಮ್ಮ ಗತವನ್ನು ಅಗೆಯುತ್ತಾ

ಇರುವುದು, ಭೌತಿಕಶಾಸ್ತ್ರಗಳೆ ಸರಿ ಎಂದುಕೊಳ್ಳುತ್ತಾ ಅವುಗಳನ್ನೇ ಅಧ್ಯಯನ ಮಾಡಿ ಆಧ್ಯಾತ್ಮಿಕ ಶಾಸ್ತ್ರಗಳನ್ನು ಓದದೆ ನಾನು ನೋಡದಿರುವುದು ಇಲ್ಲ ಎಂದು ತಿಳಿಯುವುದು ಅಜ್ಞಾನ.

ಒಂದು ಅರಳಿ ಮರಕ್ಕೆ ಬಿಳಲುಗಳು ಬಂದರೆ, ಅವು ಕತ್ತರಿಸದಿದ್ದರೆ ಭೂಮಿವರೆಗೂ ಹೋಗಿ ಅವೇ ಬೇರುಗಳಾಗಿ ಬದಲಾಗಿ ಮತ್ತೆ ಇನ್ನೊಂದು ಮರವಾಗುತ್ತದೆ. ಹಾಗಾಗಿ ಅದನ್ನು ಆಗಾಗ ಕಡಿಯುತ್ತಾ ಇದ್ದರೆ ಅದು ಭೂಮಿಯನ್ನು ಮುಟ್ಟುವುದಿಲ್ಲ. ಆ ವಿಧವಾಗಿಯೇ ನಮಗೆ ಇಂತಹ ಅಭಿಪ್ರಾಯಗಳು ಜನ್ಮಜನ್ಮಗಳಿಂದ ವಾಸನೆಗಳಾಗಿ ಬಂದಿರುವುದರಿಂದ ಈ ಪ್ರಾಪಂಚಿಕ ಜೀವನದಲ್ಲಿ ಇದೇ ದೊಡ್ಡದು ಎಂದುಕೊಳ್ಳುತ್ತಾ, ಅಜ್ಞಾನದೊಂದಿಗೆ ಜೀವಿಸುತ್ತಿದ್ದೇವೆ. ಒಂದು ವೇಳೆ ತಿಳಿದರೂ ಮಾಯೆ ಆವರಿಸಿದ ಮಾನವ ಮುಂದೆ ಹೆಜ್ಜೆ ಇಡಲಾರದೆ ಹಿಂದೆಯೇ ಉಳಿಯುತ್ತಾನೆ.

ಮತ್ತೆ ಆ ಬಿಳಲುಗಳು ಕಡಿಯಲು ಒಂದು ಶಸ್ತ್ರ ಒಂದು ಅಸ್ತ್ರ ಇರಬೇಕು. ಹಾಗೆ ಮಾನವನಿಗೆ ಯಾವಾಗಲೋ ಒಂದು ಜನ್ಮದಲ್ಲಿ ವೈರಾಗ್ಯ ಎನ್ನುವುದು ಬಂದೇ ಬರುತ್ತದೆ. ವೈರಾಗ್ಯ ಎನ್ನುವ ಅಸ್ತ್ರದಿಂದಲೇ ಅವರ ಅಭಿಪ್ರಾಯಗಳು ಹೋಗುತ್ತವೆ.

ವೈರಾಗ್ಯ ಎಂದರೆ ತ್ಯಜಿಸುವುದಲ್ಲ. ಪ್ರಾಪಂಚಿಕ ಜೀವನದಲ್ಲಿ ಜೀವಿಸುತ್ತಾ ಮೂಲವೇನು? ಎಂದು ಪ್ರಾಪಂಚಿಕತೆಯನ್ನು ಕಡಿಮೆ ಮಾಡಿಕೊಂಡು ಯಾವಾಗಲೂ ಆಧ್ಯಾತ್ಮಿಕವಾಗಿ ವಿಚಾರಣೆ ಮಾಡುವುದೇ ವೈರಾಗ್ಯ ಎನ್ನುತ್ತಾರೆ. ಅಂದರೆ ಈ ಮನೆ, ಈ ಶರೀರ, ಈ ಬಂಧುಗಳು ಶಾಶ್ವತ ಎಂದು ಎಲ್ಲರಲ್ಲೂ ಕೆಲವು ಅಭಿಪ್ರಾಯಗಳಿವೆ. ಇದಕ್ಕೆಲ್ಲ ಒಂದೇ ಒಂದು ಔಷಧಿ ವೈರಾಗ್ಯ ಎಂದಿದ್ದಾರೆ.

ಅದಕ್ಕೆ ಆಧ್ಯಾತ್ಮಿಕ ಜೀವನದಲ್ಲಿ ನೀವು ಉನ್ನತಿ ಸಾಧಿಸಬೇಕೆಂದರೆ, "ದುರಹಂಕಾರವನ್ನು" ಅಂದರೆ ನಿಮಗೆ ಅಗತ್ಯವಿಲ್ಲದ ಅಹಂಕಾರ ತುಂಬಾ ಹೆಚ್ಚಾಗಿರುತ್ತದೆ. ಅದನ್ನು ಹೋಗಲಾಡಿಸಿಕೊಳ್ಳಬೇಕು. ದುಷ್ಟರೊಂದಿಗೆ ಸಾಂಗತ್ಯ ಬಿಡಬೇಕು. ಅಂದರೆ ಆಧ್ಯಾತ್ಮಿಕತೆಯನ್ನು ಬಿಡುವಂತೆ ಪ್ರಚೋದಿಸುವ ಸ್ನೇಹಿತರನ್ನು ಬಿಡುವುದು ಒಳ್ಳೆಯದು. ಆದರೆ ಆಧ್ಯಾತ್ಮಿಕತೆಯನ್ನು ಬಿಡುವುದು ಒಳ್ಳೆಯದಲ್ಲ. ಮಾಯೆಯನ್ನು ಜಯಿಸಬೇಕು. ಧ್ಯಾನ ಮಾಡಿದರೂ ಇನ್ನೂ ಪ್ರಾಪಂಚಿಕ ಕೋರಿಕೆಗಳು ಇವೆ ಎಂದರೆ ನಿಮಗೆ ನೀವು ಮಾಯೆಗೆ ವಶವಾಗುತ್ತಿದ್ದೀರಿ ಎಂದು ತಿಳಿದುಕೊಳ್ಳಬೇಕು.

ನಿಮಗೆ ಈಗ ಕೆಲವು ಜವಾಬ್ದಾರಿಗಳು ಇದ್ದರೆ, ಜವಾಬ್ದಾರಿ ಮುಗಿದಾಗ ಮೇಲೆ ಮತ್ತೆ ಧ್ಯಾನಕ್ಕೆ ಬರಬೇಕು. ಅಷ್ಟೇ ಹೊರತು ಜವಾಬ್ದಾರಿಗಳಲ್ಲಿ ಇನ್ನೂ ಹೂತು ಹೋಗಿ ಧ್ಯಾನ, ಜ್ಞಾನ ಬಿಟ್ಟರೆ ಇನ್ನೂ ನೂರು ಜನ್ಮಗಳಾದರೂ, ದುಃಖದಲ್ಲಿಯೇ ಇರುತ್ತೀರಿ.

ಎಂದಿಗೂ ಅಮರತ್ವ ಜೀವನಕ್ಕೆ ಹೋಗಲಾರರು. ಅಮರತ್ವ ಹೊಂದಬೇಕು ಎಂದರೆ, ಅದು ಒಂದು ಮಾನವ ಜನ್ಮದಲ್ಲಿಯೇ ಸಾಧ್ಯ.

ಮಾನವ ಜನ್ಮ ತೆಗೆದುಕೊಂಡ ಮೇಲೆ ಆಧ್ಯಾತ್ಮಿಕ ಮಾರ್ಗದಲ್ಲಿ ಇರುವವರೇ ಈ ಅಮರತ್ವ ಹೊಂದಬಲ್ಲರು. ಇಲ್ಲದಿದ್ದರೆ ಹೊಂದಲಾರರು. ಅದಕ್ಕೆ ಸತ್ಯ ತಿಳಿದುಕೊಂಡರು ಧ್ಯಾನದ ಒಂದು ಮೌಲ್ಯವನ್ನು, ಹಿರಿಮೆಯನ್ನು ತಿಳಿದುಕೊಂಡರೂ, ಹಿಂದೆ ಹೋಗಲು ಕಾರಣವೇನು ಎಂದರೆ, ಪ್ರಾಪಂಚಿಕ ಕೋರಿಕೆಗಳೇ.

ಮತ್ತೇ ನೀವೆಲ್ಲರೂ ಆಧ್ಯಾತ್ಮಿಕವಾಗಿ ಉನ್ನತ ಸ್ಥಿತಿಗೆ ಹೋಗಬೇಕು ಎಂದು ಕೋರಿಕೊಳ್ಳುತ್ತಿದ್ದೀರಿ, ಆದರೆ ಪ್ರಾಪಂಚಿಕತೆಯಲ್ಲಿ ಕಷ್ಟ ಬಂದರೂ ಅದು ಹೋಗಬೇಕು ಎಂದುಕೊಳ್ಳುತ್ತಿಲ್ಲ. ಬಾಧೆ ಬಂದರೂ ಹೋಗಬೇಕು ಎಂದುಕೊಳ್ಳುತ್ತಿಲ್ಲ. ನಮಗೆ ಇನ್ನೂ ಏನೋ ಬೇಕು ಎಂದು ಕೂಡಾ ಅಂದುಕೊಳ್ಳುತ್ತಿಲ್ಲವೆಂದರೆ, ಈ ಸ್ಥಿತಿಯಲ್ಲಿ ನೀವು ಸತ್ಯವನ್ನು ಗ್ರಹಿಸಿದ್ದೀರ ಎಂದು ಅರ್ಥ. ಆದ್ದರಿಂದ ಸತ್ಯದಲ್ಲಿ ಜೀವಿಸುತ್ತಾ ಆನಂದವನ್ನು ಹೊಂದುತ್ತಿದ್ದೀರಾ.

ಹಾಗಾಗಿ ನಿಮ್ಮ ಜೀವನದಲ್ಲಿ ದುಃಖ ಶಾಶ್ವತವಾಗಿ ಹೋಗಬೇಕು ಎಂದರೆ, ಆಧ್ಯಾತ್ಮಿಕ ಜೀವನವನ್ನೇ ಜೀವಿಸಬೇಕು. ಎಂದು ನಿಮಗೆ ಅರ್ಥವಾಗುತ್ತದೆ. ಅದಕ್ಕೆ ಅಮರತ್ವ ಜೀವನಕ್ಕೆ ನಿಜವಾದ ಬುನಾದಿ ಆಧ್ಯಾತ್ಮಿಕ ಜೀವನವೇ ಎಂದು ಮಹಾತ್ಮರು ಹೇಳಿದ್ದಾರೆ. ಆದ್ದರಿಂದ ಪ್ರತಿಯೊಂದು ವಿಚಾರಣೆ ಮಾಡುತ್ತಾ ಪ್ರಾಪಂಚಿಕ ಜೀವನದಲ್ಲಿ ಯಾರನ್ನೂ ನೋಯಿಸದೆ, ವಿವೇಕದೊಂದಿಗೆ ಲೌಕಿಕತೆಯಿಂದ ಸಮರ್ಥವಂತವಾಗಿ ಜೀವಿಸುತ್ತಾ ಮುಂದಕ್ಕೆ ಸಾಗಬೇಕು.

ಅದಕ್ಕೆ ಒಬ್ಬ ಜ್ಞಾನಿ ಪ್ರಾಪಂಚಿಕ ಜೀವನದಲ್ಲೂ, ಉನ್ನತವಾಗಿ ಜೀವಿಸುತ್ತಾನೆ ಆಧ್ಯಾತ್ಮಿಕ ಜೀವನದಲ್ಲೂ ಉನ್ನತವಾಗಿ ಜೀವಿಸುತ್ತಾನೆ. ಆಧ್ಯಾತ್ಮಿಕತೆಯಲ್ಲಿ ಜೀವಿಸುತ್ತಿದ್ದೇವೆ ಅಲ್ಲವೇ ಪ್ರಾಪಂಚಿಕತೆ ಬೇಡ ಎನ್ನುವುದು ಅಜ್ಞಾನವೇ... ಹಾಗೆಯೇ ಪ್ರಾಪಂಚಿಕ ಜೀವನ ಜೀವಿಸುತ್ತಿದ್ದೇವೆ ಆಧ್ಯಾತ್ಮಿಕತೆ ನನಗೆ ಬೇಡ ಎಂದುಕೊಳ್ಳುವುದು ಅಜ್ಞಾನವೇ... ಆದ್ದರಿಂದ ಎರಡನ್ನು ಸಮಸ್ಥಿತಿಯಲ್ಲಿ ತೂಗಿಸಿಕೊಂಡು ತುಂಬಾ ಆನಂದಕರವಾದ ಜೀವನವನ್ನು ಜೀವಿಸುವುದೇ ಉನ್ನತವಾದ ಜೀವನ ಅದೇ ಅಮರತ್ವ ಜೀವನ.

*** ***

## ಸತ್ಯಾನುಭೂತಿ ಹೊಂದಲಾಗದಿರುವುದಕ್ಕೆ ಕಾರಣವೇನು!

ಸತ್ಯದರ್ಶನ ಮಾಡುವ ಪ್ರತಿಯೊಬ್ಬರು ಅವರ ಅನುಭೂತಿಗಳನ್ನು ಎಲ್ಲರಿಗೂ ಹಂಚುತ್ತಾ... ಯಾವ ವಿಧವಾಗಿ ನೀವು ಸತ್ಯವನ್ನು ತಿಳಿದುಕೊಳ್ಳಬಹುದು ಎನ್ನುವ ವಿಷಯವನ್ನು ತಿಳಿಸುತ್ತಿದ್ದೀರಿ. ಅದಕ್ಕೆ ಪತ್ರೀಜಿಯವರು ಯಾವಾಗಲೂ ಸ್ವಾಧ್ಯಾಯವನ್ನು ಮಾಡಿ ಸತ್ಯವನ್ನು ಹೇಗೆ ಅನುಭೂತಿ ಹೊಂದಬಹುದು ಎನ್ನುವುದನ್ನು ಹೇಳುತ್ತಿದ್ದರು. ಆ ಸತ್ಯವನ್ನು ಸೇರಿಕೊಳ್ಳುವ ಪ್ರಯತ್ನದಲ್ಲಿರುವ ನೀವು ಹೇಗೆ ಮುಂದೆ ಸಾಗಬೇಕು ಎನ್ನುವುದು ನಿಮಗೆ ತಿಳಿಯುತ್ತದೆ ಎನ್ನುವ ಕಾರಣದಿಂದ ಪತ್ರೀಜಿಯವರು ನಿಮ್ಮಿಂದ ಸಾಧ್ಯಾಯವನ್ನು ಮಾಡಿಸುತ್ತಿದ್ದರು.

ಹಾಗೆ ಆತ್ಮದರ್ಶನ ಮಾಡಿದ ಎಷ್ಟೋ ಜನರ ಅನುಭವಗಳಿಂದ ನೀವು ಎಷ್ಟೋ ವಿಷಯಗಳನ್ನು ತಿಳಿದುಕೊಂಡರೆ, ನಿಮ್ಮ ಪ್ರಯಾಣ ಇನ್ನು ಸುಲಭವಾಗಿರುತ್ತದೆ. ಅದಕ್ಕೆ ನೀವು ಪ್ರತಿಯೊಬ್ಬರ ಕುರಿತು ಅಧ್ಯಯನ ಮಾಡಬೇಕು. ರಮಣ ಭಗವಾನರು ಸತ್ಯದ ಕುರಿತು ಏನು ಹೇಳಿದ್ದಾರೆ ತಿಳಿದುಕೊಳ್ಳೋಣ. ಅವರು ಸತ್ಯವು ಯಾವಾಗಲೂ ಇರುವಂತದ್ದು ಎಂದಿದ್ದಾರೆ.

ಮೊದಲು 'ನಿಜ'ಕ್ಕೆ 'ಸತ್ಯ'ಕ್ಕೆ ಇರುವ ವ್ಯತ್ಯಾಸ ಏನು ಎನ್ನುವುದನ್ನು ನಾವು ತಿಳಿದುಕೊಳ್ಳೋಣ.

'ನಿಜ' ಎಂದರೆ ವರ್ತಮಾನದಲ್ಲಿ ಇರುವುದು. ಕ್ಷಣ ಕಳೆದರೆ ಬದಲಾಗುತ್ತಾ ಇರುತ್ತದೆ. ಆದರೆ ಸತ್ಯ ಎನ್ನುವುದು ಎಲ್ಲಾ ಕಾಲದಲ್ಲೂ ಎಲ್ಲಾ ಯುಗಗಳಲ್ಲಿಯೂ ಬದಲಾಗದಂತೆ ಇರುತ್ತದೆ. 'ಸತ್ಯ' ಎಂದರೆ ಯಾವಾಗಲೂ ಬದಲಾವಣೆಯಾಗದಿರುವುದು. ಈಗ ಇದ್ದು ನಂತರ ಇಲ್ಲದೇ ಇರುವುದಾಗಲಿ, ಈಗ ಹೀಗೆ ಇದ್ದು ನಂತರ ಮತ್ತೊಂದು ವಿಧವಾಗಿ ಇರುವುದಾಗಲಿ ಆಗುವುದಿಲ್ಲ.

ಉದಾಹರಣೆಗೆ ಈಗ ಈ ದಿನ ನೀವು ಒಂದು ಮಾವಿನ ಮರವನ್ನು ನೋಡಿದಾಗ, ಮೊದಲು ಅದಕ್ಕೆ ಒಂದು ಹೂವು ಬಿಡುತ್ತದೆ. ನಂತರ ಕೆಲವು ದಿನಗಳಿಗೆ ಪಿಂದೆಯಾಗಿ, ನಂತರ ಕಾಯಿಯಾಗಿ, ನಂತರ ಹಣ್ಣಾಗಿ ಬದಲಾಗುತ್ತದೆ. ಅದನ್ನು 'ನಿಜ' ಎಂದು ಹೇಳುತ್ತಾರೆ. ಅಂದರೆ ಅದು ಬದಲಾವಣೆಯಾಗಿದೆ ಆದ್ದರಿಂದ ಹಾಗೆ ಹೇಳುತ್ತಾರೆ.

ಅದಕ್ಕೆ ಇಲ್ಲಿ 'ಸತ್ಯ' ಎನ್ನುವುದು ಯಾವತ್ತಿಗೂ ಬದಲಾವಣೆಯಾಗದಿರುವುದು. ಹೀಗೆ ಬದಲಾಗದೆ, ಮರೆಯಾಗದೆ, ಒಂದೊಮ್ಮೆ ಇದ್ದು... ಮತ್ತೊಮ್ಮೆ ಇಲ್ಲದೆ ಇರುವುದು ಯಾವುದು ಇದೆಯೋ ಅದೇ 'ಸತ್ಯ' ಮರೆಯಾಗುವುದು ಯಾವುದೂ ಸತ್ಯವಲ್ಲ ಎಂದು ರಮಣ ಮಹರ್ಷಿ ಹೇಳಿದ್ದಾರೆ.

ಅದಕ್ಕೇ ಪ್ರತಿಯೊಬ್ಬರೂ ಸತ್ಯವನ್ನು ತಿಳಿದುಕೊಳ್ಳಲು ಮಾನವ ಜನ್ಮ ತೆಗೆದುಕೊಳ್ಳುತ್ತಾರೆ. ಮಾನವ ಜನ್ಮದ ಪರಮಾರ್ಥವೇ ಅದು. ಹಾಗಾದರೆ ಸತ್ಯವನ್ನು ತಿಳಿದುಕೊಳ್ಳಲು, ಸತ್ಯದಲ್ಲಿ ಜೀವಿಸಲು ಬಂದ ಮಾನವರು ಏಕೆ ಆ ಸತ್ಯದ ಕಡೆಗೆ ಹೊರಳುತ್ತಿಲ್ಲ? ಸತ್ಯದಲ್ಲಿ ಜೀವಿಸಲಾರದೆ ಹೋಗುತ್ತಿದ್ದಾರೆ? ಎಂದರೆ ರಮಣ ಭಗವಾನ್ ಭೋಗಾಸಕ್ತಿಯಿಂದ ಎಂದಿದ್ದಾರೆ.

ಭೋಗಾಸಕ್ತಿ ಎಂದರೆ ಪ್ರಪಂಚದಲ್ಲಿ ಈ ಬಾಹ್ಯವಾದ ಕಣ್ಣುಗಳೊಂದಿಗೆ ನೋಡುತ್ತಿರುವ ಪ್ರತಿಯೊಂದು ಕೂಡಾ ನಮ್ಮ ಸ್ವಂತವಾದರೆ ಚೆನ್ನಾಗಿತ್ತು ಎನ್ನುವ ಆಸಕ್ತಿ. ಆ ಭೋಗಾಸಕ್ತಿ ಇರುವಷ್ಟು ಕಾಲ ಸತ್ಯವನ್ನು ತಿಳಿದುಕೊಳ್ಳಬೇಕೆಂದು ಅನಿಸುವುದಿಲ್ಲ. ಈಗ ಪ್ರಪಂಚದಲ್ಲಿರುವುದು ಬೇಕೆಂದುಕೊಂಡರೆ ಭೋಗ. ಆದರೆ ಕಣ್ಣು ಮುಚ್ಚಿಕೊಂಡು ನಿಮ್ಮೊಳಗೆ ನೀವು ಅಂತರ್ ಪ್ರಯಾಣ ಮಾಡಿದರೆ ಯೋಗ. ಯಾರಿಗೆ ಈ ಭೋಗಾಕಾಂಕ್ಷೆ ಹೆಚ್ಚಾಗಿ ಇರುವುದೋ, ಅವರು ಸತ್ಯದ ಕುರಿತು ಆಲೋಚಿಸುವುದಿಲ್ಲವಂತೆ.

ಈಗ ಇರುವ ಪ್ರಪಂಚವೆಲ್ಲ ಹೀಗೆಯೆ ಇದೆ. ಹೀಗೆ ಕಾಣಿಸುತ್ತಿದೆ ಪ್ರತಿಯೊಬ್ಬರಿಗೂ ಯಾವಾಗಲೂ ಅನುಭವಿಸೋಣ ಎನ್ನುವುದೇ ಇರುತ್ತದೆ. ಇತರರ ಬಳಿ ಏನಾದರೂ ಇದ್ದರೆ, ನಾವು ನೋಡಿದ ಕೂಡಲೇ ನಮಗೂ ಕೂಡಾ ಇದ್ದರೆ ಚೆನ್ನಾಗಿರುತ್ತದೆ ಎಂದುಕೊಳ್ಳುತ್ತಾರೆ. ಒಬ್ಬೊಬ್ಬರೂ ಅಂದುಕೊಂಡು ಸುಮ್ಮನಾದರೆ, ಕೆಲವರು ಅದರ ಕುರಿತು ಪ್ರಯತ್ನ ಮಾಡುತ್ತಾ ಇರುತ್ತಾರೆ. ಆ ಪ್ರಯತ್ನ ಮಾಡಿದಾಗ ಒಂದೊಂದು ಬಾರಿ ಹೊಂದಬಹುದು ಹೊಂದದೆಯೂ ಇರಬಹುದು. ಹೊಂದಿದಾಗ, ಸಂತೋಷಪಡುತ್ತಾ ಹೊಂದದೆ ಇರುವಾಗ ದುಃಖ ಪಡುತ್ತಾರೆ.

ಹೋಗಲಿ ಆ ಒಂದು ವಸ್ತುವನ್ನು ತಮ್ಮ ಸ್ವಂತ ಮಾಡಿಕೊಂಡು, ಸಂತೋಷದೊಂದಿಗೆ ಸುಮ್ಮನಿರುವರೇ? ಇಲ್ಲ ಆನಂತರ ಇನ್ನೂ ಇನ್ನೂ ಕೋರಿಕೆಗಳನ್ನು ಹೆಚ್ಚಿಸಿಕೊಳ್ಳುತ್ತಾ ಇರುತ್ತಾರೆ. ಹೀಗೆ ಇತರರ ಅನುಭವಗಳನ್ನು ನೋಡುತ್ತಾ ಇತರರ ಸಂಪತ್ತುಗಳನ್ನು ನೋಡುತ್ತಾ, ಅವೆಲ್ಲವೂ ನಮಗೆ ಇರಬೇಕು ಎಂಬ ಆಸೆ, ಆಸಕ್ತಿಯನ್ನು ಹೆಚ್ಚಿಸಿಕೊಳ್ಳುವುದೇ ಭೋಗಾಸಕ್ತಿ.

ಯಾವಾಗ ಅವುಗಳ ಮೇಲೆ ಅಷ್ಟು ತೀವ್ರವಾಗಿ ನಿಮಗೆ ಆಸಕ್ತಿ ಇರುತ್ತದೋ... ನೀವು ಇನ್ನು ಯೋಗಕ್ಕೆ ಹೋಗಲು ಆಸಕ್ತಿ ತೋರಿಸುವುದಿಲ್ಲ. ಈ ಸ್ಥಿತಿಯಲ್ಲಿರುವಾಗ ಯಾವಾಗಲೂ ಅವರಿಗೆ ಈ ಕೋರಿಕೆಗಳೇ ಇರುತ್ತವೆ ಕೆಲವರಿಗೆ ಗುರುಗಳು ಬರುವವರೆಗೂ ಈ ಆಸಕ್ತಿಗಳು ಇದ್ದರೂ, ಎಲ್ಲೋ ಅವರು ಮಾಡಿದ ಸತ್ಕರ್ಮಗಳಿಂದ ಅಥವಾ ಅವರಿಗಿರುವ ಸತ್ವಗುಣಗಳಿಂದ ಗುರುವು ಅವರ ಜೀವನಕ್ಕೆ ಬಂದ ತಕ್ಷಣ, ಸತ್ಯ ತಿಳಿದುಕೊಂಡು ಬದಲಾಗುತ್ತಾರೆ.

ಆದರೆ ತಿಳಿದುಕೊಂಡ ಪ್ರತಿಯೊಬ್ಬರು ಮಾಡಲಾರರು. ಈಗ ಧ್ಯಾನ ಉನ್ನತವಾದದ್ದು ಎಂದು ಎಲ್ಲರೂ ತಿಳಿದುಕೊಳ್ಳುತ್ತಿದ್ದಾರೆ. ಆದರೆ ಆ ಧ್ಯಾನ ಕೂಡ ಸತ್ಯವನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ ಎಂದು ತುಂಬಾ ಕಡಿಮೆ ಮಂದಿಗೆ ಮಾತ್ರ ಅರ್ಥವಾಗುತ್ತದೆ.

ಏಕೆಂದರೆ ಈಗ ಇರುವ ಪರಿಸ್ಥಿತಿಗಳ ಅನುಸಾರ, ತುಂಬಾ ಜನರು ಮಾಸ್ಟರ್ಗಳು ಧ್ಯಾನ ಎಂದರೆ... ಆರೋಗ್ಯಕ್ಕಾಗಿ ಧ್ಯಾನ ಎಂದರೆ ಸಂಕಲ್ಪಗಳನ್ನು ನೆರವೇರಿಸಿಕೊಳ್ಳಲು ಧ್ಯಾನ.... ಸಮಸ್ಯೆಯಿಂದ ಹೊರಬರಲು ಧ್ಯಾನ ಎಂದು ಹೇಳುತ್ತಿದ್ದಾರೆ. ಆದರೆ ಪ್ರಾಪಂಚಿಕವಾಗಿ ಇವೆಲ್ಲವೂ ಒಂದರ ನಂತರ ಒಂದು ಬರುತ್ತಾ ಇರುತ್ತವೆ. ಏಕೆ ಬರುತ್ತಿವೆ? ಅಂದರೆ ಕರ್ಮಗಳಿಂದ ಬರುತ್ತಿವೆ. ಆ ಕರ್ಮಗಳು ಎನ್ನುವುದು ಒಮ್ಮೆಗೆ ಯಾರೂ ತೊಲಗಿಸಲಾರರು.

ಕರ್ಮಗಳೇ ಹೋದರೆ ರೋಗಗಳು, ತೊಂದರೆಗಳು ಎನ್ನುವುದು ಇರುವುದಿಲ್ಲ ಎನ್ನುವ ಸತ್ಯ ತಿಳಿದುಕೊಂಡ ದಿನ, ಆ ಕರ್ಮಗಳನ್ನು ಹೋಗಲಾಡಿಸಿಕೊಳ್ಳುವ ಮಾರ್ಗವು ಧ್ಯಾನ ಒಂದೇ ಎಂದು ಅರ್ಥವಾಗುತ್ತದೆ. ಧ್ಯಾನ ಏಕೆಂದರೆ? ಸತ್ಯಾನ್ವೇಷಣೆಗಾಗಿ. ಸತ್ಯಾನ್ವೇಷಣೆ ಎಂದರೆ ಸತ್ಯವನ್ನು ತಿಳಿದುಕೊಳ್ಳಬೇಕೆನ್ನುವ ಹಂಬಲ, ಅದಕ್ಕಾಗಿ ಧ್ಯಾನ.

ಎಲ್ಲಿಯವರೆಗೂ ಸತ್ಯಾನ್ವೇಷಣೆಯಲ್ಲಿ ಇರುವುದಿಲ್ಲವೋ, ಅಂದರೆ ಸತ್ಯವನ್ನು ತಿಳಿದುಕೊಳ್ಳುವ ಮಾರ್ಗದಲ್ಲಿ ಇರುವುದಿಲ್ಲವೋ.... ಅವರಿಗೆ ಖಂಡಿತ ಪ್ರಾಪಂಚಿಕ ಆಕರ್ಷಣೆ, ಶರೀರವೇ ನಾನು ಎನ್ನುವ ಭಾವನೆ ಹೋಗಿಲ್ಲ ಎಂದು ಅರ್ಥಮಾಡಿಕೊಳ್ಳಬೇಕು. ರಮಣ ಭಗವಾನ್ ಇನ್ನೂ ಏನು ಹೇಳುತ್ತಾರೆ ಎಂದರೆ, ಯಾವಾಗ ಧ್ಯಾನದ ಕುರಿತು ನಿಮಗೆ ಒಬ್ಬ ಗುರು ಬಂದು ಹೇಳುತ್ತಾನೋ, ಆಗ ನೀವು ನಿತ್ಯವೂ ಸತ್ಸಂಗದಲ್ಲಿ ಪಾಲ್ಗೊಳ್ಳಬೇಕು ಎಂದಿದ್ದಾರೆ.

ಸತ್ಸಂಗ ಎಂದರೆ ಜನರ ಸಮೂಹ ಎಂದುಕೊಳ್ಳುತ್ತಾರೆ. ಆದರೆ ಹಾಗಲ್ಲ ಸತ್ಸಂಗ ಎಂದರೆ ಸತ್ಯದೊಂದಿಗೆ ಸಂಗಮಿಸಿರುವುದು. ಸತ್ಯ ಎಂದರೆ ದೇವರು. ನಿಮ್ಮಲ್ಲಿರುವ ಆತ್ಮವೇ ದೈವ ಎಂದು ತಿಳಿದುಕೊಂಡವರು, ಸತ್ಯದಲ್ಲಿ ಇರುತ್ತಾರೆ. ಅಂದರೆ ಎಲ್ಲಾ ಕಾಲದಲ್ಲೂ ಇರುವುದು.... ಆ ದೈವ ನಿಮ್ಮಲ್ಲಿ ಆತ್ಮವಾಗಿದ್ದಾನೆ ಎನ್ನುವುದೇ ಸತ್ಯವಾದ್ದರಿಂದ ಆ ಸತ್ಯದೊಂದಿಗೆ ನಿತ್ಯವೂ ಸಂಗಮಿಸಿದ್ದರೆ, ಅಂದರೆ ಧ್ಯಾನ ಮಾಡಿದರೆ ಆಗ ಸತ್ಯವನ್ನು ತಿಳಿದುಕೊಳ್ಳಬಲ್ಲರು ಎಂದು ಹೇಳಲಾಗಿದೆ.

ಅದಕ್ಕೆ ಧ್ಯಾನ ಎನ್ನುವುದು ಒಂದು ದಿನ ಮಾಡಿ ಮಾಡಿ ಇನ್ನೊಂದು ದಿನ ಮಾಡದೇ ಇರುವುದಲ್ಲ. ನೀವು ಆತ್ಮದ ಕುರಿತು ಅಂದರೆ ಭಗವಂತನ ಕುರಿತು ಎಷ್ಟು ಆಸಕ್ತಿ ತೋರುವಿರೋ ಆ ಭಾವ ಭಗವಂತನಿಗೆ ಅರ್ಥವಾಗಬೇಕು. ನೀವು ಒಂದು ದಿನ

ಮಾಡಿ ಒಂದು ದಿನ ನಿಲ್ಲಿಸುವಿರಿ ಅಂದರೆ ನಿಮಗೆ ಭಗವಂತನ ಮೇಲೆ ಆಸಕ್ತಿ ಇಲ್ಲ ಎಂದು ಅರ್ಥ. ಆಸಕ್ತಿ ಇದ್ದರೆ ನಿಮ್ಮ ಅನ್ವೇಷಣೆ ದಿನ ದಿನವೂ ತೀವ್ರವಾಗಬೇಕು. ಆದರೆ ಬಿಡುವಾದಾಗ ಧ್ಯಾನ ಮಾಡುತ್ತೇನೆ ಬಿಡುವಾಗದಿದ್ದರೆ ಮಾಡುವುದಿಲ್ಲ, ನನಗೆ ಧ್ಯಾನ ಮಾಡಲು ಆಗುತ್ತಿಲ್ಲ ಎಂದು ಕುಳಿತುಕೊಂಡರೆ, ನಿಮಗೆ ಸತ್ಯದರ್ಶನ ಆಗುವುದು ಯಾವಾಗ?

ಅದಕ್ಕೆ ಭಗವಂತನ ಕುರಿತು ಎಷ್ಟು ಅರ್ಥ ಮಾಡಿಕೊಳ್ಳುವಿರೋ, ಅಷ್ಟು ನೀವು ಆ ಅನುಭೂತಿ ಹೊಂದುವಿರಿ. ಇದೇನೋ ಆಕಾರ ರೂಪದಲ್ಲಿ ಕಾಣುವುದಿಲ್ಲ ಎನ್ನುವುದು ಒಂದು ಅನುಭೂತಿ. ಆ ಅನುಭೂತಿ ನೀವು ಹೊಂದಬೇಕು ಎಂದರೆ ಮೊದಲು ಗುರುವಿನ ಮೂಲಕ ಈ ಮಾತುಗಳು ಕೇಳಬೇಕು. ಅದೇನು ಎಂದರೆ? ಹೂಗಳಿಗೆ ಸುಗಂಧವು ಎಷ್ಟು ಸ್ವಯಂ ಸಿದ್ಧವಾಗಿರುವುದೋ ಹಾಗೆ ಪ್ರತಿ ಜೀವಿಯಲ್ಲಿ ಆತ್ಮ ಎನ್ನುವ ಭಗವಂತನು ಸ್ವಯಂ ಸಿದ್ಧನಾಗಿದ್ದಾನೆ. ಅಂದರೆ ಹೂಗಳಿಗೆ ಸುಗಂಧ ಸಹಜ ಗುಣ, ಹಾಗೆ ಜೀವಿಗಳಲ್ಲಿ ಪರಮಾತ್ಮ ಇರುವುದೇ ಸಹಜ ಗುಣ.

ಭಗವಂತನು ಇಲ್ಲದ ಜೀವಿಗಳು ಇಲ್ಲ ಭಗವಂತನು ಇಲ್ಲದ ಸೃಷ್ಟಿ ಇಲ್ಲ ಎಂದು ನಿಮಗೆ ಎಷ್ಟು ತಿಳಿಯುವುದೋ ಅಷ್ಟು ನಿಮಗೆ ಸತ್ಯದ ಮೇಲೆ ಆಸಕ್ತಿ, ಭಗವಂತನ ಮೇಲೆ ಆಸಕ್ತಿ ಹೆಚ್ಚುತ್ತದೆ. ಎಂದು ರಮಣ ಭಗವಾನರು ಹೇಳುತ್ತಾರೆ. ಈ ಸೃಷ್ಟಿಯೆಲ್ಲವೂ ಪರಮಾತ್ಮ ಎನ್ನುವ ಭಾವದೊಂದಿಗೆ ಇರುವಾಗ ನಿಮ್ಮಲ್ಲಿ ಅಹಂಕಾರ ಮಮಕಾರ ಎರಡೂ ಹೋಗುತ್ತದೆ.

ಏಕೆಂದರೆ ನನ್ನದು ನನ್ನದು ಎಂದುಕೊಂಡಾಗ ಅಹಂಕಾರ ಹೆಚ್ಚುತ್ತಾ ಇರುತ್ತದೆ. ನನ್ನವರು ಎಂದುಕೊಂಡಾಗ ಮಮಕಾರ ಹೆಚ್ಚುತ್ತಾ ಇರುತ್ತದೆ. ಅವರು ಯಾವಾಗಲೂ ಶರೀರ ದೃಷ್ಟಿಯಲ್ಲಿ, ಪ್ರಪಂಚದ ದೃಷ್ಟಿಯಲ್ಲಿ ಇರುತ್ತಾರೆ.

ಈ ಅಹಂಕಾರ, ಮಮಕಾರವೆರಡೂ ಬಿಡಬೇಕು. ಅಂದರೆ ಇದೆಲ್ಲವೂ ಭಗವಂತನದೇ, ಭಗವಂತ ಇರದಿರುವುದು, ಭಗವಂತ ಅಲ್ಲದೇ ಇರುವುದು ಯಾವುದೂ ಇಲ್ಲ... ಎನ್ನುವ ನಿರಂತರವಾದ ಅರಿವು ನಿಮಗೆ ಇರಬೇಕು. ಈ ಸೃಷ್ಟಿಯಲ್ಲಿರುವ ಭಗವಂತನು ಅಣು ಮಾತ್ರವಾಗಿ ಆತ್ಮವಾಗಿ ನನ್ನಲ್ಲಿ ಇದ್ದಾನೆ. ಆ ಅನುಭೂತಿ ಹೊಂದುವ ಮಾರ್ಗವೇ ಅಂತರ್ ಪ್ರಯಾಣ ಎಂದು ನೀವು ಎಲ್ಲಿಯವರೆಗೂ ತಿಳಿದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೂ ಈ ತೊಂದರೆಗಳು, ಕಷ್ಟಗಳು, ಕಣ್ಣೀರು ತಪ್ಪುವುದಿಲ್ಲ. ಅವು ನಿಮ್ಮ ಹಿಂದೆಯೇ ಬರುತ್ತದೆ.

ಅಂದರೆ ಇಲ್ಲಿ ಭಗವಂತನು ಕೂಡ ಮಾನವ ಜನ್ಮವನ್ನು ಸೃಷ್ಟಿಸಿ, ಭಗವಂತನನ್ನು ತಿಳಿದುಕೊಳ್ಳುವ ಅರ್ಹತೆಯನ್ನು ಒಂದು ಮಾನವ ಜನ್ಮಕ್ಕೆ ಮಾತ್ರ ಕೊಟ್ಟಿದ್ದಾನೆ.

ಎಲ್ಲಿಯವರೆಗೂ ಆ ಪರಮಾತ್ಮನನ್ನು ತಿಳಿದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೂ, ಕರ್ಮಗಳ ವಲಯದಲ್ಲಿ ಸಿಲುಕಿಕೊಳ್ಳುತ್ತಾರೆ. ಕರ್ಮಗಳು ಎಲ್ಲಿಯವರೆಗೂ ಇವೆಯೋ ನಿಮಗೆ ನೀವೇ ತಿಳಿದುಕೊಳ್ಳಬಹುದು.

ನಿಮ್ಮ ಜೀವನದಲ್ಲಿ ಎದುರಾಗುವ ತೊಂದರೆಗಳಿಗೆ, ರೋಗಗಳಿಗೆ, ಕಷ್ಟಗಳಿಗೆ ಕಾರಣ ನಿಮ್ಮ ಕರ್ಮಗಳೇ ಎಂದು ಕರ್ಮ ಸಿದ್ಧಾಂತದ ಮೂಲಕ ತಿಳಿಸಿದ ಭಗವಂತನು ಆ ಕರ್ಮಗಳನ್ನು ಹೋಗಲಾಡಿಸಿಕೊಳ್ಳುವ ಮಾರ್ಗವನ್ನು ಕೂಡಾ ಗುರುವಿನ ಮೂಲಕ ನಿಮಗೆ ತಿಳಿಸಿದ್ದಾನೆ. ಧ್ಯಾನದ ಮೂಲಕ ಒಳಗಿರುವ ಆತ್ಮ ಎನ್ನುವ ಭಗವಂತನನ್ನು ದರ್ಶಿಸುವವರೆಗೂ, ನಿಮಗೆ ಕರ್ಮಗಳು ಇರುತ್ತವೆ. ಆ ಆತ್ಮ ಎನ್ನುವ ಭಗವಂತನನ್ನು ಯಾವಾಗ ದರ್ಶಿಸುತ್ತಿರೋ, ಆಗ ಕರ್ಮಗಳೆಲ್ಲವೂ ಭಸ್ಮವಾಗುತ್ತದೆ. ಅಂದರೆ ಭಗವಂತನೂ ಅಣು ಅಣುವಿನಲ್ಲಿ ಇದ್ದಾನೆ ಎಂದು ಹೇಳುತ್ತಿದ್ದೇವೆಯೇ ಹೊರತು ಅನುಭೂತಿ ಹೊಂದುತ್ತಿಲ್ಲ. ಅಂದರೆ ಆ ಅರಿವನ್ನು ಕಳೆದುಕೊಂಡು ಪ್ರವರ್ತಿಸುತ್ತಿದ್ದಾರೆ.

ನಾನು ಭಗವಂತನಿಂದ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ ಹೊರತು ಹಾಗೆ ಸಹಜವಾಗಿ ಜೀವಿಸುತ್ತಿಲ್ಲ. ಸಹಜವಾಗಿ ಜೀವಿಸುವುದು ಎಂದರೆ ಯಾವಾಗಲೂ ನಾನು ಎನ್ನುವ ಪದ ದೇಹಕ್ಕೆ ಉಪಯೋಗಿಸದಂತೆ, ನನ್ನಲ್ಲಿರುವ ಪರಮಾತ್ಮನೇ ಮಾಡಿಸುತ್ತಿದ್ದಾನೆ, ಈ ಶರೀರ ಎನ್ನುವ ಸಾಧನೆಯೊಂದಿಗೆ ಈ ಕೆಲಸಗಳನ್ನು ನಡೆಸುತ್ತಿದ್ದಾನೆ ಹೊರತು ಈ ಶರೀರವೆಂಬ ಸಾಧನವು ಏನು ಮಾಡುವುದಿಲ್ಲ. ಇದರಲ್ಲಿರುವ ಆತ್ಮ ಎನ್ನುವ ಸತ್ಯ ಹೊರಟು ಹೋದ ದಿನ ಆ ಶರೀರ ಏನು ಮಾಡುವುದಿಲ್ಲ ಎಂದು ನೀವು ವಿವೇಕದಿಂದ ತಿಳಿದುಕೊಳ್ಳಬೇಕು.

ತಿಳಿದುಕೊಳ್ಳುತ್ತಿದ್ದೀರಾ... ಆದರೆ ಆಚರಣೆಯಲ್ಲಿ ಬರುವ ಹೊತ್ತಿಗೆ, ಆ ಅರಿವನ್ನು ಕಳೆದುಕೊಳ್ಳುತ್ತಿದ್ದೀರಾ. ನಿರಂತರ ಅರಿವಿನಿಂದ ಜೀವಿಸಿದಾಗಲೇ, ನೀವು ಸತ್ಯದಲ್ಲಿ ಜೀವಿಸಿದಂತೆ ಎಂದಿದ್ದಾರೆ. ನಿರಂತರ ಅರಿವು ಎಂದರೆ ನೀವು ಯಾವ ಕೆಲಸವಾದರೂ ಮಾಡುತ್ತಿದ್ದೀರಾ ಎಂದರೆ, ನಿಮ್ಮ ಆತ್ಮದಿಂದಲೇ ಎನ್ನುವ ಅರಿವು ಇರಬೇಕು. ಆನಂತರ ಈ ಶರೀರ ಒಂದು ಕೆಲಸ ಮಾಡುವ 'ಸಾಧನ' ಹೊರತು ಆತ್ಮ ನಾನಾಗಿ ಇದ್ದೇನೆ ಎನ್ನುತ್ತೀರಿ. ಅಂದರೆ ನಿಮ್ಮ ಸಾಧನೆ ಹೆಚ್ಚುತ್ತಾ ಹೋದಂತೆ... ಜ್ಞಾನ ಹೆಚ್ಚುತ್ತಾ ಹೋದಂತೆ... ಈ ಅನುಭೂತಿಯನ್ನು ಹೊಂದುವಿರಿ.

ಆದರೆ ನೀವು ಎಷ್ಟು ಪ್ರಯತ್ನಿಸಿದರು ಬಾಹ್ಯ ಪ್ರಪಂಚದಲ್ಲಿ ಸತ್ ಪ್ರವರ್ತನೆ ಇಲ್ಲದಿದ್ದರೆ, ಆತ್ಮಾನಭೂತಿ ಹೊಂದಲಾರಿರಿ ಎಂದು ರಮಣ ಭಗವಾನ್ ಹೇಳಿದ್ದಾರೆ. ಅಂದರೆ ಈ ಸತ್ಪ್ರವರ್ತನೆ ಇರುವವನೇ ಸತ್ಯವನ್ನು ಶೋಧಿಸಬಲ್ಲನು, ಸಾಧಿಸಬಲ್ಲನು, ಅನುಭೂತಿ ಹೊಂದಬಲ್ಲನು. ಈಗ ಒಂದು ಮನುಷ್ಯನಿಗೆ ಸತ್ ಪ್ರವರ್ತನೆ ಇಲ್ಲದಿರಲು ಕಾರಣ ಮನಸೇ..

ಮನಸ್ಸು ಏನು ಮಾಡುತ್ತದೆ ಎಂದರೆ, ನೀವು ಆತ್ಮ ಮಾರ್ಗದಲ್ಲಿ ಇದ್ದರೂ ಸರಿ ಬಾಹ್ಯವಾಗಿ ತಿರುಗಾಡಿದರೂ ಸರಿ ಮನಸ್ಸು ಎಲ್ಲದನ್ನು ಕೂಡ ಸ್ವಾರ್ಥಪೂರಿತಗೊಳಿಸುತ್ತದೆ. ಕೋರಿಕೆಗಳನ್ನು ಹೆಚ್ಚಿಸುತ್ತದೆ. ನಿಮಗೆ ಸತ್ಯದ ಕುರಿತು ಅವಗತವಾಗದೇ ಇರುವಷ್ಟು ಕಾಲ ನಿಮ್ಮ ಕೋರಿಕೆಗಳನ್ನು ಹೆಚ್ಚಿಸಿಕೊಳ್ಳಬಹುದು.

ಆದರೆ ಸತ್ಯದ ಕುರಿತು ತಿಳಿದುಕೊಳ್ಳುವ ಈ ಮಾರ್ಗದಲ್ಲಿರುವಾಗ ಗುರು ಹೇಳಿದ ಬೋಧೆಯಿಂದ ನಿಮಗೆ ಅರ್ಥವಾಗಬೇಕು.

ಅದೇನೆಂದರೆ, ಈ ಸೃಷ್ಟಿಯಲ್ಲಿ ಪ್ರತಿಯೊಂದು ನಡೆಸಲ್ಪಡುತ್ತಿದೆ. ಆದರೆ ನಾನೇನು ಮಾಡುತ್ತಿಲ್ಲ. ಆದರೆ ನಾನು ಮಾಡುತ್ತಿದ್ದೇನೆ ಎನ್ನುವ ಅಹಂಕಾರ, ಇದು ನನ್ನದು ಎನ್ನುವ ಅಹಂಕಾರ ಇರುತ್ತದೆ. ಈ ಎರಡು ನಿಮಗೆ ಸ್ವಲ್ಪ ಇದ್ದರೂ... ಇನ್ನೂ ಹೇಳಬೇಕೆಂದರೆ ಮರಳಿನ ಕಣದಷ್ಟು ಇದ್ದರೂ, ಆತ್ಮ ದರ್ಶನ ಹೊಂದಲಾರಿರಿ.

ನೀವು ಮೊದಲು ಇದೆಲ್ಲ ಏನೂ ಇಲ್ಲ ಎಂದುಕೊಳ್ಳುವಿರಿ. ತಿಳಿದುಕೊಂಡ ನಂತರ ನಿಜವೇ ಅಲ್ಲವೇ! ನನ್ನಲ್ಲಿ ಇಷ್ಟು ಅಹಂಕಾರ ಇರಬಹುದು, ಇಷ್ಟು ಮಮಕಾರ ಇರಬಹುದು... ಅದಕ್ಕೆ ನಾನು ಸತ್ಯಾನುಭೂತಿಯನ್ನು ಹೊಂದಲಾಗುತ್ತಿಲ್ಲ ಎಂದುಕೊಳ್ಳುವಿರಿ.

ಅಲ್ಲಿ ಸತ್ಪ್ರವರ್ತನೆ ಎನ್ನುವ ಒಂದು ಮಾತು ಬಳಸಿದ್ದಾರೆ. ಸತ್ ಎಂದರೆ 'ಭಗವಂತ'. ಸತ್ಪ್ರವರ್ತನೆ ಎಂದರೆ ಭಗವಂತನಿಗೆ ಇಷ್ಟವಾಗುವ ಪ್ರವರ್ತನೆ. ಆದರೆ ಭಗವಂತನಿಗೆ ಇಷ್ಟವಿಲ್ಲದ ವರ್ತನೆ ನಿಮ್ಮಲ್ಲಿ ಇದೆ ಎಂದರೆ ನೀವು ಇನ್ನೂ ಮನೋ ಸ್ಥಿತಿಯಲ್ಲಿ ಇರುವಿರಿ ಎಂದರ್ಥ. ಭಗವಂತನಿಗೆ ಇಷ್ಟವಾಗುವ ವರ್ತನೆ ನಿಮ್ಮಲ್ಲಿ ಇದೆಯೆಂದರೆ ನೀವು ಸತ್ಪ್ರವರ್ತನೆಗೆ ಬಂದಂತೆ.

ದೇವರ ದರ್ಶನ ಆಗುತ್ತಿಲ್ಲ ಎಂದರೆ, ಇನ್ನೂ ನೀವು ಸತ್ಪ್ರವರ್ತನೆಗೆ ಬಂದಿಲ್ಲ ಆದರೆ ಬಂದಿದ್ದೇನೇ ಎನ್ನುವ ತಪ್ಪು ತಿಳುವಳಿಕೆಯಲ್ಲಿಯೇ ಇದ್ದೀರಾ, ಇದನ್ನು ನೀವು ಅರ್ಥಮಾಡಿಕೊಳ್ಳಬೇಕು. ಹಾಗಾದರೆ ನಾನು ಇನ್ನೇನು ಬದಲಾಯಿಸಿಕೊಳ್ಳಬೇಕು? ಎಂದರೆ ನಿಮ್ಮ ಮಾತನ್ನು ಬದಲಾಯಿಸಿಕೊಳ್ಳಬೇಕೇ? ಕೇಳುವ ರೀತಿಯನ್ನು ಬದಲಾಯಿಸಿಕೊಳ್ಳಬೇಕೇ? ನನ್ನ ನೋಟದಲ್ಲಿ ವ್ಯತ್ಯಾಸವಿದೆಯೇ? ನನ್ನ ಭಾವಗಳಲ್ಲಿ ವ್ಯತ್ಯಾಸ ಇದೆಯೇ ? ನಾನು ಇನ್ನೂ ಸ್ವಾರ್ಥಬುದ್ಧಿಯೊಂದಿಗೆ ಪ್ರಯತ್ನಿಸುತ್ತಿದ್ದೇನೆಯೇ? ಹೀಗೆ ವಿಧ ವಿಧವಾಗಿ ನೀವು ವಿಚಾರಣೆ ಮಾಡಿಕೊಳ್ಳಬೇಕು.

ನಿಮ್ಮ ಪಂಚೇಂದ್ರಿಯಗಳು ಹೇಗೆ ಕೆಲಸ ಮಾಡುತ್ತೇವೆ ಎಂದು ನಿತ್ಯವೂ ನೀವು ವಿಚಾರಣೆ ಮಾಡಲೇಬೇಕು. ಅದಕ್ಕೆ ಆತ ವಿಚಾರಣೆ ವಿಚಾರಣೆ ಎನ್ನುವ ಪದವನ್ನು ಹೆಚ್ಚಾಗಿ ಬಳಸುತ್ತಾರೆ. ಅದಕ್ಕೆ ವಸಿಷ್ಠರು ವಿಚಾರಣೆಯೇ ಪರಮ ಜ್ಞಾನ ಎಂದು ಕೂಡ

ಹೇಳಿದಿದ್ದಾಗಿದೆ. ಸತ್ಪ್ರವರ್ತನೆ ಇದ್ದರೇನೇ ಸತ್ಯವನ್ನು ಅರ್ಥಮಾಡಿಕೊಳ್ಳಬಲ್ಲರು. ಸತ್ಯವನ್ನು ಹೊಂದಬಲ್ಲರು ಅನುಭೂತಿ ಅದರ ಮಾರ್ಗವೇ ಸತ್ಸಾಂಗತ್ಯ.

ಸತ್ಯಾನುಭೂತಿ ಆಗಬೇಕು ಎಂದರೆ, ಆತ್ಮದರ್ಶನವಾಗಬೇಕು ಎಂದರೆ ಪ್ರತಿನಿತ್ಯ ಸತ್ಸಂಗ ಮಾಡಬೇಕು. ಅಂದರೆ ಪ್ರತಿನಿತ್ಯ ಧ್ಯಾನ ಮಾಡಬೇಕು. ಎರಡನೆಯದು ನೀವು ಮಾಡುವ ಧ್ಯಾನ ಚೆನ್ನಾಗಿ ಆಗಬೇಕೆಂದರೆ, ಸತ್ಪ್ರವರ್ತನೆ ಇರಬೇಕು.

ನೀವು 'ಸತ್' ನೊಂದಿಗೆ ಸಂಗಮಿಸಿ ಇರಬೇಕೆಂದರೆ ಮಧ್ಯೆ ಈ ಆಲೋಚನೆಗಳು, ಕೋರಿಕೆಗಳು ಇವೆಲ್ಲ ಬರುತ್ತಿರುತ್ತವೆ. ಈ ಆಲೋಚನೆಗಳು ಏಕೆ ಬರುತ್ತಿವೆ? ಎಂದರೆ ಮನಸ್ಸು ಹೊರಗೆ ತಿರುಗಾಡಿ ಬಂದು ಎಲ್ಲವನ್ನು ಆಲೋಚನಾ ರೂಪದಲ್ಲಿ ನಿಮ್ಮ ಚಿತ್ತದಲ್ಲಿ ನಿಕ್ಷಿಪ್ತಗೊಳಿಸುತ್ತದೆ. ನನಗೆ ಈ ಆಲೋಚನೆ ಬೇಡ ಎಂದುಕೊಂಡರೆ, ಅದು ನಿಮಗೆ ಮತ್ತೆ ನೆನಪಿಗೆ ಬರುವುದಿಲ್ಲ. ಬೇಕು ಚೆನ್ನಾಗಿದೆ ಎಂದುಕೊಂಡರೆ ಮನಸ್ಸಿನಲ್ಲಿ ನಿಕ್ಷಿಪ್ತವಾಗುತ್ತದೆ. ಆದರೆ ಅದು ನಿಮಗೆ ಅನಗತ್ಯ ಅನವಶ್ಯಕ.

ಈಗ ನೀವು ರೈಲ್ವೆ ಸ್ಟೇಷನ್‌ಗೆ ಹೋಗುವಿರಿ, ಎಷ್ಟೋ ಜನರನ್ನು ನೋಡುವಿರಿ. ಅಲ್ಲಿಗೆ ತುಂಬಾ ಜನರು ಬರ್ತಾ ಇರ್ತಾರೆ, ಹೋಗುತ್ತಾ ಇರುತ್ತಾರೆ. ಟ್ರೈನ್ ಹತ್ತುತ್ತಾರೆ ಇಳಿಯುತ್ತಾರೆ. ಅವರು ಯಾರು ನಿಮಗೆ ನೆನಪಿನಲ್ಲಿ ಇರುವುದಿಲ್ಲ. ಆದರೆ ನಮ್ಮ ಬಳಿ ಕುಳಿತು ನಮ್ಮೊಂದಿಗೆ ಮಾತನಾಡಿ ಅವರ ಕುರಿತು ನಮಗೆ ಹೇಳಿ ನಮ್ಮ ಕುರಿತು ಅವರು ತಿಳಿದುಕೊಂಡರೆ, ಹೀಗೆ ಪರಿಚಯವಾದಾಗ ಆ ದಿನ ಸಾಯಂಕಾಲ ನೀವು ಧ್ಯಾನದಲ್ಲಿ ಕುಳಿತರೆ ಅವರು, ಅವರ ಮಾತುಗಳು ನೆನಪಿಗೆ ಬರುತ್ತವೆ. ಏಕೆ ಬರುತ್ತಿದೆ? ಎಂದರೆ ಅದು ನೀವು ನಿಮ್ಮೊಳಗೆ ಸ್ವೀಕರಿಸಿದ್ದೀರಾ ಅದರಿಂದ.

ಅಲ್ಲಿ ಸುತ್ತಲೂ ಇದ್ದ ಜನರನ್ನು ನೀವು ಸ್ವೀಕರಿಸಲಿಲ್ಲ. ಅದಕ್ಕೆ ಅವರು ನೆನಪಿಗೆ ಬರುತ್ತಿಲ್ಲ. ಕೆಲವು ಬಾರಿ ಆ ಮುಖಗಳು ಕೂಡ ನೆನಪಿಗೆ ಬಾರದು. ಅಂದರೆ ಏನಾದರೂ ಸ್ವೀಕರಿಸಿದರೆ ಚಿತ್ತದಲ್ಲಿ ಚಿಂತನೆಯಾಗಿ ಉಳಿಯುತ್ತದೆ. ಅದೇ ನೀವು ಸ್ವೀಕರಿಸದಿದ್ದರೆ ಚಿತ್ತದಲ್ಲಿ ಸೇರಿ ನಿಮಗೆ ಕಿರಿಕಿರಿ ಮಾಡುವುದಿಲ್ಲ. ಆ ಸ್ವೀಕರಿಸುವ ಗುಣ ಇದ್ದರೆ ಅಂದರೆ ನೋಡಿದ ಪ್ರತಿಯೊಬ್ಬರನ್ನು ಒಳಗೆ ಹಾಕಿಕೊಳ್ಳುವ ಗುಣ ಇದ್ದರೆ, ನೀವು ಸತ್ಯಕ್ಕೆ ದೂರವಾಗುವಿರಿ. ಅದಕ್ಕೆ ಸತ್ಪ್ರವರ್ತನೆ ಇರಬೇಕು. ಅಂದರೆ ನೀವು ಯಾವುದಾದರೂ ಉಪಯೋಗವಾಗುವ ಮಾತುಗಳನ್ನು ಇನ್ನೊಬ್ಬರಲ್ಲಿ ಹೇಳಿದಾಗ, ಹೇಳಿದ್ದೇನೆ ಎನ್ನುವ ಒಂದು ತೃಪ್ತಿ ನಿಮಗೆ ಇರುವಾಗ... ಅದು ನಿಮಗೆ ಕಿರಿಕಿರಿಯಾಗುವುದಿಲ್ಲ. ಅದೇ ಅವರ ಕಷ್ಟಗಳು ಅವರ ವಿಷಯಗಳನ್ನು ನಿಮ್ಮೊಳಗೆ ಹಾಕಿಕೊಂಡರೆ ಮತ್ತೆ ಕಿರಿಕಿರಿ ಆಗುತ್ತದೆ.

ಅದಕ್ಕೆ ಸತ್ಯವನ್ನು ಅರ್ಥ ಮಾಡಿಕೊಂಡವನು, ಸತ್ಪ್ರರ್ತನೆಯಲ್ಲಿ ಇರುವವನು ಯಾವ ನೆನಪುಗಗಳನ್ನು ಮನಸ್ಸಿನಲ್ಲಿ ಸಂಗ್ರಹಿಸಿಕೊಳ್ಳುವುದಿಲ್ಲ. ನೀವು ಯಾರನ್ನಾದರೂ

ಬೈದರೂ, ಯಾರಾದರೂ ನಿಮ್ಮನ್ನು ಬೈದರೂ, ಅವರು ನಿಮಗೆ ಧ್ಯಾನದಲ್ಲಿ ನೆನಪಿಗೆ ಬರುತ್ತಾರೆ

ಅದೇ ನೀವು ಯಾರಿಗಾದರೂ ಏನಾದರೂ ಸಹಾಯ ಮಾಡಿದರೆ, ಅಥವಾ ಯಾರಿಗಾದರೂ ಧ್ಯಾನವನ್ನು ಕಲಿಸಿದರೂ, ಎಲ್ಲಿಯಾದರೂ ಕ್ಲಾಸ್ ಹೇಳಿದರೂ, ಮಾಂಸವನ್ನು ಬಿಡಬೇಕು ಎಂದು ಹೇಳಿದರೂ ಇಂತಹವೆಲ್ಲ ಮಾಡಿ ಮನೆಗೆ ಬಂದು ಧ್ಯಾನದಲ್ಲಿ ಕುಳಿತುಕೊಂಡರೆ ಅಲ್ಲಿ ನೂರು ಜನ ನೆನಪಿರಲಿ ಬರುವುದಿಲ್ಲ. ಅವರೆಲ್ಲರಿಗೂ ನೀನು ಒಳಿತು ಮಾಡಿ ಬಂದಿರುವೆ. ಗಮನಿಸಿ, ಏಕೆ ನೆನಪಿರುವುದಿಲ್ಲ? ಅವರೆಲ್ಲರಿಗೆ ನೀನು ಆತ್ಮ ಸ್ಥಿತಿಯಲ್ಲಿರುವವನಿಗೆ ಯಾವಾಗಲೂ ವರ್ತಮಾನವೇ, ಗತವೂ ಇಲ್ಲ ಭವಿಷ್ಯತ್ತು ಇರುವುದಿಲ್ಲ.

ಆದರೆ ಮನೋ ಸ್ಥಿತಿಯಲ್ಲಿ ಇರುವವನಿಗೆ ಗತವೂ ಇದೆ, ಭವಿಷ್ಯತ್ತು ಇದೆ. ಆದರೆ ವರ್ತಮಾನದಿಂದ ಹೋಗಿ ಹಿಂದಿನದನ್ನು ನೆನಪು ಮಾಡಿಕೊಳ್ಳುತ್ತಾ ಇರುತ್ತಾರೆ. ಭವಿಷ್ಯತ್ತಿನಲ್ಲಿ ಏನಾಗುವುದೋ ಎಂದು ಭಯಪಡುತ್ತಾರೆ.

ಅದಕ್ಕೆ ನೀವು ಕ್ಲಾಸ್‌ಗೆ ಹೋದಾಗ ಹೇಳಿದ ಸಬ್ಜೆಕ್ಟ್ ಆಗಲಿ ಅಲ್ಲಿರುವ ಜನಗಳ ಮುಖಗಳಾಗಲಿ ಅವರಿಗೆ ಧ್ಯಾನದಲ್ಲಿ ನೆನಪಿಗೆ ಬರುವುದಿಲ್ಲ. ಏಕೆಂದರೆ ಆತ್ಮಸ್ಥಿತಿಯಲ್ಲಿ ಯಾವ ಕೆಲಸ ಮಾಡಿದರೂ, ಅಲ್ಲಿ ನಮಗೆ ಯಾವ ನೆನಪುಗಳು ಇರುವುದಿಲ್ಲ. ಆದರೆ ಅವರು ಶಾಲು ಹೊದಿಸಿದ್ದು ನೆನಪಾಗುತ್ತದೆ. ಎಷ್ಟು ಜನ ಫೋಟೋಗಳನ್ನು ತೆಗೆದುಕೊಂಡರು ಎನ್ನುವುದು ನೆನಪಾಗುತ್ತದೆ. ಏಕೆಂದರೆ ಅದು ಮನೋಸ್ಥಿತಿ, ಮನಸ್ಸಿನ ಜೊತೆಯಲ್ಲಿರುವ ಸ್ಥಿತಿ. ಆತ್ಮಕ್ಕೆ ಯಾವಾಗಲೂ ವರ್ತಮಾನವೇ. ಮನಸು ಯಾವಾಗಲೂ ಗತಕ್ಕೆ ಆಗಲಿ ಭವಿಷ್ಯತ್ತಿಗೆ ಆಗಲಿ ಹೋಗಿ ಚಿತ್ತದಲ್ಲಿ ಆ ನೆನಪುಗಳನ್ನು ನಿಕ್ಷಿಪ್ತ ಮಾಡಿಕೊಂಡು ಧ್ಯಾನದಲ್ಲಿ ಹೊಂದುತ್ತದೆ. ನಿಕ್ಷಿಪ್ತಗೊಳಿಸುವುದು ಸತ್ಪ್ರವರ್ತನೆಯಲ್ಲ.

ಅದಕ್ಕೆ ಆತ್ಮಾನುಭೂತಿ ಹೊಂದಬೇಕು. ಸತ್ಯವನ್ನು ತಿಳಿದುಕೊಳ್ಳಬೇಕು ಎಂದು ಕೊಂಡಾಗ ನಿತ್ಯವೂ ಸತ್ಸಂಗ ಮಾಡಬೇಕು. ಅಂದರೆ ಸತ್ಯದೊಂದಿಗೆ ಸಂಗಮಿಸಿರಬೇಕು. ಅಂದರೆ ನಿತ್ಯವೂ ಧ್ಯಾನ ಮಾಡಬೇಕು.

ಬಾಹ್ಯದಲ್ಲಿ ಕಣ್ಣು ತೆರೆದಿರುವಾಗ ಸತ್ಪ್ರವರ್ತನೆ.... ಅಂದರೆ ಆತ್ಮಕ್ಕೆ ತೃಪ್ತಿಯಾಗುವ ವರ್ತನೆಯೊಂದಿಗೆ ಇರಬೇಕು. ಅಂದರೆ ಪ್ರೇಮತತ್ವ, ತ್ಯಾಗ ಸೇವೆ ಇವೆಲ್ಲ ನಿಮಗೆ ನೀವು ಪುರೋಗಮನವಾಗಲು ಆತ್ಮತೃಪ್ತಿಯುಂಟು ಮಾಡುವ ವಿಷಯಗಳು.

ಅದಕ್ಕೆ "ಬಾಹ್ಯದಲ್ಲಿ ಸತ್ಪ್ರವರ್ತನೆ, ಅಂತರಂಗದಲ್ಲಿ ಸತ್ಸಂಗ. ಈ ಎರಡು ಇರುವಾಗ ಸತ್ಯಾನುಭೂತಿ ಹೊಂದಲು ಅವಕಾಶವಿರುತ್ತದೆ" ಎಂದು ರಮಣ ಭಗವಾನರು ಹೇಳಿದ್ದಾರೆ.

*** ***



ಅವಿದ್ಯೆ ಎಂದರೆ ಸರಿಯಾದ ಜ್ಞಾನ ಇಲ್ಲದಿರುವುದು. ಅಂದರೆ, ಇರುವುದನ್ನು ಸರಿಯಾಗಿ ಅವಗಾಹನೆ ಮಾಡಿಕೊಳ್ಳದಿರುವುದು, ಅಪಾರ್ಥ ಮಾಡಿಕೊಳ್ಳುವುದು. ಅವಿದ್ಯೆಯಿಂದ ಯಾವುದಾದರೂ ವಿಷಯದ ಮೇಲೆ ಸರಿಯಾದ ಅವಗಾಹನೆ ಇಲ್ಲದಿರುವಾವ, ಅಪಾರ್ಥ ಮಾಡಿಕೊಂಡಾಗ ದುಃಖ ಬರುತ್ತದೆ. ಅವಿದ್ಯೆಯಿಂದಾಗಿ ನಿಮ್ಮ ಸಾಮರ್ಥಕ್ಕೆ ಮೀರಿದ ಕೋರಿಕೆಗಳು ಬರುರುತ್ತಿರುತ್ತದೆ. ಕೋರಿಕೆಗಳಿಂದ ದುಃಖ ಇರುತ್ತದೆ. ಬ್ರಹ್ಮವಿದ್ಯೆ ಅಂದರೆ ಬ್ರಹ್ಮದ ಕುರಿತು ತಿಳಿಸುವ ವಿದ್ಯೆ. ವಿದ್ಯೆ ಎಂದರೆ ಜ್ಞಾನ. ಬ್ರಹ್ಮದ ಕುರಿತು ತಿಳಿಸುವ ವಿದ್ಯೆಯನ್ನು ಪರವಿದ್ಯೆ ಎಂದು, ಪ್ರಾಂಂಚಿಕ ವಿದ್ಯೆಯನ್ನು ಅಪರಾವಿದ್ಯೆ ಎಂದು ಹೇಳಲಾಗಿದೆ.

ನೀವು ಸುಖವಾಗಿ ಇರಬೇಕೆಂದರೆ ಬೇರೆಯವರ ಸುಖವನ್ನು ಬಯಸಬೇಕು. ನೀವು ಹಾಯಾಗಿ ಜೀವಿಸಲು ಬಿಡಬೇಕು. ನೀವು ಸಂತೋಷವಾಗಿ ಇರಬೇಕೆಂದರೆ, ಇತರರ ಸಂತೋಷಕ್ಕೆ ನೀವು ಸಹಕರಿಸಬೇಕು. ಅಪವಿತ್ರತೆ, ಭ್ರಷ್ಟಾಚಾರ, ದುರ್ಗುಣಗಳು ಇರುವವರು ಹಾಯಾಗಿ ಜೀವಿಸಲಾರರು. ಈ ಮೂರು ತೊಲಗಬೇಕೆಂದರೆ, ಧ್ಯಾನ, ಸ್ವಾಧ್ಯಾಯ, ಇರಬೇಕು. ಸುಖ-ಸಂತೋಷ ಒಳ್ಳೆಯ ಜೀವನ ಬೇಕೆಂದರೆ ಈ ಭೂಮಿ ಮೇಲೆ ಯಾವ ಗುಣಗಳು ಅಭ್ಯಾಸಗಳಾಗಿ ಬದಲಾಗಿವೆಯೋ ಅವೆಲ್ಲವನ್ನು ಧ್ಯಾನದೊಂದಿಗೆ ತೊಲಗಿಸಿಕೊಳ್ಳಬೇಕು.

ನಿತ್ಯವೂ ನಮ್ಮ ಶರೀರಕ್ಕೆ ಆಹಾರ ಹೇಗೆ ಅಗತ್ಯವೋ, ಹಾಗೆ ಆತ್ಮಕ್ಕೆ ಆ ಪ್ರಾಣಶಕ್ತಿಯ ಅವಶ್ಯಕತೆ ಅಷ್ಟು ಇದೆ. ಆತ್ಮಜ್ಞಾನಕ್ಕೆ ಭೂಮಿಯ ಮೇಲಿರುವಷ್ಟು ದಿನ ಸಾಧನೆ, ಜ್ಞಾನ ಎರಡರ ಅಗತ್ಯವಿದೆ ಎಂದು ತಿಳಿದುಕೊಳ್ಳಬೇಕು.

ಬ್ರಹ್ಮರ್ಷಿ ತಟವರ್ತಿ ರಾಜ್ಯಲಕ್ಷ್ಮಿ

ರೂ 50/-





**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada • www.meditationeverywhere.org
• www.pssmovement.org

**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀರಾಮಧಾಮ ಧ್ಯಾನಕೇಂದ್ರ,
ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503
ವಿಜಯಲಕ್ಷ್ಮಿ ಎಸ್.ಎನ್ / 8050082689